
ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್


ಡಿಸೆಂಬರ್ 12, 2012 ಪುಟ 20 ರೂ. 14/-

ಕರ್ನಾಟಕ ಕೋಮು ಸೌಹಾರ್ದ ವೇದಿಕೆಗೆ 10 ವರ್ಷ



ಗಣಿ ಲೂಟಿಗೂ ಕೈಯಿಟ್ಟ ಈಶ್ವರಪ್ಪ



ಮಹಾಪ್ರಚಂಡನ ಹತ್ಯೆ

ಮಾರ್ಕೆಟ್ ದೇವಿ ಬಂಟರ ಗ್ಯಾಂಗ್ ವಾರ್ ಶುರು



ಬಿಜೆಪಿ ಡ್ರಾಮಾ ಯಡ್ಡಿ ಮೆಲೋಡ್ರಾಮಾ




ಹರಿ ಚಿತ್ತ



ಉತ್ತರ ಕನ್ನಡದತ್ತ

ಅಂಚಿನಿಂದ

ಡಾ. ವಾಸು ಎಚ್.ವಿ.



'ಸೆಕ್ಯುಲರ್' ಯಡ್ಡಿ ಮತ್ತು 'ಹಿಂದುಳಿದ ವರ್ಗಗಳ ನಾಯಕ' ಬಿಎಸ್‌ಆರ

ಒಂದು ಸಾರಿ ಉಫ್ಹೇ ಅನ್ನಿ

ಕರ್ನಾಟಕದ ಜನರ ಆರೋಗ್ಯದ ದೃಷ್ಟಿಯಿಂದ ಕಳೆದ ವಾರ ಒಂದು ಪತ್ರಿಕಾಗೋಷ್ಠಿ ಮಾಡಲಾಗಿದೆ. ಮೊದಲೇ ಸುದ್ದಿ ಗೊತ್ತಿರದಿದ್ದವರಿಗೆ ದಿಢೀರ್ ಶಾಕ್ ಆಗದಿರಲಿ ಎಂಬ ಮುನ್ನೆಚ್ಚರಿಕೆಯಿಂದ ನಾವೆಲ್ಲರೂ ಗೌರವಿಸುವ ಕೆಲವು ಹಿರಿಯರು ಒಂದು ಸೂಚನೆಯನ್ನು ಆ ಗೋಷ್ಠಿಯಲ್ಲಿ ನೀಡಿದ್ದಾರೆ. "ಡಿ. 5ರಂದು ಪ್ರಜಾಪ್ರಗತಿರಂಗವು ಸಭೆ ಸೇರಿ ಒಂದು ತೀರ್ಮಾನ ಮಾಡಲಿದೆ. ಯಡಿಯೂರಪ್ಪನವರ ಕೆಜೆಪಿಯ ಜೊತೆ ಮೈತ್ರಿಯೋ, ಶ್ರೀರಾಮುಲುವಿನ ಬಿಎಸ್‌ಆರ್ ಜೊತೆ ಮೈತ್ರಿಯೋ ಎಂದು ಅಲ್ಲಿ ತೀರ್ಮಾನಿಸಲಿದ್ದೇವೆ" ಎಂದು ಹೇಳಿದ್ದಾರೆ.


ಪ್ರಜಾಪ್ರಗತಿರಂಗದ ಸಹಭಾಗಿಗಳು ಮತ್ತು ಅದರ ಮುಖಂಡರ ಹಾಲಿ ಒಲವು-ನಿಲುವುಗಳೇನೇ ಇರಲಿ, ಅವರುಗಳಲ್ಲಿ ಬಹುತೇಕರು ಕಳೆದ 3-4 ದಶಕಗಳಿಂದ ಕರ್ನಾಟಕದ ಪ್ರಜಾತಾಂತ್ರಿಕ ಪ್ರಜ್ಞೆಯನ್ನು ವಿಸ್ತರಿಸುವ ಕೆಲಸ ಮಾಡಿದವರು. ಹಲವಾರು ಸಾರಿ ನಿಷ್ಠುರವಾಗಿ ಸತ್ಯದ ಪರ ನಿಂತು ವ್ಯವಸ್ಥೆಯ ವಿರುದ್ಧ ಸಂಘರ್ಷ ನಡೆಸಿದವರು. ಚುನಾವಣಾ ರಾಜಕಾರಣದಲ್ಲಿ ಈ ರಂಗ ಗೆಲುವು ಸಾಧಿಸಿದರೂ, ಸಾಧಿಸದಿದ್ದರೂ ನಮ್ಮ ನಾಡನ್ನು ಕಾಡುತ್ತಿರುವ ಹಲವು ಗಂಭೀರ ಸಮಸ್ಯೆಗಳ ವಿರುದ್ಧದ ಹೋರಾಟದಲ್ಲಿ ನಿಲ್ಲುವವರು ಎಂದೇ ಅವರ ಬಗ್ಗೆ ಗೌರವ. ಆದರೆ ಈಗ ಆ ರಂಗದ ವತಿಯಿಂದ ಜಾರಲು ಆರಿಸಿಕೊಂಡಿರುವ ದಾರಿ ಮಾತ್ರ ಆಘಾತಕಾರಿಯಾದುದು. ಈ ನಿಲುವು ಕೇವಲ ಪ್ರಜಾಪ್ರಗತಿರಂಗದ್ದು ಮಾತ್ರವಾಗಿರದೇ, ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಮಟ್ಟಕ್ಕೆ ಹಲವರಲ್ಲಿ ಚಾಲ್ತಿಗೆ ಬರುತ್ತಿದೆ.


ಮೌಲ್ಯ ಪ್ರಜ್ಞೆಗೆ ಅಪಾಯ

ಈ ನಾಡಿನಲ್ಲಿ ಇಂದು ತಲೆದೋರುತ್ತಿರುವ ಪ್ರಚ್ಛನ್ನ ಅವಕಾಶವಾದದ ಸಂದರ್ಭದಲ್ಲಿ ಎಲ್ಲಾ ಪ್ರಜ್ಞಾವಂತರು ದನಿಯೆತ್ತಬೇಕಿದೆ. ಇಲ್ಲದಿದ್ದರೆ ಅದು ಇದುವರೆಗೆ ಕರ್ನಾಟಕದ ಒಟ್ಟು ಪುರೋಗಾಮಿ ಚಳವಳಿಗಳು ಬೆಳೆಸಿರುವ ಮೌಲ್ಯಪ್ರಜ್ಞೆಯನ್ನೇ ಅಪಾಯಕ್ಕೆ ಈಡುಮಾಡಲಿದೆ.

ಬಿಜೆಪಿಯ ಚುನಾವಣಾ ಸೋಲಿಗೆ ಕಾರಣವಾಗಬಹುದಾದ ಯಾವ ಕೂಟವಾದರೂ ಸರಿ, ಅದರೊಟ್ಟಿಗೆ ಹೋಗುವುದರಲ್ಲಿ ಯಾವುದೇ ನೈತಿಕ ತಪ್ಪಿಲ್ಲ ಎನ್ನುವ ಸಮರ್ಥನೆಯೂ ಕೆಲವರಲ್ಲಿದೆ. ಬಿಜೆಪಿ ಸೋಲುವುದು ದೇಶದ ಹಿತದೃಷ್ಟಿಯಿಂದ ಅತ್ಯಂತ ಅಗತ್ಯ ಎನ್ನುವ ಕಾರಣಕ್ಕೆ, ಕಾಂಗ್ರೆಸ್ ಅಥವಾ ಜೆಡಿಎಸ್‌ನಂತಹ ಪಕ್ಷಗಳಿಗೆ ಬೆಂಬಲಿಸುವುದು ಅನಿವಾರ್ಯ ಎಂಬ ವಾದ ಸಾಕಷ್ಟು ಕಾಲದಿಂದ ಇದೆ. ಸಿಪಿಎಂನ ನಿಲುವು, ಬಿಜೆಪಿ ಮತ್ತು ಕಾಂಗ್ರೆಸ್‌ಅನ್ನು ಸೋಲಿಸಲು ಮಿಕ್ಕ ಪಕ್ಷಗಳು ಎಂತಹವು ಇದ್ದರೂ ಅವುಗಳ ಜೊತೆ ತೃತೀಯವೋ, ಚತುರ್ಥವೋ ಆದ ಒಂದು ರಂಗ ಕಟ್ಟಬೇಕೆಂಬುದಾಗಿದೆ. 80ರ ದಶಕದವರೆಗೆ ಕಾಂಗ್ರೆಸ್‌ಅನ್ನು ವಿರೋಧಿಸುವ ಏಕೈಕ ಅಜೆಂಡಾ ಹೊಂದಿದ್ದ ಹಲವು ಶಕ್ತಿಗಳು ಈ ದೇಶದಲ್ಲಿ ಇದ್ದವು. ಅದು ಆಯಾ ಸಂದರ್ಭದ 'ಜನರ ಪ್ರಧಾನ ಶತ್ರು'ವಿನ ವಿರುದ್ಧದ ನಿಲುವು ಎನ್ನುವುದಕ್ಕಿಂತ ಒಂದು ಗೀಳು ಎಂಬುವಷ್ಟರಮಟ್ಟಿಗೆ ಆಗಿಬಿಟ್ಟಿತ್ತು. ಹಾಗಾಗಿಯೇ ಕಾಂಗ್ರೆಸ್‌ಗಿಂತ ಮಿಗಿಲಾಗಿ ಮತ್ತಷ್ಟು ಪ್ರತಿಗಾಮಿಯಾದ ಬಿಜೆಪಿಯನ್ನೂ ಜಾರ್ಜ್ ಫರ್ನಾಂಡಿಸ್‌ರಂತಹ 'ಪಾರಂಪರಿಕ' ಕಾಂಗ್ರೆಸ್ ವಿರೋಧಿಗಳು ಅಪ್ಪಿಕೊಂಡರು. ತುರ್ತುಸ್ಥಿತಿಯ ಸಂದರ್ಭದಲ್ಲಿ ಆರಂಭವಾದ ಈ ಕೂಡಾವಳಿ ಇಂದು ಎನ್‌ಡಿಎ ರೂಪದಲ್ಲಿ ನಮ್ಮ ಮುಂದಿದೆ.

ಇದರ ಜೊತೆಜೊತೆಗೇ 'ಪರ್ಯಾಯ ರಾಜಕಾರಣ', 'ಜನರ ಕೈಗೆ ಅಧಿಕಾರ' ಇತ್ಯಾದಿಗಳ ಹೆಸರಿನಲ್ಲಿ ಮತ್ತೊಂದು ವಾದವೂ ಚಾಲ್ತಿಗೆ ಬಂತು. ಅದೇನೆಂದರೆ, 'ಎಷ್ಟು ಕಾಲ ಅಂತ ಬಿಜೆಪಿಗೆ ವಿರುದ್ಧ ಕಾಂಗ್ರೆಸ್ಸಿಗೋ ಅಥವಾ ಮತ್ತೊಂದಕ್ಕೋ ಬೆಂಬಲಿಸುವುದು? ಅದರ ಬದಲಿಗೆ ಜನರ ಪರವಾಗಿ ನಾವೇ ಇನ್ನೊಂದು ಪಕ್ಷ ಕಟ್ಟಬೇಕಲ್ಲವೇ?' ಎಂಬುದು. ಈ ವಾದವೇ ಇಂದು, ನಾವೇ ಎನ್ನುವುದನ್ನು 'ನಮ್ಮಂತಹವರು' ಎಂತಲೂ, 'ನಾನೇ' ಅಂತಲೂ ಆಗುವ ಮಟ್ಟಕ್ಕೆ ಬಲಿತು ನಿಂತಿದೆ.





ಹಾಗಾಗಿ ಬಿಜೆಪಿಯನ್ನು ಸೋಲಿಸಬೇಕು, ಕಾಂಗ್ರೆಸ್ ಅಥವಾ ಜನತಾದಳಗಳು ನಮ್ಮನ್ನು ಕೇರ್ ಮಾಡಲ್ಲ, ಹಾಗಾಗಿ ಬರಗೆಟ್ಟು ನಿಂತು ನಮ್ಮನ್ನು ಆತುಗೊಳ್ಳಲು ಸಾಧ್ಯವಿರುವ ಇನ್ನಾವ ಶಕ್ತಿಯಾದರೂ ಅದರೊಟ್ಟಿಗೆ ಹೋಗಬಹುದು ಎಂಬುವಲ್ಲಿಗೆ ಈ ವಾದಸರಣಿ ತಲುಪಿವೆ. ಆದ್ದರಿಂದಲೇ ಕೆಜೆಪಿ ಮತ್ತು ಬಿಎಸ್‌ಆರ್ ಪಕ್ಷಗಳೊಟ್ಟಿಗೂ ಹೋಗಬಹುದು ಎನ್ನುವ ನಿರ್ಲಜ್ಜ ಸ್ಥಿತಿ ಬಂದಿದೆ. ಬಿಜೆಪಿ ಸರ್ಕಾರದ ಈ ಅವಧಿಯ ಮುಖ್ಯ ಲಕ್ಷಣಗಳಾಗಿ ನಾವು ಗುರುತಿಸಬಹುದಾದ ಅಖಂಡ ಭ್ರಷ್ಟಾಚಾರ, ಅನೈತಿಕತೆ, ಪ್ರಜಾತಾಂತ್ರಿಕ ಮೌಲ್ಯಗಳ ಕುಸಿತ, ಜಾತಿ ಧ್ರುವೀಕರಣ, ಭೂಸಂಪತ್ತಿನ ಲೂಟಿ ಮತ್ತು ಕೋಮುವಾದ ಇವೆಲ್ಲದರಲ್ಲಿ ಯಡಿಯೂರಪ್ಪ ಮತ್ತು ಶ್ರೀರಾಮುಲುವಿಗೆ ಯಾವುದರಲ್ಲಿ ವಿನಾಯಿತಿ ಕೊಡಬಹುದು? ಮಿಕ್ಕ ಯಾವುದರಲ್ಲೂ ವಿನಾಯಿತಿ ಸಾಧ್ಯವೇ ಇಲ್ಲ ಎಂಬುದರಲ್ಲಿ ಅನುಮಾನವಿಲ್ಲ, ಆದರೆ ಕೋಮುವಾದದ ವಿಚಾರದಲ್ಲಿ ಅಂತಹ ವಿನಾಯಿತಿ ಕೊಡಬಹುದು ಅಥವಾ ಕೊಡಬೇಕು ಎಂದು ನಂಬಿಸಲು ಪ್ರಯತ್ನ ಪಡಲಾಗುತ್ತಿದೆ.

ಕೋಮುವಾದದ ವಿಚಾರಕ್ಕೆ ನಂತರ ಬರೋಣ. ಆದರೆ ಮೇಲೆ ಹೇಳಲಾಗಿರುವ ಉಳಿದ ಐದು ಅಂಶಗಳ ಪ್ರತಿರೂಪವಾಗಿ ಇಂದು ನಮ್ಮ ಮುಂದೆ ಯಾರಾದರೂ ಇದ್ದರೆ ಅದು ಯಡಿಯೂರಪ್ಪ ಮತ್ತು ರಾಮುಲುವೇ ಆಗಿದ್ದಾರೆ. ಅವುಗಳಿಗೆ ನಾವು ಕೊಡಬೇಕಾದ ತೂಕ ಎಷ್ಟು? ಅವು ಕರ್ನಾಟಕದ ಪ್ರಜಾತಾಂತ್ರಿಕ ಮೌಲ್ಯವನ್ನು ತೀವ್ರವಾಗಿ ಕುಗ್ಗಿಸಿರುವ ಅಂಶಗಳಾಗಿವೆ. ಮಾನವೀಯವಾದ, ಆರೋಗ್ಯಕರವಾದ ಸಮಾಜ ನಿರ್ಮಾಣ ಬಯಸುವ ಯಾರಾದರೂ ಇದರೊಂದಿಗೆ ರಾಜಿ ಮಾಡಿಕೊಳ್ಳಲು ಹೇಗೆ ಸಾಧ್ಯ? ಕೋಮುವಾದವು ತಮ್ಮನ್ನೇ ನೇರವಾಗಿ ಕಾಡದಿದ್ದಾಗ, ಜನಸಾಮಾನ್ಯರು ಬಿಜೆಪಿ ಹಾಗೂ ಇತರ ಪಕ್ಷಗಳ ನಡುವೆ ವ್ಯತ್ಯಾಸವನ್ನು ಎಣಿಸದಿರಲು ಈ ಅಂಶಗಳೇ ಕಾರಣವಾಗಿವೆ. ಹಾಗಿದ್ದ ಮೇಲೆ ಕಾಂಗ್ರೆಸ್ ಮತ್ತು ಜನತಾದಳಗಳ ಬೇರೆ ಬೇರೆ ಗುತ್ತೇದಾರರನ್ನು ಮೀರಿಸುವ ರೀತಿಯಲ್ಲಿ ಲೂಟಿ ಮಾಡಿರುವ, ಅತ್ಯಂತ ನಿರ್ಲಜ್ಜತೆಯಿಂದ ಕಳೆದ ನಾಲ್ಕೈದು ವರ್ಷಗಳಲ್ಲಿ ನಡೆದುಕೊಂಡಿರುವ ಇವರೀರ್ವರನ್ನು ಭಿನ್ನ ಎಂದು ಪರಿಗಣಿಸುವುದೂ ನಿರ್ಲಜ್ಜತೆಯೇ ಆಗಿದೆ.

ವ್ಯಕ್ತಿತ್ವವನ್ನೇ ಭ್ರಷ್ಟಗೊಳಿಸುವ ಮೇಲಿನ ಅಂಶಗಳು ಒಬ್ಬ ವ್ಯಕ್ತಿಯನ್ನು ಕೋಮುವಾದಕ್ಕೂ ಹತ್ತಿರವಾಗಿಸುತ್ತದೆ. ಕಳೆದ 20 ವರ್ಷಗಳ ಕರ್ನಾಟಕದ ರಾಜಕಾರಣದಲ್ಲಿ ಬಿಜೆಪಿಯ ಬೆಳವಣಿಗೆಯೇ ಅದಕ್ಕೆ ಸಾಕ್ಷಿ. ಮೂಲತಃ ಮುಸ್ಲಿಂ ವಿರೋಧಿ ಹಿಂದುತ್ವದ ಪ್ರತಿಪಾದಕರಲ್ಲದ, ಆದರೆ ಅತ್ಯಂತ ಭ್ರಷ್ಟರೂ, ಅವಕಾಶವಾದಿಗಳೂ, ಫ್ಯೂಡಲ್ ಮನಸ್ಥಿತಿಯವರೂ ಆದಂತಹ ಹಲವಾರು ರಾಜಕಾರಣಿಗಳು ಮತ್ತು ಕಳ್ಳ ಉದ್ದಿಮೆಗಳಲ್ಲಿ ದುಡ್ಡು ದುಡಿದಿದ್ದವರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿಗೆ ಸೇರಿದರು. ಇಂದು ಕರ್ನಾಟಕದ ಯಾವುದೇ ಜಿಲ್ಲೆಗೆ ಹೋದರೂ ನಿಮಗೆ ಇಂತಹ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಆದರೆ 'ಎಷ್ಟೇ ಭ್ರಷ್ಟರು ಮತ್ತು ಲೂಟಿಕೋರರಾದರೂ ಜನಾರ್ದನ ರೆಡ್ಡಿ, ಶ್ರೀರಾಮುಲು, ಬಚ್ಚೇಗೌಡ, ಸೋಮಣ್ಣ, ಕತ್ತಿ, ಕೋರೆ, ಬೊಮ್ಮಾಯಿ ಇತ್ಯಾದಿಗಳು ತಮ್ಮ ಕ್ಷೇತ್ರಗಳಲ್ಲಿ ಮುಸ್ಲಿಮರ ಜೊತೆ ಚೆನ್ನಾಗಿಯೇ ಇದ್ದಾರೆ' ಎಂದು ಹೇಳುವವರು ಇದ್ದಾರೆ. ಹಾಗಾದರೆ ಈ ಅವಧಿಯಲ್ಲಿ ಬಿಜೆಪಿ ಹಾಗೂ ಸಂಘಪರಿವಾರವು ನಡೆಸಿದ ಫ್ಯಾಸಿಸ್ಟ್ ಕೃತ್ಯಗಳನ್ನು ಇವರಲ್ಲಿ ಒಬ್ಬರಾದರೂ ಖಂಡಿಸಿದರೇ? ಅಥವಾ ತಾವೂ ಸಾಧ್ಯವಾದಷ್ಟು ಸಹಕರಿಸಿದರೇ?

ಯಡಿಯೂರಪ್ಪನಂತೂ ಅದರ ಅಪರಾವತಾರನಾಗಿದ್ದದ್ದು ಎಲ್ಲರಿಗೂ ಗೊತ್ತೇ ಇದೆ. ಆತ ಹುಬ್ಬಳ್ಳಿಯಲ್ಲಿ ಮುಸ್ಲಿಮರ ಸಮಾವೇಶ ಮಾಡಿದರೂ, ಬಿಜೆಪಿಯ ಸೋಲಿಗೆ ಕಾರಣನಾದರೂ ಆತನೊಳಗಿನ ವಿಷ ಕಡಿಮೆಯಾಗಿದೆಯೆಂದು ನಂಬಲು ಸಾಧ್ಯವಿಲ್ಲ, ವ್ಯಕ್ತಿಗತ ಅಧಿಕಾರದಾಹವು, ದಶಕಗಳಾರಭ್ಯ ಬೆಳೆಸಿಕೊಂಡು ಬಂದ ನಂಜನ್ನು ಮುಸುಕುಗೊಳಿಸಿದೆಯಷ್ಟೇ.

ಅನೈತಿಕತೆಗಳಿಗೆ ಅವಕಾ

ಸಮಾಜದಲ್ಲಿ ಮತ್ತು ಚುನಾವಣಾ ರಾಜಕಾರ ಜಾತಿ ಮತ್ತು ಹಣಕಾಸಿನ ಅಟ್ಟಹಾಸವನ್ನು ಪ್ರ ನಿಜವಾದ ಪ್ರಜಾತಂತ್ರವನ್ನು ಕಟ್ಟಲು ಸಾಧ್ಯವಿಲ್ಲ ಪ್ರತಿಪಾದಿಸುತ್ತಿದ್ದವರು, ಇಂದು 'ಸಂಪನ್ಮೂ ಕ್ರೋಢೀಕರಣ'ಕ್ಕಾಗಿ ಇವರುಗಳ ಜೊತೆ ಸೇರಬೇಕ ಹೇಳುತ್ತಿದ್ದಾರೆ. ಹೇಗಾದರೂ ಸರಿ, 'ನಮ್ಮಂತಹ ಕೆಲ ವಿಧಾನಸೌಧದೊಳಗೆ ಹೋದರೆ ಏನೆಲ್ಲಾ ಮಾಡಬಹ ಎಂದು ಹೇಳುತ್ತಿರುವುದರ ಅರ್ಥವೇ ಅವಕಾಶವಾದವನ್ನು ಈ ಪರಿ ಕ್ಷಮಿಸುವುದು ಇನ್ನೆ ಅನೈತಿಕತೆಗಳಿಗೆ ಅವಕಾಶ ಮಾಡಿಕೊಡಬಹ ಎಂಬುದನ್ನು ನೆನೆದರೆ ಆತಂಕವಾಗುತ್ತದೆ.

ಜಾತಿ ಧ್ರುವೀಕರಣವನ್ನು ಒಂದು ಸಕಾರ ಅಂಶವನ್ನಾಗಿ ನೋಡಬೇಕೆನ್ನುವವರಿದ್ದಾರೆ. ಅದರ ಅಲ್ಪಸಂಖ್ಯಾತ, ದಲಿತ, ಹಿಂದುಳಿದ ಜಾತಿಗಳು ಅ ಧ್ರುವೀಕರಣಕ್ಕೆ ಒಳಗಾದರೆ ಒಳ್ಳೆಯದು ಅಭಿಪ್ರಾಯ ಸಾಕಷ್ಟು ವ್ಯಾಪಕವಾಗಿಯೇ ಇದೆ. ಅ ಸತ್ಯವಿರುವಂತೆಯೇ ಸಮಸ್ಯೆಯೂ ಇದೆ. ದ ಸಮುದಾಯದ ಸ್ವಾಭಿಮಾನಕ್ಕೆ ಮತ್ತು ಒಂದು ರೀ ಧ್ರುವೀಕರಣಕ್ಕೆ ಕಾರಣವಾದ ದಲಿತ ಚಳವಳಿ ಇ ಇದ್ದರೆ ಇಂದು ಕರ್ನಾಟಕದ ಮತ್ತು ದೇಶದ ಸಮುದಾಯ ಏನನ್ನು ಪಡೆದುಕೊಳ್ಳಲು ಸಾಧ್ ದೆಯೋ, ಅದು ಸಾಧ್ಯವಿರಲಿಲ್ಲ, ಆದರೆ ಇದಕ್ಕೆ ಒ ಮಿತಿಯೂ ಇದೆ. ಇಂತಹ ಧ್ರುವೀಕರಣವು ತ ಆದ ಅಪಾಯಗಳನ್ನೂ ಎದುರಿಸಬೇಕಾಗುತ್ತದೆ. ಅದು ಜಾತಿಗಳು ಪ್ರಬಲವಾಗಿದ್ದಷ್ಟೂ, ಅವುಗಳ ಧ್ರುವೀ ಹೆಚ್ಚೆಚ್ಚು ಅಪಾಯಕಾರಿಯಾಗುತ್ತಾ ಹೋಗುತ್ತದೆ. ಧ್ರುವೀಕರಣಗಳು ವರ್ಗ ಪ್ರಶ್ನೆ, ಭ್ರಷ್ಟಾಚಾರದ ನೈತಿಕ ಮೌಲ್ಯಗಳು ಮತ್ತು ಪ್ರಜಾತಾಂತ್ರಿಕ ಮೌ ಪ್ರಶ್ನೆಗಳಿಂದ ದೂರ ಸರಿದು ಬಿಟ್ಟರೆ ಏನಾಗಬಹು ಅದು ಈ ವಿದ್ಯಮಾನದಲ್ಲೂ ಕಂಡುಬರುತ್ತಿದೆ.

ಇನ್ನು ಶ್ರೀರಾಮುಲು ಪಕ್ಷದ ಅಧಿಕೃತ ಪ್ರತಿನಿಧಿಯಾಗದಿದ್ದಾಗಲೇ ಸಿ.ಎಸ್.ದ್ವಾರಕಾನಾಥ್ ಅವರು ಟಿವಿ ಚರ್ಚೆಯಲ್ಲಿ ಇಂತಹ ಒಂದು ಸಾಧ್ಯತೆಯ ಸೂಚನೆಯನ್ನು ಕೊಟ್ಟಿದ್ದರು. ಶ್ರೀರಾಮುಲುವನ್ನು ಸಮರ್ಥಿಸಿಕೊಳ್ಳುತ್ತಿದ್ದ ಅವ ನಿರೂಪಕ 'ಹಾಗಾದರೆ ನಾಳೆ ನೀವು ಯಡಿಯೂರಪ್ಪನವರು ಹೊಸ ಪಕ್ಷ ಮಾಡಿದರೆ ಅವರೊಂದಿಗೂ ಸೇರುತ್ತೀರಾ?' ಎಂದು ಕೇಳಿದ್ದರ 'ರಾಜಕಾರಣದಲ್ಲಿ ಯಾವುದನ್ನೂ ನಿರಾಕರಿಸಲಾಗುವುದಿಲ್ಲ' ಎಂಬಂತಹ ಮಾತು ದ್ವಾರಕಾನಾಥ್ ಅವರದ್ದಾಗಿತ್ತು. ಅದು ಅಕಸ್ಮಾತ್ತಾ ಬಾಯಿ ತಪ್ಪಿ ಬಂದಿರಬಹುದು ಎಂದು ಭಾವಿಸಿದ್ದವರಿಗೆ ಇಂದು ಪ್ರಜಾಪ್ರಗತಿರಂಗದ ಹೇ ವಾಸ್ತವದ ಅರಿವು ಮೂಡಿಸಿದೆ. ಶ್ರೀರಾಮುಲು ಜೊತೆಗೆ ಹೋದವರಿಗೆ ಯಡಿಯೂರಪ್ಪನ ಜೊತೆ ಹೋಗುವುದು ಸಮಸ್ಯೆಯಲ್ಲ, ಯಡಿಯೂರಪ್ಪನ ಜೊತೆಗೆ ಹೋದವರಿಗೆ...?

ಒಂದು ವೇಳೆ ಗಡ್ಕರಿಗೂ, ಮೋದಿಗೂ ಇರ ಜಗಳ ಜೋರಾಗಿ ಪ್ರಧಾನಮಂತ್ರಿ ಪಟ್ಟಕ್ಕಾಗಿ ಮೋ ಬಿಜೆಪಿಯನ್ನು ತೊರೆದರೆ ಆಗ ಮೋದಿಯನ್ನು ಸೆಕ್ಯುಲರ್ ಎನ್ನಬಹುದೇ? ಅಥವಾ ಸಂಘಪರಿವಾ ನೇರ ನಿಯಂತ್ರಣದಲ್ಲಿರುವ ಬಿಜೆಪಿಗಿಂತ, ಅದರಿಂ ಹೊರಗೆ ಬಂದಿರುವ ಹಿಂದುಳಿದ ವರ್ಗಗಳ ನಾ ಮೋದಿ ಪರವಾಗಿಲ್ಲ ಎಂದು ತಿಳಿಯಬಹುದೇ? ಹೇಗೂ ಮೋದಿ ಈಗಾಗಲೇ ಒಂದು ಸುತ್ತು ಸದ್ಭಾವನಾ ಸಮಾವೇಶಗಳನ್ನು ಮಾಡಿ ಮುಗಿಸಿದಾ

ಆಳ್ವಾಸ್ ನುಡಿಸಿರಿ



ಆತಿಥ್ಯ-
ರುಚಿಯಾದ ಊಟ ಬಡಿಸಿರಿ

ಅಚ್ಚುಕಟ್ಟುತನ-
ದಿನಕ್ಕೆ ಮೂರು ಸಲ ಗುಡಿಸಿರಿ

ಶಿಸ್ತು-
ವಿದ್ಯಾರ್ಥಿಗಳನ್ನು ಹಗಲಿರುಳು ದುಡಿಸಿರಿ

ವೈಭವ-
ಅತಿಥಿಗಳಿಗೆ ಮೈಸೂರು ಪೇಟಾ ತೊಡಿಸಿರಿ

ಸೌಂದರ್ಯ-
ನೀರೆಯರಿಗೆ ಯೂನಿಫಾರ್ಮ್ ಸೀರೆ ಉಡಿಸಿರಿ

ಔದಾರ್ಯ-
ಭತ್ಯೆ, ಭಕ್ಷೀಸು ಕೈತುಂಬಾ ಕೊಡಿಸಿರಿ

ಸಮಯಪ್ರಜ್ಞೆ-
ಹೆಚ್ಚು ಮಾತಾಡಿದರೆ ವೇದಿಕೆಯಿಂದ ಓಡಿಸಿರಿ

ಸಾಮರಸ್ಯ-
ಬಿಷಪ್‌ರನ್ನು ಕರೆಸಿ ಸನ್ಮಾನದ ಶಾಲು ಹೊದಿಸಿರಿ

ರಸಿಕತೆ-
ಕವಿತೆಗಳನ್ನು ಹಾಡಿಸಿರಿ, ಚಿತ್ರಗಳನ್ನು ಬಿಡಿಸಿರಿ


ಶಿಫಾರಸು-
ಅನಂತಮೂರ್ತಿಯವರಿಂದ ಭಾಷಣ ಮಾಡಿಸಿ

ಹೊಗಳಿಕೆಯ ಹೂಗಳನ್ನು ಸಂಘಟಕರಿಗೆ ಮು
ವೆಲ್‌ಕಮ್ ಟು ಆಳ್ವಾಸ್ ನುಡಿಸಿರಿ!

- ಶಶಿಧರ ಹೆಮ
ಕುಂದ

ಚುನಾವಣೆ ಮತ್ತು ಪ್ರಜಾತಂತ್ರದ ಅಧಃಪತನ

ನಮ್ಮ ಅಭೂತಪೂರ್ವ ಪ್ರಜಾಪ್ರಭುತ್ವದಲ್ಲಿ ಓರ್ವನ ಏನೆಲ್ಲಾ ಇದ್ದರೂ ಹಣಬಲ ಒಂದು ಇಲ್ಲದಿದ್ದರೆ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು ...ಧ್ಯ ಎಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. ಅಷ್ಟೇ ... ಭ್ರಷ್ಟ ಉದ್ಯಮಿಗಳೇ ಭ್ರಷ್ಟ ರಾಜಕಾರಣಿಗಳಿಗೆ ... ನೀಡಿ ಅವರನ್ನು ಚುನಾವಣೆಗಳಲ್ಲಿ ಗೆಲ್ಲಿಸುತ್ತಾರೆ ...ವಾ ತಾವೇ ನಿಂತು ಗೆಲ್ಲುತ್ತಾರೆಂಬುದೂ ಈಗ ...ದವಾಕ್ಯದಂತಾಗಿದೆ.



...ಇಂತಹ ಪರಿಸ್ಥಿತಿಯಲ್ಲಿ ಭ್ರಷ್ಟಾಚಾರದ ವಿರುದ್ಧ ...ಹೋರಾಡುತ್ತಿರುವ ಅರವಿಂದ್ ಕೇಜ್ರಿವಾಲ್ ಎಂಬಾತನ ...ತನ 'ಆಮ್ ಆದ್ಮಿ ಪಕ್ಷ' ಅದು ಹೇಗೆ ಚುನಾವಣೆಯಲ್ಲಿ ...ಸುತ್ತದೆ? ಹಣವನ್ನು ಎಲ್ಲಿಂದ ಸಂಗ್ರಹಿಸುತ್ತದೆ? ಅದಕ್ಕೆ ... ಕೊಡುವವರು ಯಾರು? ಎಂಬ ಪ್ರಶ್ನೆಗಳು ...ಜವಾಗಿಯೇ ಎದ್ದಿದ್ದವು. ಆದರೆ ಎಲ್ಲರನ್ನು ...ಚ್ಚರಿಪಡಿಸುವಂತೆ ಮೊನ್ನೆ ಕೇವಲ ಆರು ಗಂಟೆಗಳಲ್ಲಿ ...ಮ್ ಆದ್ಮಿ ಪಕ್ಷವು ಬರೋಬ್ಬರಿ ಒಂದು ಕೋಟಿ, ...ಡು ಲಕ್ಷ, ಮೂವತ್ತು ನಾಲ್ಕು ಸಾವಿರ ರೂಪಾಯಿಗಳ ...ಣಿಗೆಯನ್ನು ಸಂಗ್ರಹಿಸಿತು. "ಪರವಾಗಿಲ್ಲವೇ? ಕೇಜ್ರಿವಾಲನ ...ಕ್ಕೆ ಇಷ್ಟೊಂದು ಹಣವನ್ನು ಕೊಡುವವರ ನೆರವೂ ...!" ಎಂದು ಅಚ್ಚರಿಗೊಂಡವರಲ್ಲಿ ಅನಂತ್ ರಂಗಸ್ವಾಮಿ ...ಎಂಬುವವರೂ ಒಬ್ಬರು. ಆದರೆ ಈ ಕುರಿತು ...ಗಸ್ವಾಮಿಯವರು ಒಂದಿಷ್ಟು ಕೆದಕಿ ನೋಡಿದಾಗ ...ಮಾಷೆಯೊಂದು ಗೋಚರಿಸಿತು.

ಈಗ ಎಲ್ಲರಿಗೂ ಗೊತ್ತಿರುವಂತೆ ಆಮ್ ಆದ್ಮಿ ಪಕ್ಷದಲ್ಲಿ ...ಜ್ರಿವಾಲರಿಗೆ ಬೆನ್ನೆಲುಬಾಗಿ ನಿಂತಿರುವವರಲ್ಲಿ ಪ್ರಶಾಂತ್ ...ಭೂಷಣ್ ಎಂಬುವವರು ಪ್ರಮುಖರು. ಸ್ವತಃ ಖ್ಯಾತ ...ಕೀಲರಾದ ಪ್ರಶಾಂತ್ ಅವರು ಮಾಜಿ ಕೇಂದ್ರ ಮಂತ್ರಿ ...ಶಾಂತಿ ಭೂಷಣ್ ಅವರ ಪುತ್ರ ಕೂಡ ಹೌದು. ...ಭ್ರಷ್ಟಾಚಾರದ ವಿರುದ್ಧ ತಮ್ಮ ಮಗ ಮತ್ತು ಅವರ ...ಗಡಿಗರು ನಡೆಸುತ್ತಿರುವ ಆಂದೋಲನಕ್ಕೆ ಬೆಂಬಲವಾಗಿ ...ನ್ನೆ ಶಾಂತಿ ಭೂಷಣ್ ತಮ್ಮ ಸ್ವಂತ ಗಳಿಕೆಯಿಂದ ...ಒಂದು ಕೋಟಿ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದರು. ಭೂಷಣ್ ಅವರು ಕೊಟ್ಟಿದ್ದ ಈ ಒಂದು ಕೋಟಿ ರೂಪಾಯಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ತಮ್ಮ ಪಕ್ಷಕ್ಕೆ 1,02,34,000 ರೂಪಾಯಿಗಳನ್ನು ಜನ ಕೊಟ್ಟಿದ್ದಾರೆ ಎಂದೇ ಕೇಜ್ರಿವಾಲ್ ಘೋಷಿಸಿದ್ದರು.

ಇದನ್ನು ಕುರಿತು ರಂಗಸ್ವಾಮಿಯವರು ಹೀಗೆ ತಮಾಷೆ ಮಾಡಿದರು: "ಒಂದಾನೊಂದು ಕಾಲದಲ್ಲಿ ಉದ್ಯಮಿಯೊಬ್ಬ ಹೊಸ ಬ್ರಾಂಡಿನ ಶೂ ಪಾಲಿಶ್ ಅನ್ನು ಮಾರುಕಟ್ಟೆಗೆ ಪರಿಚಯಿಸಿದ. ಮೊದಲ ದಿನ ಒಂದು ಡಬ್ಬಾ ಶೂ ಪಾಲಿಶ್ ಮಾರುವುದರಲ್ಲಿ ಆತ ಯಶಸ್ವಿಯಾದ. ಎರಡನೆ ದಿನ ಎರಡು ಡಬ್ಬಾಗಳನ್ನು ಮಾರಿದ. ಮೂರನೆ ದಿನ ದಿನಪತ್ರಿಕೆಯೊಂದರಲ್ಲಿ ಆ ಉದ್ಯಮಿ ಜಾಹೀರಾತೊಂದನ್ನು ಪ್ರಕಟಿಸಿದ. ಆ ಜಾಹೀರಾತಿನಲ್ಲಿ 'ನನ್ನ ಹೊಸ ಬ್ರಾಂಡಿನ ಶೂ ಪಾಲಿಶ್ ಮಾರಾಟ ಒಂದೇ ದಿನದಲ್ಲಿ ದ್ವಿಗುಣಗೊಂಡಿತು' ಎಂದು ಘೋಷಿಸಿದ. ಆತ ಜಾಹೀರಾತಿನಲ್ಲಿ ಹೇಳಿದ್ದು ಅಪ್ಪಟ ಸತ್ಯವಾಗಿತ್ತು. ಸತ್ಯವಲ್ಲದೆ ಬೇರೇನೂ ಅದರಲ್ಲಿರಲಿಲ್ಲ. ಹೇಗಿದ್ದರೂ ಜಾಹೀರಾತಿನ ವಲಯದಲ್ಲಿ ಹೀಗೆ ಸತ್ಯವನ್ನು ತಿರುಚುವುದು ಸಾಮಾನ್ಯವಾದ್ದರಿಂದ ಇದರ ನೈತಿಕತೆ ಕುರಿತು ಹೆಚ್ಚು ಚರ್ಚೆ ನಡೆಯಲಿಲ್ಲ. ಈಗ ಕೇಜ್ರಿವಾಲರ ಆಮ್ ಆದ್ಮಿ ಪಕ್ಷ ತಾನು ಸಾರ್ವಜನಿಕರಿಂದ ಸಂಗ್ರಹಿಸಿದ ದೇಣಿಗೆಯನ್ನು ಕುರಿತು ಇದೇರೀತಿ ಸತ್ಯವನ್ನು ತಿರುಚಿದಂತೆ ಕಾಣಿಸುತ್ತಿದೆ. ರಾಜಕೀಯ ವಲಯದಲ್ಲೂ ಜಾಹೀರಾತಿನ ಜಗತ್ತಿನಲ್ಲಿ ಮಾಡುವಂತೆ ಸತ್ಯವನ್ನು ತಿರುಚಲಾಗುತ್ತದೆ. ಆದರೆ ವಾಸ್ತವವೇನೆಂದರೆ ಚುನಾವಣೆಗಳಲ್ಲಿ ಗೆಲ್ಲಲು ಹೀಗೆ ಸತ್ಯವನ್ನು ತಿರುಚುವ ಕಲೆಯೊಂದಿಗೆ 2,34,000 ರೂಪಾಯಿಗಳಿಗಿಂತಲೂ ಹೆಚ್ಚು ಹಣ ಬೇಕಾಗುತ್ತದೆ!"


ಇವತ್ತು ಒಂದು ತಾಲೂಕು ಪಂಚಾಯತಿ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಸ್ಪರ್ಧಿಸಲೂ ಎರಡೂ ಕಾಲು ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೇಜ್ರಿವಾಲರು ಅದು ಹೇಗೆ ದೆಹಲಿಯಲ್ಲಿರುವ ಸಂಸತ್ತು ಭವನವನ್ನು ಆಕ್ರಮಿಸುವ ಕನಸನ್ನು ಕಾಣುತ್ತಿದ್ದಾರೋ...

****

ಇತ್ತೀಚೆಗೆ ದೆಹಲಿಯ ಹೊರವಲಯದಲ್ಲಿರುವ ನೋಯಿಡಾ ಎಂಬ ಪ್ರದೇಶದಲ್ಲಿ ಪಾಂಟಿ ಚಡ್ಡಾ ಮತ್ತು ಹರ್ದೀಪ್ ಚಡ್ಡಾ ಎಂಬ ಸಹೋದರರು ಕೊಲೆಯಾದರು. ಇವರಿಬ್ಬರು ಆಸ್ತಿಗಾಗಿ ಕಿತ್ತಾಟ ನಡೆಸುತ್ತಿದ್ದರಿಂದ ಪರಸ್ಪರ ಗುಂಡು ಹಾರಿಸಿ ಸತ್ತುಹೋದರೆಂದು ಆರಂಭದಲ್ಲಿ ತರ್ಕಿಸಲಾಗಿತ್ತು. ಆದರೀಗ ಅವರ ಕೊಲೆಗಳಿಗೆ ಕಾರಣ ಮೂರನೇ ಯಾವುದೋ ಗುಂಪು ಇರಬಹುದು ಎಂದು ಪೊಲೀಸರು ತರ್ಕಿಸುತ್ತಿದ್ದಾರೆ.

ಮುಖ್ಯವಾದ ವಿಷಯ ಅದಲ್ಲ. ಯಾವುದು ಮುಖ್ಯವೆಂದರೆ ನಮ್ಮ ಭ್ರಷ್ಟ ವ್ಯವಸ್ಥೆಯಲ್ಲಿ ಹೇಗೆ ಪಾಂಟಿ ಚಡ್ಡಾ ತರಹದವರು ರಾಜಕಾರಣಿಗಳ ನೆರವಿನಿಂದ ರಾತ್ರೋರಾತ್ರಿ ಕೋಟ್ಯಾಧಿಪತಿಗಳಾಗುತ್ತಾರೆ ಮತ್ತು ರಾಜ್ಯದ ಬೊಕ್ಕಸಕ್ಕೇ ಕನ್ನ ಹಾಕುತ್ತಾರೆ ಎಂಬುದು.

ಈ ಪಾಂಟಿ ಚಡ್ಡಾ ಕೆಲವು ವರ್ಷಗಳ ಹಿಂದಿನ ತನಕ ಉತ್ತರ ಪ್ರದೇಶದ ಪುಟ್ಟ ನಗರದಲ್ಲಿ ತನ್ನ ತಂದೆಯ ಜೊತೆ ಒಂದು ಸಣ್ಣ ಬಾರ್ ಮುಂದೆ ಚೌಚಾ ಮಾರುತ್ತಿದ್ದವನು. ಆದರೆ ಯಾವಾಗ ಆತನ ತಂದೆಗೆ ಒಂದು ಬಾರ್ ನಡೆಸುವ ಪರ್ಮಿಟ್ ಸಿಕ್ಕಿತೋ ಆಗ ಪಾಂಟಿ ಚಿಗುರಿಕೊಳ್ಳಲಾರಂಭಿಸಿದ. ಕೆಲವೇ ವರ್ಷಗಳಲ್ಲಿ ರಾಜಕಾರಣಿಗಳ ಗೆಳೆತನ ಸಂಪಾದಿಸಿದ. ಈತ ಎಂತಹ ಚಾಣಾಕ್ಷನೆಂದರೆ ಮಾಯಾವತಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಿದ್ದಾಗ ಆ ರಾಜ್ಯದ ಇಡೀ ಹೆಂಡೋದ್ಯಮ ಪಾಂಟಿಯ ಕೈವಶವಾಗುವಂತೆ ಆಕೆ ನೋಡಿಕೊಂಡಳು. ಇದು ನಡೆದದ್ದು ಕೇವಲ ಮೂರು ವರ್ಷಗಳ ಹಿಂದೆ. ಹೀಗೆ ಮಾಯಾವತಿಯ ಕೃಪೆಯಿಂದ ಉತ್ತರ ಪ್ರದೇಶದಲ್ಲಿ ಹೆಂಡೋದ್ಯಮದ ಚಕ್ರಾಧಿಪತಿ ಆದ ಪಾಂಟಿ ಅದೆಷ್ಟು ವೇಗವಾಗಿ ಬೆಳೆದನೆಂದರೆ ಒಂದು ವರ್ಷದಲ್ಲೇ ರಿಯಲ್ ಎಸ್ಟೇಟ್ ವ್ಯವಹಾರ, ಬಾಲಿವುಡ್ ಸಿನಿಮಾ ನಿರ್ಮಾಣ, ಶಾಪಿಂಗ್ ಮಾಲ್, ಪೇಪರ್ ಮಿಲ್ಲು, ಸಕ್ಕರೆ ಫ್ಯಾಕ್ಟರಿ ಇತ್ಯಾದಿಗಳಿಗೂ ತನ್ನ ಕೈ ಚಾಚಿದ. ಮೊನ್ನೆ ಆತ ಸತ್ತಾಗ ಆತನ ಒಟ್ಟು ಸಂಪತ್ತಿನ ಮೌಲ್ಯ ಬರೋಬ್ಬರಿ ಹತ್ತು ಬಿಲಿಯನ್ ಡಾಲರ್‌ನಷ್ಟಿತ್ತು! ಮೊದಲೇ ಹೇಳಿದಂತೆ ಇದನ್ನೆಲ್ಲ ಆತ ಗಳಿಸಿದ್ದು ಕೇವಲ ಮೂರು ವರ್ಷಗಳಲ್ಲಿ.



ಈ ವರ್ಷದ ಆರಂಭದಲ್ಲಿ ಉತ್ತರ ಪ್ರದೇಶದ ವಿಧಾನಸಭೆಗೆ ಚುನಾವಣೆಗಳು ನಡೆದು ಮಾಯಾವತಿಯ ಬಿಎಸ್‌ಪಿ ಪಕ್ಷ ನೆಲಕಚ್ಚಿತು. ಮಾತ್ರವಲ್ಲ, ಮಾಯಾವತಿಯ ಭ್ರಷ್ಟ ವ್ಯವಸ್ಥೆಗೆ ಅಂತ್ಯ ಹಾಡುತ್ತೇನೆಂದು ಮತದಾರರಿಗೆ ಮಾತು ಕೊಟ್ಟಿದ್ದ ಅಖಿಲೇಶ್ ಯಾದವನ ಸಮಾಜವಾದಿ ಪಕ್ಷ ಗೆದ್ದಿತು. ಹೀಗೆ ಅಧಿಕಾರದ ಲಗಾಮು ಕೈಬದಲಾವಣೆ ಆಗಿದ್ದರಿಂದ ಪಾಂಟಿಯ ಬಿಸಿನೆಸ್ ಸಾಮ್ರಾಜ್ಯದ ಮೇಲೆ ಚಪ್ಪಡಿಕಲ್ಲು ಬೀಳಲಿದೆ ಎಂದು ಹಲವರು ಭಾವಿಸಿದ್ದರು. ಆದರೆ ಪಾಂಟಿ ತರಹದ ಕಳ್ಳರಿಗೆ ಇದೆಲ್ಲ ಮಾಮೂಲು. ಆತ ಕೆಲವೇ ತಿಂಗಳಲ್ಲಿ ನೂತನ ಮುಖ್ಯಮಂತ್ರಿ ಅಖಿಲೇಶ್ ಯಾದವ್‌ನೊಂದಿಗೆ ದೀಲು ಕುದುರಿಸಿದ. ಪರಿಣಾಮವಾಗಿ ಅಂಗನವಾಡಿ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ಕೇಂದ್ರ ಸರ್ಕಾರದ ಯೋಜನೆಯಡಿ ಸರಬರಾಜು ಮಾಡುವ ಪೌಷ್ಟಿಕ ಆಹಾರದ ಕಾಂಟ್ರಾಕ್ಟನ್ನು ಇದೇ ಪಾಂಟಿಯ ಕಂಪನಿಗೆ ಕೊಡಲು ಅಖಿಲೇಶ್ ಯಾದವ್ ತೀರ್ಮಾನಿಸಿದ. ಮಾತ್ರವಲ್ಲ ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ವಿಧಿಸಿರುವ ನಿಯಮಗಳನ್ನೇ ಅಖಿಲೇಶನ ಸರ್ಕಾರ ಉಲ್ಲಂಘಿಸಿತ್ತು. ಅಂದಹಾಗೆ ಮೂರು ವರ್ಷಗಳ ಈ ಕಾಂಟ್ರಾಕ್ಟಿನ ಮೌಲ್ಯವೇ ಹತ್ತು ಸಾವಿರ ಕೋಟಿ ರೂಪಾಯಿಗಳು! ಅಂದರೆ ಅಖಿಲೇಶನಿಗೆ ಈ ಪಾಂಟಿ ಚಡ್ಡಾ ಕೊಟ್ಟಿರಬಹುದಾದ ಕಿಕ್‌ಬ್ಯಾಕ್ ಎಷ್ಟಿರಬಹುದು?

ನಿಯಮಬಾಹಿರವಾದ, ಮಕ್ಕಳ ಮತ್ತು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಈ ಕಾಂಟ್ರಾಕ್ಟ್ ಪಾಂಟಿಯ ಪಾಲಾಗುವ ಮುನ್ನವೇ ಆತ ಕೊಲೆಯಾದ.

ಕಂಡಹಾಗೆ




editorlankesh@gmail.com • ಗೌರಿ ಲಂಕೇಶ್

ಈಗ ಪಾಂಟಿ ಮತ್ತು ಆತನ ಸಹೋದರನ ಕೊಲೆಯ ಹಿಂದೆ ಇತರೆ ಉದ್ಯಮಿಗಳ ಕೈವಾಡ ಇರಬಹುದೆಂದು ತನಿಖೆ ನಡೆಯುತ್ತಿದೆ. ಯಾಕೆಂದರೆ ಮಾಯಾವತಿಯ ಸರ್ಕಾರದ ನಿರ್ಗಮನದ ನಂತರ ಪಾಂಟಿಯ ಅಟ್ಟಹಾಸ ನಿಲ್ಲುತ್ತದೆ ಎಂದು ಆಶಿಸಿದ್ದ ವೈರಿ ಉದ್ಯಮಿಗಳ ಕನಸನ್ನು ಅಖಿಲೇಶ್ ಸರ್ಕಾರ ನುಚ್ಚುನೂರಾಗಿಸಿತ್ತು. ಆದ್ದರಿಂದ ಇವನ ಉಪಟಳಕ್ಕೆ ಸರಿಯಾದ ಮದ್ದು ಆತನ ಸಾವು ಎಂದು ಅವರೆಲ್ಲ ನಿರ್ಧರಿಸಿದ್ದರೂ ಅಚ್ಚರಿ ಇಲ್ಲ. ಅಷ್ಟೇ ಅಲ್ಲ ಹೇಗಿದ್ದರೂ ಈ ದೇಶದಲ್ಲಿ ಹಣಬಲ ಮತ್ತು ರಾಜಕೀಯ ಬಲ ಇದ್ದರೆ ಸಾಕು ಕೊಲೆ ಮಾಡಿಯೂ ಅದನ್ನು ದಕ್ಕಿಸಿಕೊಳ್ಳಬಹುದು ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ.

ಪಾಂಟಿ ಬೆಳೆದದ್ದು ನಮ್ಮ ದೇಶದಲ್ಲಿರುವ ಭ್ರಷ್ಟ ವ್ಯವಸ್ಥೆಯ ನೆರವಿನಿಂದ. ಆತನನ್ನು ಕೊಂದವರು ಪಾರಾಗುವುದೂ ಅದೇ ವ್ಯವಸ್ಥೆಯ ಸಹಕಾರದಿಂದ. ಪಾಂಟಿಯ ಬದುಕು ಮತ್ತು ಸಾವಿನಲ್ಲಿ ನಮ್ಮ ಪ್ರಜಾತಂತ್ರದ ಅಧಃಪತನದ ಕತೆಯೂ ಅಡಗಿದೆಯಲ್ಲವೇ... ●

ಯೋಗಪ್ಪನವರ್ ಅವರ ಹೊಸ ನಾಟಕ ಬಿಡುಗಡೆಯ ಸುತ್ತ...



...ಗೌರಿ ಲಂಕೇಶ್, ಯೋಗಪ್ಪನವರ್, ಶ್ರೀನಿವಾಸ್ ಗೌಡ, ಚಂದ್ರೇಗೌಡ ಮತ್ತು ಬಸವರಾಜ್ ಅರಸ್



ಯೋಗಪ್ಪನವರ್, ಗೌರಿ ಲಂಕೇಶ್, ಕವಿತಾ, ಚಿತ್ರಾ, ಭೂಮಿಕಾ ಮತ್ತು ಸಂಕೇತ್

ಮೊನ್ನೆ ನಮ್ಮ ಕಚೇರಿಯಲ್ಲಿ ಒಂದು ಪುಟ್ಟದಾದ, ಆತ್ಮೀಯವಾದ ...ತ್ತು ಚೊಕ್ಕದಾದ ಕಾರ್ಯಕ್ರಮ ನ.27ರಂದು ನಡೆಯಿತು. ಅದರ ಕೇಂದ್ರಬಿಂದು ...ಗಿದ್ದವರು ಪಿ. ಲಂಕೇಶ್ ಮತ್ತು ಅವರ ಮಿತ್ರರಾದ ಎಸ್.ಎಫ್. ...ಯೋಗಪ್ಪನವರ್! ಏನಿದು ಅಚ್ಚರಿ ಎಂದು ಹುಬ್ಬೇರಿಸುತ್ತಿದ್ದೀರಾ...


ಯೋಗಪ್ಪನವರ್ ಅವರು ಬಹಳ ಸೂಕ್ಷ್ಮ ಮನಸ್ಸಿನ ಮತ್ತು ಸೂಕ್ಷ್ಮ ...ಸಂವೇದನೆಯ ವ್ಯಕ್ತಿ. ಅಷ್ಟೇ ಅಲ್ಲ, ಅವರು ಇವತ್ತು ನಮ್ಮ ನಡುವೆ ಇರುವ ...ಉತ್ತಮ ಬರಹಗಾರರಲ್ಲಿ ಒಬ್ಬರು ಕೂಡ. ಅವರ ಈ ಗುಣಗಳನ್ನು ...ಮೆಚ್ಚಿಯೇ ಲಂಕೇಶರು ಅವರಿಗೆ ಆತ್ಮೀಯರಾಗಿದ್ದರು. ಅವರಿಬ್ಬರು ...ಜೊತೆಗೂಡಿಯೇ 'ರೂಪಕ ಲೇಖಕರು' ಎಂಬ ಸರಣಿಯನ್ನು ಪತ್ರಿಕೆಯಲ್ಲಿ ...ಬರೆದಿದ್ದರು. ಆ ಸರಣಿಯನ್ನು ಈಗ ನಮ್ಮ 'ಲಂಕೇಶ್ ಪ್ರಕಾಶನ' ಪುಸ್ತಕ ...ರೂಪದಲ್ಲಿ ಪ್ರಕಟಿಸಿದ್ದು ವಿಮರ್ಶಕರಿಂದ ಅಪಾರ ಪ್ರಶಂಸೆಯನ್ನು ಪಡೆದಿದೆ.

ಇತ್ತೀಚೆಗೆ ಯೋಗಪ್ಪನವರು 'ಒಂದು ಶಹರದ ಸುತ್ತ' ಎಂಬ ...ನಾಟಕವೊಂದನ್ನು ಬರೆದಿದ್ದಾರೆ. ಅದು ಅವರ ಪ್ರಥಮ ನಾಟಕವಾಗಿದ್ದು ಲಂಕೇಶರಿಗೆ ಅರ್ಪಿಸಿದ್ದಾರೆ. ಅಷ್ಟೇ ಅಲ್ಲ, ಇವತ್ತು ತಮ್ಮ ಮಿತ್ರ ಲಂಕೇಶ್ ಇರದಿದ್ದರೂ ತಮ್ಮ ಈ ಪುಸ್ತಕ ಲಂಕೇಶರ ಕೊಠಡಿಯಲ್ಲೇ ಬಿಡುಗಡೆಗೊಳ್ಳಬೇಕೆಂದು ಯೋಗಪ್ಪನವರ್ ಆಶಿಸಿದರು. ಅದಕ್ಕೆ ನಾನು "ಬೇಕಿದ್ದರೆ ಸಾಂಕೇತಿಕವಾಗಿ ಅಪ್ಪನ ಕೊಠಡಿಯಲ್ಲಿ ಪುಸ್ತಕವನ್ನು ಬಿಡುಗಡೆ ಮಾಡೋಣ, ಅದರ ಜೊತೆಗೆ ಬೇರೆಯಲ್ಲಾದರೂ ಒಂದು ಪುಟ್ಟ ಸಭೆಯನ್ನೂ ಇಟ್ಟುಕೊಳ್ಳೋಣ" ಎಂದೆ. ಆದರೆ ಯೋಗಪ್ಪನವರ್ ಅದಕ್ಕೆ ಸುತರಾಂ ಒಪ್ಪಲಿಲ್ಲ. "ಲಂಕೇಶ್ ಸರ್ ಅವರ ಅನುಪಸ್ಥಿತಿಯಲ್ಲೂ ಅವರ ಕೊಠಡಿಯಲ್ಲೇ ಇದನ್ನು ಬಿಡುಗಡೆ ಆದರೆ ಸಾಕು" ಎಂದರು. ಕೊನೆಗೆ ನಾನು ಒಪ್ಪಿದೆ.

ಈ ಪುಟ್ಟ ಕಾರ್ಯಕ್ರಮಕ್ಕೆ ಬಹಳ ವರ್ಷಗಳ ಕಾಲ ಲಂಕೇಶರ ಆತ್ಮೀಯ ಮಿತ್ರರಾಗಿದ್ದ ಮತ್ತು ಇಸ್ಪೀಟು ಗೆಳೆಯರಾಗಿದ್ದ ಡಾ.ಶ್ರೀನಿವಾಸ ಗೌಡ ಮತ್ತು ಬಸವರಾಜ್ ಅರಸ್ ಆಗಮಿಸಿದರು. ಶಿವಮೊಗ್ಗೆಯಿಂದ ಬಿ.ಚಂದ್ರೇಗೌಡ ಮತ್ತು ತಮ್ಮ ತಂಡದ ಪ್ರಮುಖ ಸತೀಶ್ ಹಾಜರಾದರು. ಜೊತೆಗೆ ಯೋಗಪ್ಪನವರ್ ಅವರ ಪತ್ನಿ ಚಿತ್ರಾ, ಪುತ್ರ ಸಂಕೇತ್, ಪುತ್ರಿ ಕವಿತಾ ಮತ್ತು ಪುಟ್ಟ ಮೊಮ್ಮಗಳು ಭೂಮಿಕಾ ಕೂಡ ಉತ್ಸಾಹದಿಂದ ಬಂದರು. ಸದಾ ಖಾಲಿ ಇರುವ ಲಂಕೇಶರ ಕುರ್ಚಿಯ ಮೇಲೆ ಅವರದ್ದೊಂದು ದೊಡ್ಡ ಭಾವಚಿತ್ರವನ್ನು ಇಟ್ಟೆವು. ಅದರ ಮುಂದೆ ಶ್ರೀನಿವಾಸ ಗೌಡರು ಪುಸ್ತಕವನ್ನು ಬಿಡುಗಡೆ ಮಾಡಿದರು.

ಇವತ್ತಿನ ಪತ್ರಿಕೆಗಳಲ್ಲಿ ಬೆಂಗಳೂರು ವಿಶ್ವದಲ್ಲಿಯೇ ಅತ್ಯಂತ ಮಲಿನ ನಗರ ಎಂಬ ವರದಿ ಪ್ರಕಟಗೊಂಡಿದೆ. ಇಂತಹ ನಗರದಲ್ಲಿ ಬರೀ ರಸ್ತೆ ಗಾಳಿ ಮತ್ತು ನೀರು ಮಾತ್ರ ಮಲಿನಗೊಂಡಿರುವುದಿಲ್ಲ, ಬದಲಾಗಿ ಇಲ್ಲಿ ಬದುಕುವವರ ಮನಸ್ಸೂ ಹೇಗೆ ಮಾಲಿನ್ಯಗೊಂಡಿರುತ್ತದೆ, ಆಸ್ತಿಗಾಗಿ, ಐಷಾರಾಮಿ ಜೀವನಕ್ಕಾಗಿ ಮನುಷ್ಯರು ಹೇಗೆ ಕೊಲೆಪಾತಕರಾಗುತ್ತಾರೆ, ಕಾನೂನುಗಳನ್ನೇ ಹೇಗೆ ದುರುಪಯೋಗ ಮಾಡಿಕೊಳ್ಳಲಾಗುತ್ತದೆ ಎಂದು ತೋರುವ ನಾಟಕ 'ಒಂದು ಶಹರದ ಸುತ್ತ'. ಇದು ಒಂದು ಉತ್ತಮ ನಾಟಕವಾಗಿದ್ದು ಆದಷ್ಟು ಜನ ಇದನ್ನು ಓದಲಿ ಎಂದೂ, ಆದಷ್ಟು ಬೇಗ ಇದು ರಂಗದ ಮೇಲೆ ರೂಪ ತಾಳಲಿ ಎಂದೂ ಆಶಿಸುತ್ತೇನೆ.

■ಗೌರಿ ಲಂಕೇಶ್



ಬಿಜೆಪಿಯ ಡ್ರಾಮಾ, ಯಡ್ಡಿಯ ಮೆಲೊಡ್ರಾಮಾ

ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಗೆ ಒಂದು ಕಡೆ ಜಯಲಲಿತಾ ಅವರಿಂದ 'ಕಾವೇರಿ ಸಮಸ್ಯೆ' ಎದುರಾದರೆ, ಮತ್ತೊಂದು ಕಡೆ ಯಡಿಯೂರಪ್ಪನವರಿಂದ 'ಹಾವೇರಿ ಸಮಸ್ಯೆ' ಎದುರಾಗಿದೆ. ನಿಜಕ್ಕೂ ಇವೆರಡು ಸಂಗತಿಗಳು ಶೆಟ್ಟರ್‌ರನ್ನು ತುಂಬಾ 'ವರಿ' ಮಾಡುತ್ತಿವೆ. ಆದರೆ ಎಂದಿನಂತೆ ಎಲ್ಲಾ ಸಮಸ್ಯೆಗಳಿಗೂ 'ದಿವ್ಯ ಮೌನ'ವೇ ಮದ್ದು ಎಂಬ ಮಂತ್ರಕ್ಕೆ ಅಂಟಿಕೊಂಡಿರುವ ಶೆಟ್ಟರ್ ಈ ಬಾರಿಯೂ ಹಾಗೆಯೇ ಮೌನಧಾರಿಗಳಾಗಿದ್ದಾರೆ.

ಅದೇನೇ ಇದ್ದರೂ, ದಕ್ಷಿಣ ಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಯಡಿಯೂರಪ್ಪ ತಾನು ಸಾಕಿ ಬೆಳೆಸಿದ ಪಕ್ಷಕ್ಕೆ ನವೆಂಬರ್ 30 ರಂದು ರಾಜೀನಾಮೆ ನೀಡುವುದು ಬಹುತೇಕ ಖಚಿತವಾಗಿದೆ. ಅಂದು ಬೆಳಗ್ಗೆ ಯಡಿಯೂರಪ್ಪ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಆ ಪತ್ರವನ್ನು ಸ್ಪೀಕರ್ ಅವರಿಗೆ ರವಾನಿಸಲಿದ್ದಾರೆ. ಅಲ್ಲಿಗೆ 40 ವರ್ಷಗಳ ಬಿಜೆಪಿ ಜೊತೆಗಿನ ಸುದೀರ್ಘ 'ಮಧುಚಂದ್ರ'ಕ್ಕೆ ಯಡಿಯೂರಪ್ಪ ಇತಿಶ್ರೀ ಹಾಡಿದಂತಾಗುತ್ತದೆ.

ಯಡಿಯೂರಪ್ಪ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಈ ಪ್ರಕ್ರಿಯೆಯನ್ನು 'ಬಿಜೆಪಿಯ ಡ್ರಾಮಾ ಮತ್ತು ಮೆಲೊಡ್ರಾಮಾ' ಎಂದೇ ಅರ್ಥೈಸಬೇಕು. ಕಳೆದ ಒಂದು ವರ್ಷದಿಂದ ಬಿಜೆಪಿಯ ದೆಹಲಿ ನಾಯಕರು ಮತ್ತು ರಾಜ್ಯದ ನಾಯಕ ಯಡಿಯೂರಪ್ಪ ನಡುವಿನ ಸಂಬಂಧ ಹಳಸಿದ್ದು ಎಲ್ಲರಿಗೂ ಗೊತ್ತಿರುವ ವಿಚಾರವೆ. ಯಡಿಯೂರಪ್ಪ ಪಕ್ಷದಲ್ಲಿಷ್ಟು ಕಾಲ ತಮಗೆ ದೊಡ್ಡ ತಲೆನೋವು ಎಂದೇ ದೆಹಲಿ ನಾಯಕರು ತೀರ್ಮಾನಕ್ಕೆ ಬಂದಿದ್ದರು. ಕರ್ನಾಟಕದ ಈ ರೆಬೆಲ್ ಸ್ಟಾರ್‌ನನ್ನು ಹೇಗೆ ಹದ್ದುಬಸ್ತಿನಲ್ಲಿಡಬೇಕೆಂದು ತಿಳಿಯದೇ ದೆಹಲಿ ನಾಯಕರು ವಿಲವಿಲನೆ ಒದ್ದಾಡುತ್ತಿದ್ದರು. ಯಡ್ಡಿಯ ಕೋಪತಾಪವನ್ನು ಚೆನ್ನಾಗಿ ಅರಿತಿದ್ದ ದೆಹಲಿ ನಾಯಕರು ಕೊನೆಗೂ ಅವರು ಪಕ್ಷ ಬಿಟ್ಟುಹೋಗುವಂತಹ ಪರಿಸ್ಥಿತಿಯನ್ನು ನಿರ್ಮಿಸುವಲ್ಲಿ ತಮ್ಮ ಜಾಣ್ಮೆ ಮತ್ತು ರಾಜಕೀಯ ಕುತಂತ್ರವನ್ನು ಪ್ರದರ್ಶಿಸಿದರು.

ಯಡಿಯೂರಪ್ಪ ಬಿಜೆಪಿ ಪಕ್ಷಕ್ಕೆ ವಿದಾಯ ಹೇಳಿ ಸುಮಾರು ಒಂದು ವರ್ಷವೇ ಆಗಿಹೋಗಿದೆ. ಯಾವಾಗ ಅವರನ್ನು ದೆಹಲಿ ದೊರೆಗಳು ಬಲವಂತವಾಗಿ ಮುಖ್ಯಮಂತ್ರಿ ಸಿಂಹಾಸನದಿಂದ ಪದಚ್ಯುತಿಗೊಳಿಸಿದರೋ ಅಂದೇ ಅವರು ತಾನು ಕಟ್ಟಿ ಬೆಳೆಸಿದ ಪಕ್ಷ ತನಗೆ ದ್ರೋಹ ಮಾಡಿದೆ ಎಂದು ಆತ್ಮೀಯರಲ್ಲಿ ಹೇಳಿಕೊಂಡಿದ್ದರು. ಅಂದಿನಿಂದಲೇ ಅವರು ಪಕ್ಷದಿಂದ ದಿನದಿಂದ ದಿನಕ್ಕೆ ದೂರವಾಗುತ್ತಾ ಹೋದರು.

ಆದರೂ ಈ 'ಬಿಜೆಪಿಯ ಡ್ರಾಮಾ' ಕಳೆದ ಕೆಲವು ತಿಂಗಳುಗಳಿಂದ ಕ್ಲೈಮ್ಯಾಕ್ಸ್ ತಲುಪಿತ್ತೇ ವಿನಃ ಅದಕ್ಕೊಂದು ಕೊನೆ ಕಾಣಿಸುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರಗಳು. ಯಡಿಯೂರಪ್ಪನವರನ್ನು ಪಕ್ಷದ್ರೋಹಿ ಕೆಲಸಕ್ಕಾಗಿ ಉಚ್ಚಾಟಿಸಿದರೆ ಅವರು ಖಂಡಿತವಾಗಿಯೂ ಜನಮಾನಸದಲ್ಲಿ ಹೀರೋ ಆಗುತ್ತಾರೆ ಎಂಬುದು ದೆಹಲಿ ನಾಯಕರಿಗೆ ಗೊತ್ತಿತ್ತು. ಹೀಗಾಗಿ ಅವರನ್ನು ಪಕ್ಷದಿಂದ ಉಚ್ಚಾಟಿಸುವ ಬದಲು ಅವರೇ ಪಕ್ಷ ಬಿಟ್ಟುಹೋಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ, ಬಿಜೆಪಿ ಹೈಕಮಾಂಡ್ ಕಾರ್ಯಾಚರಣೆಗಿಳಿಯಿತು. ಇದಕ್ಕೆ ತದ್ವಿರುದ್ಧವಾದ ಒಂದು ರಾಜಕೀಯ ತಂತ್ರಗಾರಿಕೆಯನ್ನು ಯಡಿಯೂರಪ್ಪ ಬೆಳೆಸಿದ್ದರು. ಅದೇನೆಂದರೆ, ಪಕ್ಷದಲ್ಲಿದ್ದೇ ನಿತ್ಯವೂ ದೆಹಲಿ ನಾಯಕರನ್ನು ಟೀಕಿಸುವುದು ಅಥವಾ ತಮ್ಮ ವಿರೋಧಿ ಪಕ್ಷವಾದ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಗಾಂಧಿಯವರನ್ನು ಸಿಕ್ಕಾಪಟ್ಟೆ ಹೊಗಳುವುದು. ಹೀಗೆ ಮಾಡಿದಾಗ ದೆಹಲಿ ನಾಯಕರು ಸಿಟ್ಟುಗೊಂಡು ತನ್ನನ್ನು ಪಕ್ಷದಿಂದ ಉಚ್ಚಾಟಿಸುತ್ತಾರೆ, ಆಗ ಜನರ ಸಿಂಪತಿ ತನ್ನ ಕಡೆಗೆ ಬರುತ್ತದೆ, ಅದನ್ನೇ ಮುಖ್ಯವಾಗಿಟ್ಟುಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡಿ ಜನರ ಅನುಕಂಪವನ್ನು ಮತವನ್ನಾಗಿ ಪರಿವರ್ತಿಸುವುದು ಯಡ್ಡಿಯ ಲೆಕ್ಕಾಚಾರವಾಗಿತ್ತು.

ಹೀಗೆ ದೆಹಲಿ ನಾಯಕರು ಮತ್ತು ಯಡಿಯೂರಪ್ಪನವರ ನಡುವಿನ 'ನಾ ಕೊಡೆ.. ನೀ ಬಿಡೆ' ಎಂಬ ನಾಟಕ ಹಲವಾರು ತಿಂಗಳುಗಳಿಂದ ನಡೆಯುತ್ತಲೇ ಇತ್ತು. ಇಬ್ಬರ ನಡುವಿನ ಜಂಗಿ ಕುಸ್ತಿ ಮುಗಿಯದ ಲಕ್ಷಣಗಳನ್ನು ಕಾಣದಿದ್ದಾಗ ಕೊನೆಗೂ ಯಡಿಯೂರಪ್ಪ ಬೇರೆ ದಾರಿಯಿಲ್ಲದೇ ಸ್ವತಃ ತಾವೇ ಬಿಜೆಪಿ ಪಕ್ಷದಿಂದ ಹೊರಬರಲು ದೊಡ್ಡ ಮನಸ್ಸು ಮಾಡಿದ್ದಾರೆ.

ಅಂದರೆ, ಯಡಿಯೂರಪ್ಪನ ನಿರ್ಗಮನದಿಂದಾಗಿ ಈಗ ದೆಹಲಿಯ ಬಿಜೆಪಿ ನಾಯಕರು ಮೊದಲ ಸುತ್ತಿನ ಜಯವನ್ನು ಗಳಿಸಿದ್ದಾರೆ ಎಂದೇ ಹೇಳಬಹುದು. ಆ ಮೂಲಕ ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿದ್ದ ಕರ್ನಾಟಕ ರಾಜ್ಯ ಬಿಜೆಪಿಯನ್ನು ಸ್ವಚ್ಛಗೊಳಿಸಿದ್ದೇವೆ ಎಂದು ಪೋಸು ಕೊಡಲು ದೆಹಲಿ ನಾಯಕರು ಸಿದ್ಧರಾಗಿದ್ದಾರೆ. ಆದರೆ ಅವರ ದುರಾದೃಷ್ಟಕ್ಕೆ ಈಗ ಅವರ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯವರೇ ಭ್ರಷ್ಟಾಚಾರದ ಆರೋಪದಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ.

ಯಡಿಯೂರಪ್ಪ ಬಿಜೆಪಿಯಿಂದ ಹೊರಬಂದ ಬಳಿಕ ಹಾವೇರಿಯಲ್ಲಿ ಡಿಸೆಂಬರ್ 9 ರಂದು ತನ್ನ ಹೊಸ ಪಕ್ಷ 'ಕರ್ನಾಟಕ ಜನತಾ ಪಕ್ಷ'ದ ಮೊದಲ ಸಮಾವೇಶವನ್ನು ನಡೆಸಲಿದ್ದಾರೆ. ಈ ಸಮಾವೇಶಕ್ಕೆ ಯಡಿಯೂರಪ್ಪನವರ ಹಿಂಬಾಲಕರು ಎಷ್ಟು ಜನ ಹೋಗುತ್ತಾರೆ ಎಂಬ ಲೆಕ್ಕಾಚಾರಗಳು, ಚರ್ಚೆಗಳು ಈಗಾಗಲೇ ರಾಜ್ಯ ರಾಜಕೀಯದಲ್ಲಿ ನಡೆಯುತ್ತಿದೆ. ಒಂದು ವೇಳೆ ಸುಮಾರು 40 ರಿಂದ 50 ಶಾಸಕರು ಯಡಿಯೂರಪ್ಪನವರ ಸಮಾವೇಶಕ್ಕೆ ಹಾಜರಾಗಿದೆ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಉರುಳುತ್ತದೆಯೇ? ಅಥವಾ ಅಂತಹ ಶಾಸಕರ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪ ಶಿಸ್ತುಕ್ರಮ ಕೈಗೊಳ್ಳುತ್ತಾರೆಯೇ? ಇನ್ನೇನು ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಇಂತಹ ಶಾಸಕರ ವಿರುದ್ಧ ಶಿಸ್ತುಕ್ರಮ ಕೈಗೊಂಡು ತಾವಿನ್ನೂ 'ಶಿಸ್ತಿನ ಪಕ್ಷ' ಎಂಬುದನ್ನು ಸಾಬೀತುಪಡಿಸಲು ಬಿಜೆಪಿಯವರು ಈ ಅವಕಾಶವನ್ನು ಸದುಪಯೋಗಗೊಳಿಸಲಿದ್ದಾರೆ? ಹಾಗೆ ಮಾಡುವ ಮುಖಾಂತರ ವಿಧಾನಸಭೆಯನ್ನು ವಿಸರ್ಜಿಸಿ ನಿಗದಿತ ಅವಧಿಗಿಂತ ಮುನ್ನವೇ ಚುನಾವಣೆಗೆ ಹೋಗುತ್ತಾರೆಯೇ ಎಂದೆಲ್ಲ ಬಿಜೆಪಿಯ ಚೆಡ್ಡಿಗಳು ಚಿಂತಿಸುತ್ತಿದ್ದಾರಂತೆ.

ಡಿಸೆಂಬರ್ 9 ರ ಹಾವೇರಿ ಸಮಾವೇಶದ ನಂತರ ರಾಜ್ಯ ಬಿಜೆಪಿಯಲ್ಲಿ ಅನೇಕ ಬದಲಾವಣೆಗಳ ತಲ್ಲಣಗಳಾಗಲಿದೆ ಎಂಬ ಮಾತು ಕೇಳಿಬರುತ್ತಿದೆ. ಆದರೆ, ಈಶ್ವರಪ್ಪನ ಆಪ್ತರು ಹೇಳುವ ಪ್ರಕಾರ ಈ ಚುನಾವಣೆಯ ಸಂದರ್ಭದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳುವಂತಹ ಕೆಲಸಕ್ಕೆ ಈಶ್ವರಪ್ಪ ಕೈಹಾಕುವುದಿಲ್ಲವಂತೆ. ಅದರ ಬದಲಿಗೆ ಹಾವೇರಿ ಸಮಾವೇಶಕ್ಕೆ ಹೋದವರಿಗೆ ಒಂದು ಶೋಕಾಸ್ ನೋಟಿಸ್ ಕೊಟ್ಟು ಅವರಿಂದ ಉತ್ತರ ಪಡೆಯುವ ಮಾಮೂಲಿ ಕ್ರಮವನ್ನೇ ಅವರು ನೆಚ್ಚಿಕೊಳ್ಳಲಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ. ಯಾಕೆಂದರೆ, ಹಾವೇರಿ ಸಮಾವೇಶದ ಸಂದರ್ಭದಲ್ಲೇ ಬೆಳಗಾವಿಯಲ್ಲಿ ವಿಶೇಷ ಅಧಿವೇಶನ ಮುಕ್ತಾಯಗೊಳ್ಳಲಿದೆ. ಅಧಿವೇಶನ ನಡೆಯುತ್ತಿರುವಾಗ ಸ್ವಲ್ಪ ಹೆಚ್ಚುಕಡಿಮೆಯಾದರೂ ಸರ್ಕಾರ ಉರುಳುವ ಅಪಾಯದ ಅರಿವು ಈಶ್ವರಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಹಾವೇರಿ ಸಮಾವೇಶದ ವಿಷಯಕ್ಕೆ ಎಂದಿನಂತೆ ತನ್ನ ಹಾಸ್ಯಮಿಶ್ರಿತ ಶೈಲಿಯಲ್ಲಿ ಉತ್ತರ ಕೊಡುವ ಸಾಧ್ಯತೆಯಿದೆಯೆಂದೇ ಭಾವಿಸಲಾಗಿದೆ.

ಡಿಸೆಂಬರ್ 5 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ಅಧಿವೇಶನದಲ್ಲಿ ಈ ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ನಾಯಕ ಸಿದ್ದರಾಮಯ್ಯನವರು ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವ ಮಾತು ಕೂಡ ಕೇಳಿಬರುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ವಿರೋಧ ಪಕ್ಷದವರ ಗಾಳಕ್ಕೆ ಬಲಿಯಾಗಬಾರದು ಎಂಬ ಕಾರಣದಿಂದ ಈಶ್ವರಪ್ಪ ಮತ್ತು ಜಗದೀಶ್ ಶೆಟ್ಟರ್ ಹಾವೇರಿ ಸಮಾವೇಶದ ನಂತರ ಅತ್ಯಂತ ಜಾಗರೂಕತೆಯಿಂದ ಒಂದೊಂದೇ ರಾಜಕೀಯ ಹೆಜ್ಜೆಯನ್ನು ಇಡಲಿದ್ದಾರೆ. ಆದರೆ ಸಿದ್ದರಾಮಯ್ಯನವರ ಅವಿಶ್ವಾಸ ಗೊತ್ತುವಳಿ ಮಂಡನೆಯನ್ನು ಕಾಂಗ್ರೆಸ್‌ನಲ್ಲೇ ಒಂದು ವರ್ಗ ವಿರೋಧಿಸಿರುವುದು ಶೆಟ್ಟರ್ ಪಾಲಿಗೆ ವರವಾಗಿ ಪರಿಣಮಿಸಿದೆ. ಅಷ್ಟೇ ಅಲ್ಲ, ಕಾಂಗ್ರೆ ಅವಿಶ್ವಾಸ ಗೊತ್ತುವಳಿಯನ್ನು ಮಂಡನೆ ಮಾಡಿ ಗೆದ್ದಲ್ಲಿ, ಈ ಸರ್ಕಾರವನ್ನು ಬೀಳಿಸಿದ ಸಂಪೂರ್ಣ ಖ್ಯಾತಿ ಕಾಂಗ್ರೆಸ್‌ಗೆ ಸಿಗುತ್ತದೆ. ಅದರಲ್ಲೂ, ತಮ್ಮ ಪಕ್ಷ ತ್ಯಜಿಸಿ ಕಾಂಗ್ರೆಸ್‌ಗೆ ತೆರಳಿದ ಸಿದ್ದರಾಮಯ್ಯನವರು ಹೀರೋ ಆಗುತ್ತಾರೆ ಎಂಬ ಕಾರಣಕ್ಕಾಗಿ ಕುಮಾರಸ್ವಾಮಿ ನೇತೃತ್ವದ ಜನತಾದಳದವರೂ ಈ ಅವಿಶ್ವಾಸ ಗೊತ್ತುವಳಿ ಮಂಡನೆಗೆ ಬೆಂಬಲ ಸೂಚಿಸದಿರುವ ಮಾತು ಕೇಳಿಬರುತ್ತಿದೆ. ಅಂದರೆ, ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ಪತನವಾಗುವ ಸಾಧ್ಯತೆಗಳು ತೀರಾ ಕಡಿಮೆ.

ಈ ಮಧ್ಯೆ ಯಡಿಯೂರಪ್ಪ ತನ್ನ ಆಪ್ತರಲ್ಲಿ ಇನ್ನೊಂದು ಅನಿಸಿಕೆಯನ್ನು ತೇಲಿ ಬಿಟ್ಟಿದ್ದಾರೆ. ಅದೇನೆಂದರೆ, ಯಾವುದೇ ಕಾರಣಕ್ಕೂ ಜಗದೀಶ್ ಶೆಟ್ಟರ್‌ರಿಗೆ ಈ ಬಾರಿ ಬಜೆಟ್ ಮಂಡನೆ ಮಾಡಲು ಬಿಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಕಳೆದ ವರ್ಷ ಅಂದಿನ ಮುಖ್ಯಮಂತ್ರಿ ಸದಾನಂದ ಗೌಡರು ಬಜೆಟ್ ಮಂಡಿಸುವ ಸಂದರ್ಭದಲ್ಲೂ ಇದೇ ರೀತಿ ಅವರಿಗೆ ಅವಕಾಶ ಕೊಡಬಾರದೆಂದು ಯಡಿಯೂರಪ್ಪ ಭಗೀರಥ ಪ್ರಯತ್ನ ಮಾಡಿದ್ದರು. ಯಾಕೆಂದರೆ ಬಜೆಟ್‌ನಲ್ಲಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದು ಅವುಗಳ ಆಧಾರದ ಮೇಲೆ ಮುಂದಿನ ಚುನಾವಣೆಯಲ್ಲಿ ಮತದಾರರ ಮನಸ್ಸನ್ನು ಗೆಲ್ಲಬಹುದು ಎಂಬುದು ಯಡ್ಡಿಯ ಲೆಕ್ಕಾಚಾರ. ಆದರೆ, ಕೆಲವು ಕಾನೂನು ತಜ್ಞರು ಹೇಳುವ ಪ್ರಕಾರ ಜಗದೀಶ್ ಶೆಟ್ಟರ್‌ಗೆ ಬಜೆಟ್ ಮಂಡನೆಯ ಅವಕಾಶ ಸಿಗುವುದಿಲ್ಲ, ಅದೇನಿದ್ದರೂ ಹೊಸ ಮುಖ್ಯಮಂತ್ರಿಗೆ ಆ ಜವಾಬ್ದಾರಿ ಲಭಿಸುತ್ತದೆ ಎಂದು ಹೇಳುತ್ತಿದ್ದಾರೆ.

ಯಡಿಯೂರಪ್ಪನ ನಿರ್ಗಮನದ ನಂತರ ಬಿಜೆಪಿಯಲ್ಲಿನ ಪರಿಸ್ಥಿತಿಯನ್ನು ನಿಭಾಯಿಸಲು ಆ ಪಕ್ಷದ ನಾಯಕರು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಉದಾಹರಣೆಗೆ ಕಳೆದ ಎರಡು ತಿಂಗಳುಗಳಿಂದ ಬಿ[...] ರಾಜ್ಯಾಧ್ಯಕ್ಷ ಈಶ್ವರಪ್ಪ ಪ್ರತಿ ಜಿಲ್ಲೆಯ ಪದಾಧಿಕಾರಿಗ[...] ಬೆಂಗಳೂರಿಗೆ ಕರೆಸಿ ಅವರೊಂದಿಗೆ ಸ್ಥಳೀಯ ಸಮೀಕ್ಷೆ[...] ನಡೆಸುತ್ತಿದ್ದಾರೆ. ಆ ಸಭೆಗಳಲ್ಲಿ ಈಶ್ವರಪ್ಪನ ಜೊತೆ ಮ[...] ಉಪಮುಖ್ಯಮಂತ್ರಿಯಾದ ಆರ್. ಅಶೋಕ್ ಮ[...] ಮುಖ್ಯಮಂತ್ರಿಯಾದ ಜಗದೀಶ್ ಶೆಟ್ಟರ್ ಕ[...] ಉಪಸ್ಥಿತರಿದ್ದರೆಂಬುದೇ ವಿಶೇಷ. ಕೆಲವು ಸಭೆಗಳಲ್ಲಿ ಮ[...] ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಮತ್ತು ರಾಷ್ಟ್ರ[...] ನಾಯಕರಾದ ಅನಂತ್‌ಕುಮಾರ್ ಕೂಡ ಹಾಜರಿದ[...] ಎಲ್ಲ ಜಿಲ್ಲಾ ಕೇಂದ್ರಗಳ ಬಿಜೆಪಿ ಪದಾಧಿಕಾರಿಗಳಿಗೆ [...] ನಾಯಕರು ಹೇಳಿದ್ದು ಇಷ್ಟೇ: "ನೀವು ಪಕ್ಷದ ಕಾರ್ಯಕರ್ತ[...] ಯಡಿಯೂರಪ್ಪನ ಜೊತೆ ಹೋಗದಂತೆ ನೋಡಿಕೊಳ್ಳಬೇ[...] ಯಡಿಯೂರಪ್ಪನ ನಿರ್ಗಮನದಿಂದ ಪಕ್ಷಕ್ಕೆ ಯಾವ[...] ದೊಡ್ಡ ನಷ್ಟವಾಗುವುದಿಲ್ಲ."

ಹೀಗೆ ಮಾಡುವ ಮುಖಾಂತರ ರಾಜ್ಯದ [...] ಜಿಲ್ಲೆಗಳಲ್ಲಿ ಯಡಿಯೂರಪ್ಪನ ಪ್ರಭಾವ ಎಷ್ಟಿದೆಯೆ[...] ಬಗ್ಗೆ ಈ ನಾಯಕರು ತಾವೇ ಮೊದಲ ಮಾಹಿತಿಯ[...] ಪಡೆದುಕೊಂಡಿದ್ದಾರೆ. ತಮಗೆ ದೊರಕಿದ ಮಾಹಿತಿ[...] ಆಧಾರದ ಮೇಲೆ ಯಡಿಯೂರಪ್ಪ ಪಕ್ಷ ಬಿಟ್ಟ[...] ಚಿಂತೆಯಿಲ್ಲ ಎಂಬ ತೀರ್ಮಾನಕ್ಕೆ ಈ ನಾಯ[...] ಬಂದಿದ್ದಾರೆ.

ಆದರೂ ಕೂಡ "ಯಡಿಯೂರಪ್ಪನವರು ನಮ್ಮ[...] ಬಿಡಬಾರದು. ಅವರು ನಮ್ಮ ಪಕ್ಷದಲ್ಲೇ ಇರಬೇ[...] ಎಂಬುದು ನಮ್ಮೆಲ್ಲರ ಆಶಯ" ಎಂದು ಈಶ್ವ[...] ಯಾವಾಗಲೂ ಭಾಷಣ ಮಾಡುತ್ತಲೇ ಇದ್ದಾರೆ. [...] ಮಾತನ್ನು ಮತ್ತೊಬ್ಬ ಉಪಮುಖ್ಯಮಂತ್ರಿ ಆರ್.ಅಶೋ[...] ಕೂಡ ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಇದರ [...] ಅರ್ಥ ಇಷ್ಟೆ. ಯಡಿಯೂರಪ್ಪನವರನ್ನು ಪಕ್ಷದ[...] ಉಳಿಸಿಕೊಳ್ಳಲು ನಾವೆಲ್ಲರೂ ಕೊನೆ ಕ್ಷಣದತನಕವೂ ಭ[...] ಪ್ರಯತ್ನ ಮಾಡಿದ್ದೇವೆ ಎಂಬ ಸಂದೇಶವ[...] ಯಡಿಯೂರಪ್ಪನ ಲಿಂಗಾಯತ ಸಮುದಾಯ[...] ರವಾನಿಸುವುದೇ ಆಗಿದೆ. ಯಡಿಯೂರಪ್ಪ ಬಿಜೆಪಿ ತೊ[...] ಹೋದ ನಂತರ ಲಿಂಗಾಯತ ಸಮುದಾಯ ಬ[...] ವಿರುದ್ಧ ತಿರುಗಿಬೀಳಬಾರದು ಎಂಬುದು ಇವರ ಆಶ[...]


ಅಂದಹಾಗೆ, ಒಂದು ಹಂತದಲ್ಲಿ ಯಡಿಯೂ[...] ಕೂಡ ತನ್ನ ಮನಸ್ಸನ್ನು ಬದಲಾಯಿಸಿ ದೆ[...] ನಾಯಕರ ಜೊತೆ ತೆರೆಮರೆಯಲ್ಲಿ ಸಂಧಾನ ಮಾತ[...] ನಡೆಸಿ ಪಕ್ಷದಲ್ಲೇ ಉಳಿಯುವ ನಿರ್ಧಾರಕ್ಕೆ ಬಂದಿ[...] ಆ ಸುದ್ದಿ ಹೊರಬರುತ್ತಿದ್ದಂತೆ ರಾಜ್ಯ ಬಿಜೆಪಿ[...] ಅಲ್ಲೋಲಕಲ್ಲೋಲವೇ ನಡೆದುಹೋಯಿ[...] ಈಶ್ವರಪ್ಪ, ಅಶೋಕ್, ಸದಾನಂದ ಗೌಡ ಮ[...] ಅನಂತ್‌ಕುಮಾರ್ ಸಿಕ್ಕಾಪಟ್ಟೆ ಸಕ್ರಿಯರಾಗಿ ಮೀಟಿ[...] ಮೇಲೆ ಮೀಟಿಂಗ್ ನಡೆಸಿದರು. ಯಡಿಯೂರ[...] ಪಕ್ಷದಲ್ಲಿ ಉಳಿದುಕೊಂಡರೆ ತಮ್ಮ[...] ಹಿಸುಕಿಹಾಕುತ್ತಾರೆ ಎಂಬ ಭಯ ಇವರ[...] ಕಾಡಲಾರಂಭಿಸಿತು. ಕೊನೆಗೆ ಯಡಿಯೂರಪ್ಪ ಪಕ್ಷ[...] ಉಳಿಯುವುದಿಲ್ಲ ಎಂಬ ಸುದ್ದಿ ತೇಲಿಬರುತ್ತಿ[...] ಇವರೆಲ್ಲ ನಿಟ್ಟುಸಿರುಬಿಟ್ಟರು.

ವಾಸ್ತವವಾಗಿ ಯಡಿಯೂರಪ್ಪ ಬಿಜೆಪಿ[...] ಉಳಿಯದಂತೆ ನೋಡಿಕೊಂಡದ್ದು ಕಾಂಗ್ರೆ ನಾಯ[...] ವಿನಃ ಬೇರೆ ಯಾರೂ ಅಲ್ಲ. ಈಗ ಯಡಿಯೂರ[...] ಸ್ಥಿತಿ 'ಅತ್ತ ಪುಲಿ, ಇತ್ತ ನರಿ' ಎಂಬ ಗಾದೆಮಾತಂತಾ[...] ಯಡಿಯೂರಪ್ಪ ಬಿಜೆಪಿ ಬಿಟ್ಟು ಹೊಸ ಪಕ್ಷವನ್ನು ರಚಿಸಿ[...] ಬಿಜೆಪಿ ನಿರ್ಜೀವ ಪಕ್ಷವಾಗುತ್ತದೆ, ಆಗ ತಮಗೆ ಮುಂ[...] ಚುನಾವಣೆಯಲ್ಲಿ ಗೆಲುವು ಖಚಿತ ಎಂಬುದು ಕಾ[...] ನಾಯಕರ ಲೆಕ್ಕಾಚಾರ. ಈ ಕಾರಣಕ್ಕಾಗಿ[...] ಯಡಿಯೂರಪ್ಪನ ವಿರುದ್ಧ ಸಿಬಿಐ ತನಿಖೆ ವಿಷಯ[...] ಕಾಲಕ್ಕೆ ತಕ್ಕಂತೆ ಕಾಂಗ್ರೆ ನಾಯಕರು ಬಳಸಿಕೊಳ್ಳುತ್ತಿ[...]

ಯಡಿಯೂರಪ್ಪ ಇಲ್ಲದ ಬಿಜೆಪಿ ಪಕ್ಷದಲ್ಲಿ ತಾ[...] ಅತ್ಯಂತ ಸಂತೋಷವಾಗಿ ಕಾಲ ಕಳೆಯಬಹುದು, ಇಲ್ಲ[...] ಪ್ರತಿ ಬಾರಿಯೂ ಅವರ ಕೋಪ-ತಾಪಕ್ಕೆ ತ[...] ಬಲಿಯಾಗಬೇಕಾಗುತ್ತದೆ ಎಂದು ರಾಜ್ಯ ಬಿಜೆಪಿ ನಾಯ[...] ಆರಾಮಾಗಿದ್ದಾರೆ.


ಕರ್ನಾಟಕದ ಮುಖಾಂತರ ಇಡೀ ದಕ್ಷಿಣ ಭಾ[...] ರಾಜ್ಯಗಳಲ್ಲಿ ಬಿಜೆಪಿಯ ಕೇಸರಿ ಬಾವುಟವ[...] ಹಾರಿಸಬೇಕೆಂಬ ದೆಹಲಿ ಬಿಜೆಪಿ ನಾಯಕರ ರಾಜಕೀ[...] ಲೆಕ್ಕಾಚಾರಗಳೆಲ್ಲವೂ ತಲೆಕೆಳಗಾಗಿವೆ. ದಕ್ಷಿಣ ಭಾರ[...] ಮೊದಲ ಬಿಜೆಪಿಯ ಮುಖ್ಯಮಂತ್ರಿ ಎಂಬ ಹೆಗ್ಗಳಿ[...] ಯಡಿಯೂರಪ್ಪ ಭ್ರಷ್ಟಾಚಾರದ ಆರೋಪದ ಹಿನ್ನೆಲೆ[...] ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದದ್ದು, ಈಗ [...] ಪಕ್ಷಕ್ಕೆ ಗುಡ್‌ಬೈ ಹೇಳಿ ಬಿಜೆಪಿಯನ್ನು ಸರ್ವನಾಶ ಮಾ[...] ಹೊರಟಿರುವುದು ಬಿಜೆಪಿ ಪಕ್ಷಕ್ಕೆ ಖಂಡಿತವಾಗಿ[...] ಒಂದು ದೊಡ್ಡ ಆಘಾತವೇ ಸರಿ. ಹೀಗಾಗಿ ಯಡಿಯೂ[...] ನಿರ್ಗಮನದ ಮುಖಾಂತರ ದಕ್ಷಿಣ ಭಾರತದಲ್ಲಿ ಕ[...] ಪತಾಕೆ ಹಾರಿಸುವ ಬಿಜೆಪಿಯ ಆಸೆಯೂ ನೆಲಕಚ್ಚ[...]

● ಶ್ರೀ[...]



ಗಣಿ ಲೂಟಿಗೂ ಕೈಯಿಟ್ಟ ಈಶ್ವರಿಯ ನಾಲ್ಕು ಹಗರಣಗಳು

ಅಳಿಯ, ಮಗನ ಹೆಸರಲ್ಲಿ ಕೆಐಎಡಿಬಿಗೆ ಕನ್ನ



ಈಶ್ವರಪ್ಪ

ಕಂಬಿ ಎಣಿಸುವುದನ್ನೇ ಕಾಯಮ್ಮಾಗಿಸಿಕೊಂಡ ಗಣಿ ರೆಡ್ಡಿ, ಜೈಲು ಪಾಲಾಗಿ ಮುಖ್ಯಮಂತ್ರಿಗಿರಿಯನ್ನೇ ಕಳೆಕೊಂಡ ಯಡ್ಡಿ, ಜೈಲು ಯಾತ್ರೆ ಮುಗಿಸಿಬಂದ ಕಟ್ಟಾ ಮತ್ತು ಕೃಷ್ಣಯ್ಯ ಶೆಟ್ಟಿ ಮತ್ತು ಜೈಲಿನ ದಾರಿಯಲ್ಲೇ ಮುನ್ನಡೆಯುತ್ತಿರುವ ಉಪಮುಖ್ಯಮಂತ್ರಿ ಆರ್. ಅಶೋಕ್-

ಬಿಜೆಪಿ ಸರ್ಕಾರಕ್ಕೂ ಪರಪ್ಪನ ಅಗ್ರಹಾರಕ್ಕೂ ಇರುವ ಋಣಾನುಬಂಧದ ನಡೆದಾಡುವ ಕೊಂಡಿಗಳೋಪಾದಿಯಲ್ಲಿ ಇವರೆಲ್ಲ ಜೈಲು ಪಾಲಾದ ಮೇಲೆ ರಾಜ್ಯ ಬಿಜೆಪಿಯ ಹಾಲಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಈಶ್ವರಪ್ಪ ಮಾತ್ರ ಹೇಗೆ ಹೊರತಾಗಲು ಸಾಧ್ಯ?

ಪತ್ರಿಕೆ ಕಲೆಹಾಕಿರುವ ಮಾಹಿತಿ, ಸಿಕ್ಕ ದಾಖಲೆಗಳು, ನಡೆದುಹೋದ ಕರ್ಮಕಾಂಡಗಳೆಲ್ಲವನ್ನೂ ಒಗ್ಗೂಡಿಸಿ ಹೇಳಬೇಕೆಂದರೆ-ಯಾವ ಉಪಮುಖ್ಯಮಂತ್ರಿ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಈಶ್ವರಪ್ಪನವರನ್ನು ಬಿಜೆಪಿ ಕಾರ್ಯಕರ್ತರು ಹಗರಣಮುಕ್ತ ಶುದ್ಧ ಹಸ್ತ ಇದ್ದುದರಲ್ಲಿ ಸಾಚಾ ಮತ್ತು ಅಕಳಂಕಿತ, ಸಂಭಾವಿತ ಎಂದೆಲ್ಲ ಭಾವಿಸಿದ್ದರೋ ಅದು ಸುಳ್ಳಾಗಿದೆ. ಈಶ್ವರಪ್ಪ ಯಡ್ಡಿಯಷ್ಟೇ ಭ್ರಷ್ಟ ಮತ್ತು ಯಡ್ಡಿಗಿಂತಲೂ ಚಾಣಾಕ್ಷ ಎಂಬುದಕ್ಕೆ ಕೆಐಎಡಿಬಿಐ ಅಂದರೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿನ ನಿಗೂಢ ನಡಾವಳಿಗಳೇ ಸಾಕಷ್ಟು ಪುರಾವೆ ಕಲ್ಪಿಸುತ್ತವೆ.


ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಕೈಗಾರಿಕಾ ಮಂತ್ರಿ ನಿರಾಣಿಯ ಮೂಗಿನ ನೇರಕ್ಕೆ ಕೆಐಎಡಿಬಿಯಲ್ಲಾದ ಕೈಗಾರಿಕಾ ಶೆಡ್ಡುಗಳು ಮತ್ತು ಕೈಗಾರಿಕಾ ಭೂಮಿಯ ಮಂಜೂರಾತಿಯನ್ನು ಕೆದಕಿದರೆ ಉಪಮುಖ್ಯಮಂತ್ರಿ ಈಶ್ವರಪ್ಪ ಎಂಥಾ ದಗಲುಬಾಜಿ ಮತ್ತು ವಂಚಕನೆಂಬುದು ಬಯಲಾಗುತ್ತದೆ.

ಮೊದಲಿಗೆ ಬೆಂಗಳೂರಿನ ಪೀಣ್ಯಾ ಕೈಗಾರಿಕಾ ಪ್ರದೇಶದ ನಾಲ್ಕನೇ ಘಟ್ಟದ ಕೆಐಎಡಿಬಿ ಶೆಡ್ಡುಗಳ ಹಂಚಿಕೆಯನ್ನೇ ಲೆಕ್ಕ ಹಾಕಿದರೂ ಈಶ್ವರಪ್ಪನವರಿಗಾಗಲಿ, ಅವರ ಮಗ ಕಾಂತೇಶನಿಗಾಗಲಿ ಯಾವುದೇ ಕಾರಣಕ್ಕೂ ಕೈಗಾರಿಕಾ ಹಿನ್ನೆಲೆಯಾಗಲಿ, ಉದ್ದಿಮೆ ನಡೆಸಿದ ಅನುಭವವಾಗಲಿ ಇರಲಿಲ್ಲ, ಎಂತೆಂಥಾ ಉದ್ದಿಮೆದಾರರಿಗೇ ಕೆಐಎಡಿಬಿ ಶೆಡ್ಡುಗಳು ಕೈಗೆಟುಕುವುದು ದುರ್ಲಭವಾಗಿರುವ ಈ ಕಾಲದಲ್ಲಿ 2010 ರಲ್ಲಿ ಪೀಣ್ಯಾ ಕೈಗಾರಿಕಾ ಪ್ರದೇಶದ ನಾಲ್ಕನೇ ಘಟ್ಟದಲ್ಲಿ ಎರಡು ಭರ್ಜರಿ ಶೆಡ್ಡುಗಳನ್ನು ಕೆಐಎಡಿಬಿ ಮಂಜೂರು ಮಾಡುತ್ತದೆ. ತಲಾ 7682 ಅಡಿಗಳ ಎರಡು ಶೆಡ್ಡುಗಳನ್ನು ಈಶ್ವರಪ್ಪ ಪುತ್ರ ಕೆ.ಈ. ಕಾಂತೇಶನ ಹೆಸರಿಗೆ ಮಂಜೂರು ಮಾಡಿದ ಕೆಐಎಡಿಬಿ ಅಧಿಕಾರಿಗಳಿಗೆ ಉದ್ದಿಮೆಯ ಹಿನ್ನೆಲೆ, ಹಣಕಾಸಿನ ಸಾಮರ್ಥ್ಯ ಯಾವುದೂ ಮುಖ್ಯವಾಗುವುದಿಲ್ಲ, ಏಕೆಂದರೆ ಆ ಹೊತ್ತಿಗೆ ಈಶ್ವರಪ್ಪ ಯಡ್ಡಿ ಸಂಪುಟದಲ್ಲಿ ಇಂಧನ ಮಂತ್ರಿ!

ಯಾವುದೋ ಕಂಪೆನಿಯ ಬೋಗಸ್ ಪ್ರಾಜೆಕ್ಟ್ ರಿಪೋರ್ಟಿಗೆ ಜೆರಾಕ್ಸ್ ಮಾಡಿ ಖಾಲಿಬಿಟ್ಟ ಜಾಗಕ್ಕೆ ತನ್ನ ಹೆಸರನ್ನು ಬರೆದು ಕೈಗಾರಿಕಾ ಶೆಡ್ಡಿನ ರಿಯಾಯಿತಿ ದರವಾದ 93,95,000 ರೂಪಾಯಿಗಳನ್ನು ಮಗ ಕಾಂತೇಶ್ ಪಾವತಿಸಿದ ಒಂದೇ ಕಾರಣಕ್ಕೆ ಆತನ ಹೆಸರಿಗೆ ಎರಡು ಕೈಗಾರಿಕಾ ಶೆಡ್ಡುಗಳು ಮಂಜೂರಾಗಿದ್ದು ಈಶ್ವರಪ್ಪನವರ ಅಧಿಕಾರ ದುರುಪಯೋಗ ಮತ್ತು ಪ್ರಚ್ಛನ್ನ ಭ್ರಷ್ಟಾಚಾರಕ್ಕೆ ಕೇವಲ ಮುನ್ಸೂಚನೆ ಮಾತ್ರ.

ಇದಕ್ಕೂ ಮೊದಲೇ ಈಶ್ವರಪ್ಪ ಕುಟುಂಬದ ಮತ್ತೊಂದು ಕರ್ಮಕಾಂಡಕ್ಕೆ ಇದೇ ಕೆಐಎಡಿಬಿ ಕಾರಣವಾಗಿತ್ತು, ಅದು ಭರತ್ ಇಂಡಸ್ಟ್ರೀಸ್ ಹೆಸರಿನ ಹಗಲು ದರೋಡೆ. 2009 ರ ಜನವರಿ 6 ರಂದು ಅಸ್ತಿತ್ವಕ್ಕೆ ಬಂದ ಭರತ್ ಇಂಡಸ್ಟ್ರೀಸ್ ಎಂಬ ಬೋಗಸ್ ಕಂಪೆನಿಗೆ ಈಶ್ವರಪ್ಪ ಧರ್ಮಪತ್ನಿ ಜಯಲಕ್ಷ್ಮಿಯವರೇ ಮುಖ್ಯ ಪಾರ್ಟನರ್. ಇದರ ಇತರೆ ಪಾಲುದಾರರಾದರು ಯಾರೆಂದರೆ; ಒಬ್ಬ ಪಾಲುದಾರನಾಗಿ ಮಗ ಕಾಂತೇಶ ಮತ್ತು ಇನ್ನೊಬ್ಬಳು ಪಾಲುದಾರಳೇ ಆರ್. ಶಾಲಿನಿ!

ಈಕೆ ಕಾಂತೇಶನ ಪತ್ನಿ. ಅಂದರೆ ಈಶ್ವರಪ್ಪನವರ ಸೊಸೆ. ಪತ್ನಿ ಮಗ ಮತ್ತು ಸೊಸೆಯೇ ಪಾಲುದಾರಾಗಿರುವ ಭರತ್ ಇಂಡಸ್ಟ್ರೀಸ್ ಕೂಡ ನಾಮಕಾವಸ್ತೆಯ ಲೆಟರ್‌ಹೆಡ್ ಕಂಪೆನಿಯೇ ಹೊರತು ಅದಕ್ಕೊಂದು ಕಚೇರಿಯಾಗಲಿ, ಕಾರ್ಖಾನೆಯಾಗಲಿ, ಮಳಿಗೆ, ಶೆಡ್ಡು, ಗೋಡೌನು, ಮೆಷಿನ್ನು, ಕಾರ್ಮಿಕರು ಏನೇನೂ ಇರಲಿಲ್ಲ. ತಮ್ಮದು ಯಶಸ್ವೀ ಉದ್ದಿಮೆಯೆಂದೂ, ಭಾರಿಭಾರೀ ಉತ್ಪಾದನೆಗಳಿವೆಯೆಂದೂ ಕಳ್ಳಲೆಕ್ಕ ತೋರಿಸಿದ ಭರತ್ ಇಂಡಸ್ಟ್ರೀಸ್ ತನಗೆ ಸರ್ಕಾರದ ಕೈಗಾರಿಕಾ ಜಮೀನನ್ನು ಮಂಜೂರು ಮಾಡುವಂತೆ 2009 ರ ಜನವರಿ 12 ರಂದು ಅರ್ಜಿಯೊಂದನ್ನು ಹಾಕುತ್ತದೆ.



ಪತ್ನಿ ಜಯಲಕ್ಷ್ಮಿ

ಹೀಗೆ ಅರ್ಜಿ ಹಾಕಿದ ಕೇವಲ 24 ದಿನಗಳೊಳಗೆ ತುಮಕೂರು ರಸ್ತೆಯ ನೆಲಮಂಗಲ ಸಮೀಪದ ದಾಬಸ್ ಪೇಟೆಯ ಸೋಮಪುರ ಕೈಗಾರಿಕಾ ಎಸ್ಟೇಟಿನಲ್ಲಿ ಎರಡೆಕರೆ ಜಮೀನನ್ನು ಕೆಐಎಡಿಬಿ ಮಂಜೂರು ಮಾಡುತ್ತದೆ. ಅದಕ್ಕೆ ರಿಯಾಯಿತಿ ದರದಲ್ಲಿ ಶುಲ್ಕವನ್ನೂ ಕೆಐಎಡಿಬಿ ಕಟ್ಟಿಕೊಂಡಿದೆ. ನೆಟ್ಟಗೊಂದು ಕಚೇರಿಯಿಲ್ಲ, ಕಾರ್ಮಿಕರಿಲ್ಲ, ಉತ್ಪಾದನೆಯಿಲ್ಲ, ಏನೇನೂ ಇಲ್ಲದ ಈಶ್ವರಪ್ಪನವರ ಬೇನಾಮಿ ಕಂಪೆನಿಗೆ ಅದು ಅಸ್ತಿತ್ವಕ್ಕೆ ಬಂದ ಕೇವಲ 24 ದಿನದಲ್ಲಿ ಅದ್ಹೇಗೆ ಕೆಐಎಡಿಬಿ ಎರಡೆಕರೆ ಮಂಜೂರು ಮಾಡಲು ಸಾಧ್ಯ?



ಸೊಸೆ ಶಾಲಿನಿ ಮತ್ತು ಮಗ ಕಾಂತೇಶ್

ಇಲ್ಲಿ ಕೇವಲ ಕೈಗಾರಿಕಾ ಮಂತ್ರಿ ನಿರಾಣಿಯಷ್ಟೇ ಅಲ್ಲ ಈಶ್ವರಪ್ಪ, ಅವರ ಪತ್ನಿ, ಮಗ, ಸೊಸೆ ಎಲ್ಲರೂ ಅಪರಾಧಿಗಳೇ. ಇದು ಕೂಡ ಈಶ್ವರಪ್ಪ ಇಂಧನ ಮಂತ್ರಿಯಾಗಿದ್ದಾಗಲೇ ನಡೆದ ದುರಾಚಾರ.


ಇದಕ್ಕಿಂತಲೂ ಅಸಹ್ಯದ ಹಗರಣವೊಂದಕ್ಕೆ ಈಶ್ವರಪ್ಪ ಕಾರಣರಾಗಿದ್ದು 2010 ರಲ್ಲಿ. ಅದು ಬಳ್ಳಾರಿ ಜಿಲ್ಲೆಯ ಕುಡಿತಿನಿಯ ಸ್ಪಾಂಜ್ ಐರನ್ ಫ್ಯಾಕ್ಟರಿ ಸ್ಥಾಪಿಸುತ್ತೇನೆಂದು ಈಶ್ವರಪ್ಪ ಅಳಿಯ ಬಿ.ಎಚ್. ನಿರ್ಮಲ್‌ಕುಮಾರ್ ದೋಚಿದ 11.20 ಎಕರೆ ಅರಣ್ಯ ಭೂಮಿಯ ನಿಗೂಢ ಕರ್ಮಕಾಂಡ.

ಈಶ್ವರಪ್ಪನವರ ಹಿರಿಯ ಪುತ್ರಿ ಕನಕರನ್ನು ಶಿಕಾರಿಪುರದ ಬಿ.ಎಚ್. ನಿರ್ಮಲ್‌ಕುಮಾರ್ ಎಂಬಾತನಿಗೆ ಕೊಟ್ಟು ಮದುವೆ ಮಾಡಿದ್ದು 2001 ರಲ್ಲಿ, ಹೆಸರಿಗೆ ಲೋಕೋಪಯೋಗಿ ಇಲಾಖೆ ಕಂಟ್ರಾಕ್ಟರ್ ಆದ ನಿರ್ಮಲ್‌ಕುಮಾರ್ ಕುಮಾರಸ್ವಾಮಿ ಸಂಪುಟದಲ್ಲಿ ಈಶ್ವರಪ್ಪ ಮಂತ್ರಿಯಾದದ್ದೇ ನೀರಾವರಿ ಇಲಾಖೆಯಲ್ಲಿ ಕಾಂಟ್ರಾಕ್ಟು- ಬೋಗಸ್ ಬಿಲ್ ದಂಧೆಗೆ ನಿಂತ. ಕೇವಲ ಒಂದೇ ವರ್ಷದಲ್ಲಿ ನೂರು ಕೋಟಿ ಮೀರಿದ ಆಸ್ತಿವಂತನಾದ ಈತ ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾಗಿದ್ದೇ ರಿಯಲ್ ಎಸ್ಟೇಟ್ ದಂಧೆಗಿಳಿದ. ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಜಮೀನು, ಯಲಹಂಕದಲ್ಲಿ ಟೌನ್‌ಶಿಪ್, ಬಂಡಿಕೊಡಿಗೆಹಳ್ಳಿಯ ಕಾಂಪ್ಲೆಕ್ಸ್ ಇತ್ಯಾದಿಯಾಗಿ ಈಶ್ವರಪ್ಪ ಬಿಜೆಪಿ ಅಧ್ಯಕ್ಷನಾಗುವ ಹೊತ್ತಿಗೆ ಈತನ ಒಟ್ಟು ಆಸ್ತಿಪಾಸ್ತಿಗಳ ಮೊತ್ತ ಸಾವಿರ ಕೋಟಿಯನ್ನು ದಾಟಿತ್ತು.

ಇಷ್ಟೆಲ್ಲ ಇದ್ದ ಮೇಲೆ ಗಣಿ ರೆಡ್ಡಿಗಳಂತೆ ತಾವೂ ಕೂಡ ಬಳ್ಳಾರಿಯ ಅದಿರು ಲೂಟಿಗೆ ಕೈಹಾಕದಿದ್ದರೆ ಹೇಗೆ?


ಇಂಥದೊಂದು ಲೆಕ್ಕ ಹಾಕಿಯೇ ಅಳಿಯ ನಿರ್ಮಲ್ ಕುಮಾರ್ ಹುಟ್ಟುಹಾಕಿದ್ದು ವಿಷ್ಣುಪ್ರಿಯ ಎಂಟರ್‌ಪ್ರೈಸಸ್ ಎಂಬ ಬೋಗಸ್ ಕಂಪೆನಿಯನ್ನು. ತಾವು ಸ್ಪಾಂಜ್ ಐರನ್ ಫ್ಯಾಕ್ಟರಿಯೊಂದನ್ನು ಸ್ಥಾಪಿಸುತ್ತೇವೆಂದೂ ತಮಗೆ ಬಳ್ಳಾರಿಯಲ್ಲಿ ಅದಿರು ಸಮೃದ್ಧ ಭೂಮಿಯನ್ನು ಮಂಜೂರು ಮಾಡಬೇಕೆಂದೂ 2010 ರ ಜೂನ್ ತಿಂಗಳಲ್ಲಿ ನಿರ್ಮಲ್‌ಕುಮಾರ್ ಕರ್ನಾಟಕ ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಾನೆ. ಯಾವುದೇ ತಾಂತ್ರಿಕ ನೈಪುಣ್ಯ, ಅನುಭವ, ಬಂಡವಾಳ ಮತ್ತು ಮೂಲ ಸೌಕರ್ಯವಿಲ್ಲದ ಕೇವಲ ಲೆಟರ್‌ಹೆಡ್ ಆಧಾರದ ವಿಷ್ಣುಪ್ರಿಯ ಎಂಟರ್‌ಪ್ರೈಸಸ್ ಕಂಪೆನಿ ಸಲ್ಲಿಸಿದ ಅರ್ಜಿಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅಧ್ಯಕ್ಷತೆಯ SWC ಅಂದರೆ ಸಿಂಗಲ್ ವಿಂಡೋ ಕಮಿಟಿ ಆತುರಾತುರವಾಗಿ ಪರಿಶೀಲಿಸುತ್ತದೆ.

ನಿಜಕ್ಕೂ ವಿಷ್ಣುಪ್ರಿಯ ಎಂಟರ್‌ಪ್ರೈಸಸ್‌ಗೆ ಸ್ಪಾಂಜ್ ಐರನ್ ಕಾರ್ಖಾನೆ ಸ್ಥಾಪಿಸುವ ಸಾಮರ್ಥ್ಯವಿದೆಯೇ? ಅದರ ಉದ್ದೇಶ ಪ್ರಾಮಾಣಿಕವೇ? ಇತ್ಯಾದಿ ಯಾವುದೂ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಅಧಿಕಾರಿಗಳಿಗೆ ಮುಖ್ಯವಾಗುವುದಿಲ್ಲ. ಜೊತೆಗೆ ಉಕ್ಕು ಘಟಕಕ್ಕೆಂದು 9 ಕೋಟಿ 75 ಲಕ್ಷದ ಯೋಜನಾ ವರದಿಯನ್ನೂ ನಿರ್ಮಲ್‌ಕುಮಾರ್ ಮಂಡಿಸುತ್ತಾನೆ. ರಿಯಲ್ ಎಸ್ಟೇಟ್ ಮತ್ತು ಬೋಗಸ್ ದಂಧೆಯ ಹೊರತಾಗಿ ಬೇರೇನೂ ಗೊತ್ತಿಲ್ಲದ ಅಳಿಯ ನಿರ್ಮಲ್‌ಕುಮಾರ್ ಸರಿಸುಮಾರು 10 ಕೋಟಿಯಷ್ಟು ದುಡ್ಡನ್ನು ಎಲ್ಲಿಂದ ತಂದ? ಹೇಗೆ ಜಮಾಯಿಸಿದ? ಎಂಬ ಬಗ್ಗೆಯೂ ಕೈಗಾರಿಕಾ ಸಚಿವಾಲಯದಲ್ಲಿ ಸ್ಪಷ್ಟನೆಯಿರಲಿಲ್ಲ.



ದೇವಭಕ್ತ ಕಳ್ಳ ಈಶ್ವರಿ

ಕೋಣ ಈದೈತೆ ಎಂದರೆ ಕೊಟ್ಟಿಗೆಗೆ ಕಟ್ಟು ಎಂಬಂತೆ ಮುಖ್ಯಮಂತ್ರಿ ಯಡ್ಡಿ ನೇತೃತ್ವದ ಉನ್ನತಾಧಿಕಾರ ಸಮಿತಿ ನಿರ್ಮಲ್ ಕುಮಾರ್‌ನ ಬೋಗಸ್ ಕಂಪೆನಿಗೆಂದು ಬಳ್ಳಾರಿ ಸಮೀಪದ ಕುಡಿತಿನಿಯಲ್ಲಿ 2010ರ ಆಗಸ್ಟ್‌ನಲ್ಲಿ 11.20 ಎಕರೆ ಅರಣ್ಯ ಭೂಮಿಯನ್ನು ಮಂಜೂರು ಮಾಡುತ್ತದೆ. ಅದೂ ಅದಿರು ಸಂಪನ್ನ ಗಣಿಗಾರಿಕೆ ನಿಷಿದ್ಧ ಭೂಮಿ. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿಯಿಲ್ಲದೆ, ಕೇಂದ್ರ ಸರ್ಕಾರದ ತಾಂತ್ರಿಕ ಮಂಜೂರಾತಿಯಾಗಲಿ, ಅರಣ್ಯ ಇಲಾಖೆಯ ಅನುಮತಿಯಾಗಲಿ ಏನೊಂದು ಇಲ್ಲದೆ ಈಶ್ವರಪ್ಪ ಅಳಿಯನ ಬೋಗಸ್ ಕಂಪೆನಿಗೆ ಸರ್ಕಾರಿ ಭೂಮಿ ಧಾರೆಯೆರೆಯುತ್ತದೆ ಬಿಜೆಪಿ ಸರ್ಕಾರ.



ಈಶ್ವರಿ ಮಗ ಕಾಂತೇಶ್

ಈ ವಿಷ್ಣುಪ್ರಿಯ ಎಂಟರ್‌ಪ್ರೈಸಸ್‌ನ ಇತರೇ ಪಾಲುದಾರರೆಲ್ಲ ಯಾರ್‍ಯಾರೆಂದು ಕೆದಕಹೊರಟರೆ ಇಲ್ಲೂ ಕೂಡಾ ಈಶ್ವರಪ್ಪ ಪತ್ನಿ ಜಯಲಕ್ಷ್ಮಿ ಮತ್ತು ಮಗ ಕಾಂತೇಶ್ ಹಾಗೂ ಮಗಳು ಕನಕಳ ಹೆಸರೇ ಮುಖ್ಯವಾಗಿತ್ತು. ಯಾವುದೇ ಪೂರ್ವಾನುಭವದ ಹಿನ್ನೆಲೆ, ಸೌಕರ್ಯಗಳಿಲ್ಲದ, ಕಾನೂನುಬದ್ಧತೆಯಿಲ್ಲದ ಈಶ್ವರಪ್ಪ ಅಳಿಯ ಬೋಗಸ್ ಕಂಪೆನಿಗೆ ಬಳ್ಳಾರಿಯ ಕುಡಿತಿನಿ ಬಳಿ ಕೆಐಎಡಿಬಿ ಮಂಜೂರು ಮಾಡಿದ 11.20 ಎಕರೆ ಅರಣ್ಯ ಭೂಮಿಗೆ ಈಶ್ವರಪ್ಪನವರ ಮಂತ್ರಿಗಿರಿಯ ಪ್ರಭಾವ ಮತ್ತು ಅಧಿಕಾರದ ಹೊರತಾಗಿ ಬೇರೇನೂ ಕಾರಣವಿರಲಿಲ್ಲ. ಮಾರುಕಟ್ಟೆ ದರದ ಅರ್ಧಕ್ಕಿಂತಲೂ ಕಮ್ಮಿದರಕ್ಕೆ, ಅರಣ್ಯ ರಕ್ಷಣಾ ಕಾಯ್ದೆಯನ್ನೇ ಉಲ್ಲಂಘಿಸಿ, ಗಣಿಗಾರಿಕೆಯ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ ಕುಡಿತಿನಿಯಲ್ಲಿ ಕೆಐಎಡಿಬಿ ಜಮೀನು ಮಂಜೂರು ಮಾಡಿದ್ದೇ ದೊಡ್ಡ ಹಗರಣವಾಗಿತ್ತು.

ಅರಣ್ಯ ಭೂಮಿಯನ್ನು ಯಾರ್‍ಯಾರಿಗೋ, ಯಾವ್ಯಾವುದಕ್ಕೋ ಮಂಜೂರು ಮಾಡಲು ಕೆಐಎಡಿಬಿಗಾಗಲಿ, ಕೈಗಾರಿಕಾ ಇಲಾಖೆಗಾಗಲಿ ಅಧಿಕಾರ ಕೊಟ್ಟವರ್‍ಯಾರು? ಇಂಥದ್ದೇ ಉದ್ದೇಶಕ್ಕೆಂದು ಇನ್ನೂ ಹತ್ತಾರು ಕಂಪೆನಿಗಳು ಸಾಲುಗಟ್ಟಿ ನಿಂತಿರುವಾಗ ಅವೆಲ್ಲವನ್ನೂ ಬದಿಗೊತ್ತಿ ಈಶ್ವರಪ್ಪ ಅಳಿಯನ ಕಂಪೆನಿಗೇ ಭೂಮಿ ಮಂಜೂರು ಮಾಡಿದ್ದೇಕೆ? ಯಾವ ಆಧಾರದ ಮೇಲೆ ಸ್ಪಾಂಜ್ ಐರನ್ ಘಟಕಕ್ಕೆ ಸರ್ಕಾರ ಅನುಮತಿ ನೀಡಿದೆ? ಕಂಪೆನಿಗಳ ಅಧಿನಿಯಮದಂತೆ ಕಾಟಾಚಾರಕ್ಕೂ ನೀತಿ-ನಿಯಮಾವಳಿಯನ್ನು ಪಾಲಿಸದ ವಿಷ್ಣುಪ್ರಿಯ ಎಂಟರ್‌ಪ್ರೈಸಸ್ ಕಂಪೆನಿಯ ಅಸಲೀಯತ್ತನ್ನು ಪರಿಶೀಲಿಸಿದವರ್‍ಯಾರು? ಈ ಸಂಬಂಧದ ದಾಖಲಾತಿಗಳನ್ನು ಇವತ್ತಿಗೂ ರಹಸ್ಯವಾಗಿಟ್ಟಿರುವುದು ಏಕೆ? ಸ್ಪಾಂಜ್ ಐರನ್ ಘಟಕಕ್ಕೆಂದು ಬಂಡವಾಳವಾಗಿ 9 ಕೋಟಿ 75 ಲಕ್ಷದಷ್ಟು ರೂಪಾಯಿಗಳ ಭಾರೀ ಮೊತ್ತವನ್ನು ಪಾವತಿಸಿದವರ್‍ಯಾರು? ಆ ಪಾಟಿ ಮೊತ್ತವನ್ನು ಯಾವ ಬ್ಯಾಂಕಿನ ಮೂಲಕ ರವಾನಿಸಲಾಯ್ತು? ಇಷ್ಟೊಂದು ಬೃಹತ್ ಮೊತ್ತದ ಹಣದ ಬಗ್ಗೆ ಏಕೆ ಈತನಕ ಆಡಿಟ್ ವರದಿಯಲ್ಲಿ ಪ್ರಸ್ತಾಪವಿಲ್ಲ? ಹಾಗೆ ಜಮೀನು ಮಂಜೂರಾದ ನಂತರವೂ ಈತನಕ ಏಕೆ ಸ್ಪಾಂಜ್ ಐರನ್ ಘಟಕವನ್ನು ಪ್ರಾರಂಭಿಸಿಲ್ಲ? ಇದರರ್ಥ ನಕಲಿ ಕಂಪೆನಿ ಹುಟ್ಟುಹಾಕಿ ಅದಿರು ಸಮೃದ್ಧ ಭೂಮಿ ದೋಚುವುದೊಂದೇ ಈಶ್ವರಪ್ಪ ಅಳಿಯನ ಉದ್ದೇಶವಾಗಿತ್ತೇ?

ಈ ಬಗ್ಗೆ ತನಿಖೆ ಮಾಡುವವರ್‍ಯಾರು?

ಲೋಕಾಯುಕ್ತ ತನಿಖೆಯಾಗಲಿ, ಸಿಬಿಐ ತನಿಖೆಯೇ ಆಗಲಿ ಅಳಿಯನ ಸಮೇತ ಈಶ್ವರಪ್ಪ ಜೈಲು ಪಾಲಾಗುವುದಂತೂ ನಿಶ್ಚಿತ.

■ ರಾ.ಸೋಮನಾಥ್

ಹೊಸದುರ್ಗದಲ್ಲಿ ಪ್ರತಿನಿತ್ಯ ಡಿಸಿಎಂ ಬಂಟರ ಅದಿರು ಲೂಟಿ


ಬಳ್ಳಾರಿಯ ಕುಡಿತಿನಿಯಲ್ಲಿ ಸ್ಪಾಂಜ್ ಐರನ್ ಫ್ಯಾಕ್ಟರಿ ಪ್ರಾರಂಭಿಸುವ ಈಶ್ವರಪ್ಪನವರ ದೂರಾಲೋಚನೆಗೆ ಕೇವಲ 11.20 ಎಕರೆ ಅದಿರು ಸಮೃದ್ಧ ಜಮೀನಷ್ಟೇ ಕಾರಣವಲ್ಲ, ದೊಡ್ಡದೊಂದು ಲೂಟಿಯ ಲೆಕ್ಕ ಹಾಕಿಯೇ ಈಶ್ವರಪ್ಪ ತನ್ನ ಅಳಿಯನನ್ನು ಛೂಬಿಟ್ಟಿದ್ದರೆಂಬುದಕ್ಕೆ ಸ್ಪಷ್ಟ ಪುರಾವೆ ಸಿಗುವುದು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಮಾಡದಕೆರೆಯಲ್ಲಿ!


ಬೆಟ್ಟಗುಡ್ಡಗಳಿಂದಾವೃತ್ತ ಅದಿರು ಸಂಪನ್ನ ಕಾಡಿರುವ ಈ ಪ್ರದೇಶದಲ್ಲೇ ಸರಿಸುಮಾರು 30ಕ್ಕೂ ಅಧಿಕ ಎಕರೆಗಳಷ್ಟು ಅರಣ್ಯ ಪ್ರದೇಶವನ್ನು ಈಶ್ವರಪ್ಪನ ಮಗ ಕಾಂತೇಶ ಆಕ್ರಮಿಸಿದ್ದಾನೆ. ಈ ಕಾರಣಕ್ಕೇ ಗೂಳಿಹಟ್ಟಿ ಶೇಖರ್‌ಗೂ ಈಶ್ವರಪ್ಪಗೂ ಜಿದ್ದಾಜಿದ್ದಿ ಶುರುವಾಯಿತಂತೆ. 30 ಎಕರೆಯಲ್ಲದೇ ಅನಧಿಕೃತವಾಗಿ ಸರಿಸುಮಾರು 50 ಎಕರೆ ಅರಣ್ಯದಲ್ಲಿ ಈಶ್ವರಪ್ಪ ಪಟಾಲಮ್ ಅದಿರು ದೋಚುತ್ತಿದೆ. ಹೀಗೆ ದೋಚಿದ ಅದಿರನ್ನು ಕಬ್ಜಾವಾಗಿ ಮಾರುಕಟ್ಟೆಗೆ ತರಬೇಕೆಂದರೇ ಸ್ಪಾಂಜ್ ಐರನ್ ಫ್ಯಾಕ್ಟರಿ ಬೇಕಲ್ಲವೆ?

ತಲೆಗಾರಿಕೆ ಮತ್ತು ಗಣಿಗಾರಿಕೆಯಲ್ಲಿ ಈಶ್ವರಪ್ಪ ಬಳ್ಳಾರಿಯ ಗಣಿ ರೆಡ್ಡಿಗಳಿಗಿಂತಲೂ ಖತರ್‌ನಾಕ್ ಎಂಬುದಕ್ಕೆ ಇದಕ್ಕಿಂತ ಬೇಕೆ?

ಟಿಕೆಟ್ ಟ್ರಾಫಿಕ್

ಹರಿ ಚಿತ್ತ ಉತ್ತರ ಕನ್ನಡದತ್ತ!






ಉತ್ತರ ಕನ್ನಡದ ರಾಜಕಾರಣದ ಅಂಗಳದಲ್ಲಿ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆ ರಂಗುತಾಲೀಮು ರಂಗು-ರಂಗಾಗಿ ಮೇಳೈಸಿಬಿಟ್ಟಿದೆ! ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಅಭ್ಯರ್ಥಿಗಳ ಆಯ್ಕೆಗೆ ಅಷ್ಟೂ ಪಕ್ಷಗಳಲ್ಲಿ ನಡೆಯುತ್ತಿರುವ ನಿರ್ಲಜ್ಜ ಕಸರತ್ತನ್ನು ನಿಬ್ಬೆರಗಾಗಿ ನೋಡುತ್ತಿರುವ ಜಿಲ್ಲೆಯ ಜನರು ಎರಡೂ ಎಲೆಕ್ಷನ್ ಒಟ್ಟೊಟ್ಟಿಗೇ ಬರಬಹುದಾ ಎಂಬ ಅನುಮಾನದಿಂದ ಚರ್ಚೆ ನಡೆಸುತ್ತಿದ್ದಾರೆ. ಎಂಪಿ-ಎಮ್ಮೆಲ್ಲೆ ಆಗುವ ಅವಸರಕ್ಕೆ ಬಿದ್ದಿರುವ ದಂಡ-ಪಿಂಡ ಪುಢಾರಿಗಳ ಮಳ್ಳಾಟ ದಿನಕ್ಕೊಂದು ಆಯಾಮ ಪಡೆಯುತ್ತಿದ್ದರೆ, ಟಿಕೆಟ್ ಕೊಡಿಸುವ ಗುತ್ತಿಗೆ ಹಿಡಿದಿರುವ 'ದೊಡ್ಡವರ' ಡ್ಯಾನ್ಸ್ ಶೋಗಳಂತೂ ತುಂಬ ಮನೋರಂಜಕವಾಗಿ ಮೂಡಿಬರುತ್ತಿದೆ.


ಟಿಕೆಟ್ ತಂತ್ರ-ತರಲೆಯ ಸದ್ದು ಆಳುವ ಹಾಳು ಬಿಜೆಪಿ ಮತ್ತು ಜೆಡಿಎಸ್‌ಗಿಂತ ಕಾಂಗ್ರೆಸ್‌ನಲ್ಲೇ ಜೋರು. ಕಾಂಗ್ರೆಸ್‌ನ ವೀಕ್ಷಕರ ಎರಡೆರಡು ತಂಡಗಳು ಕಳೆದ ಒಂದೇ ವಾರದಲ್ಲಿ ಒಂದರ ಹಿಂದೊಂದರಂತೆ ಬಂದುಹೋಗಿವೆ. ಒಂದು ಲೋಕಸಭಾ ಕ್ಯಾಂಡಿಡೇಟ್ ಆಗುವವರ ಜಾತಕ ನೋಡಲು ಬಂದರೆ, ಇನ್ನೊಂದು ಅಸೆಂಬ್ಲಿ ಟಿಕೆಟ್ ಆಕಾಂಕ್ಷಿಗಳ ಇತಿಹಾಸ-ಭೂಗೋಳ ಅಧ್ಯಯನ ಮಾಡಿ ಕೊಂಡುಹೋಗಿದೆ. ಈ ತಂಡಗಳು ಅದೆಂಥದೇ ವರದಿ ಹೈಕಮಾಂಡಿಗೆ ಕೊಟ್ಟರೂ ಕಾಂಗ್ರೆಸ್ ಸಂಸ್ಕೃತಿಯಲ್ಲಿ ಅನಿರೀಕ್ಷಿತ-ಅನಪೇಕ್ಷಿತ-ಅನಾಮಧೇಯ ಹುರಿಯಾಳು ಪ್ರತ್ಯಕ್ಷವಾಗಿ, ಅದೇ ಭಿನ್ನಮತಕ್ಕೆ ಬೀಜವಾಗಿ ಆ ಪಾರ್ಟಿ ಹಳ್ಳ ಹಿಡಿದುಹೋಗೋದು ಲಾಗಾಯ್ತಿನ ಕರ್ಮವೇ, ಬಿಡಿ!


ಜಿಲ್ಲೆಯ ರಾಜಕೀಯ ರಾಜಧಾನಿಯಾದ ಶಿರಸಿಗೆ ಮೊದಲು ಬಂದಿದ್ದು ಕೇರಳದ ಮಾಜಿ ಮಂತ್ರಿ ಮುರಳಿ ಎಂಬಾತನ ಟೀಮು. ಈ ತಂಡ ಬೆಳಗಾವಿಯ ಖಾನಾಪುರ ಮತ್ತು ಕಿತ್ತೂರು ಒಳಗೊಂಡಿರುವ ಉತ್ತರ ಕನ್ನಡ ಲೋಕಸಭಾ ಕ್ಷೇತ್ರಕ್ಕೆ ಯಾರು_ಅಭ್ಯರ್ಥಿಯಾದರೆ ಹೇಗೆ ಎಂಬ ಸಣ್ಣದೊಂದು ಸಮೀಕ್ಷೆ ಕಾರ್ಯಕರ್ತರ ನಡುವೆ ಮಾಡಿತು. ಜಿಲ್ಲಾ ಕಾಂಗ್ರೆಸ್ಸನ್ನು ದಾದಾಗಿರಿಯಿಂದ ಕಬ್ಜಾ ಮಾಡಿಕೊಂಡಿರುವ 'ಡಾನ್' ದೇಶಪಾಂಡೆ ಮತ್ತವನ ಮಗ ಅಪರಿಚಿತ ಪ್ರಶಾಂತ ದೇಶಪಾಂಡೆ ಮಾತ್ರ ಪ್ರಬಲ ಕ್ಯಾಂಡಿಡೇಟ್ ಎಂಬ ಏಕಪಕ್ಷೀಯ ವಾದ ಈ ಟೀಮಿನ ಮುಂದೆ ಮಂಡನೆಯಾಯ್ತು. ಯಲ್ಲಾಪುರ-ಮುಂಡಗೋಡ್-ಬನವಾಸಿ ಬ್ಲಾಕ್ ಬಿಟ್ಟರೆ ಉಳಿದ ಹನ್ನೊಂದು ತಾಲ್ಲೂಕ್ ಕಮಿಟಿಗಳು ದೇಶಪಾಂಡೆಯ ವಂಶಾಡಳಿತಕ್ಕೆ ಜೈ ಹಾಕಿದವು. ಮೂರು ಬ್ಲಾಕ್‌ಗಳು ಮಾತ್ರ ಜಿಲ್ಲೆಯ 'ವಲಸೆ ಸೊಸೆ' ಮಾರ್ಗರೆಟ್ ಆಳ್ವ ಅಥವಾ ಆಕೆಯ ಕುಲೋದ್ಧಾರಕ ನಾಲಾಯಕ್ ನಿವೇದಿತ್ ಆಳ್ವ ಅಭ್ಯರ್ಥಿಯಾಗಲಿ ಎಂದು ಅಹವಾಲು ತುಂಬ ಕ್ಷೀಣ ಧ್ವನಿಯಲ್ಲಿ ಅರುಹಿದವು. ಅಲ್ಲಿಗೆ ಉತ್ತರ ಕನ್ನಡ ಕಾಂಗ್ರೆಸ್ ಎಂದರೆ ಅಪ್ಪ-ಮಗ ಅಥವಾ ಅಮ್ಮ-ಮಗನ ಪಾರ್ಟಿ ಎಂಬುದು ವೀಕ್ಷಕರಿಗಷ್ಟೇ ಅಲ್ಲ, ಇಡೀ ಜಿಲ್ಲೆಗೆ ಖಾತ್ರಿಯಾಗಿ ಹೋಯ್ತು!


ಈ ನಾಲ್ಕು ಹೋಪ್‌ಲೆಸ್‌ಗಳ ಜತೆ ಇನ್ನೆರಡು ಭರವಸೆಯ ಹೆಸರು ವೀಕ್ಷಕರ ಗಮನಕ್ಕೆ ಬಂತು. ಒಂದು ಮ್ಯಾಗಿಯಜ್ಜಿಯ ಗುಲಾಮ ರವೀಂದ್ರನಾಥ ನಾಯ್ಕ ಯಾನೆ ಎ.ರವೀಂದ್ರನಾಯ್ಕ ಎಂಬ ತರಹೇವಾರಿ ಹೋರಾಟಗಾರ; ಇನ್ನೊಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್ ಹೆಸರು. ರವಿನಾಯ್ಕ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯ ಕಾಗೇರಿ ಮಾಣಿ ಎದುರು ದೊಡ್ಡ ಅಂತರದಲ್ಲಿ ಪಲ್ಟಿ ಹೊಡೆದ ಪರಾಕ್ರಮಿ. ಈತನನ್ನು ಅದೆಷ್ಟೇ ಜನಪರ ಹೋರಾಟ ಮಾಡಿದರೂ ಮಂದಿ ಮಾತ್ರ ಈತನನ್ನು ನಂಬುತ್ತಿಲ್ಲ, ಕಾರಣ ಆತ ಹೋರಾಟಕ್ಕೆ ಹರಿಸುವ ಹಣದ ಬಗೆಗಿನ ಅನುಮಾನ ಮತ್ತು ಮುಳುಗಿರುವ ಆತನ ಕಲ್ಪತರು ಬ್ಯಾಂಕು. ಇಷ್ಟಾಗಿಯೂ ರವಿ ದೇಶಪಾಂಡೆ ಹಿಂಬಾಲಕರಷ್ಟು ಹರಾಮಿಯಾಗಲಿ-ಜನಪೀಡಕನಾಗಲಿ ಅಲ್ಲ. ಹಿಂದುಳಿದ ವರ್ಗದ ಗಟ್ಟಿ ಧ್ವನಿಯಾದ ರವಿ ಜಿಲ್ಲೆಯ ಬಹುಸಂಖ್ಯಾತ ದೀವರ ಕುಲಕಂಠೀರವ.













ಈ ರವಿ ಬೆಳೆದರೆ ತನ್ನ ಮೇಲ್ವರ್ಗದ ಪಾಳೆಗಾರಿ ರಾಜಕಾರಣಕ್ಕೆ ತೊಂದರೆಯಾಗುತ್ತದೆಂಬ ದುರಾಲೋಚನೆಯಿಂದ ದೇಶಪಾಂಡೆ ಆತನಿಗೆ ನಿರಂತರ ಅಡ್ಡಗಾಲು ಹಾಕುತ್ತಲೇ ಬಂದಿದ್ದಾನೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಹಠ ಹಿಡಿದು ರವಿಯನ್ನು ಸೋಲಿಸಿದ್ದೇ ಮನೆಮುರುಕ ದೇಶಪಾಂಡೆ. ತನ್ನ ಮಗ ಪ್ರಶಾಂತನನ್ನು ಕಳೆದ ಬಾರಿಯೇ ಅಭ್ಯರ್ಥಿಯಾಗಿಸಲು ಶತಪ್ರಯತ್ನ ಮಾಡಿದ್ದ ದೇಶಪಾಂಡೆ ಈ ಬಾರಿ ಬೀಗ- ಎನ್‌ಸಿಪಿಯ ಕೇಂದ್ರ ಮಂತ್ರಿ ಪ್ರಫುಲ್ ಪಟೇಲ್ (ಪ್ರಶಾಂತನಿಗೆ ಹೆಣ್ಣು ಕೊಟ್ಟ ಮಾವ) ರ ಸಕ್ಕರೆ ಲಾಬಿ ಮೂಲಕ ಕರಾರುವಾಕ್ ತಂತ್ರಗಾರಿಕೆ ನಡೆಸಿದ್ದಾರೆ. ಅಮಾವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ ಜಿಲ್ಲೆಗೆ ಬರುವ ಮ್ಯಾಗಿ ಮತ್ತಾಕೆಯ ಪೊಕ್ಕು ಪುತ್ರರತ್ನ ನಿವೇದಿತ್‌ಗಿಂತ ಈ ಪ್ರಶಾಂತ ಪ್ರಬಲ ಅಭ್ಯರ್ಥಿ ಆಗಬಲ್ಲನೆಂಬುದು ನಿಜ.


ಹಾಗಂತ ಈ ಪ್ರಶಾಂತನೂ ಜಿಲ್ಲೆಯ ಕಷ್ಟ-ಸುಖ ಗೊತ್ತಿರುವ ರಾಜಕಾರಣಿಯೇನಲ್ಲ, ಮುಂಬೈನ ಮಾವನ ಮನೆ ಸಾಮ್ರಾಜ್ಯದಲ್ಲೇ ಈತನ ವಕೀಲಿಕೆ ಮತ್ತು ಉದ್ಯಮ ವೃತ್ತಿ, ಈ ಪ್ರಶಾಂತ ಅವನಪ್ಪನಿಗಿಂತಲೂ ಬೆಟರ್ ಕ್ಯಾಂಡಿಡೇಟ್. ದೊಡ್ಡ ದೇಶಪಾಂಡೆ ತಾನೇ ಸ್ವತಃ ನಿಂತರೆ ಲೋಕಸಭೆಗೆ ಗೆಲ್ಲಲಾರ. ಆದರೆ ಜಿಲ್ಲೆಯಲ್ಲಿರುವ ಕಾಂಗ್ರೆಸ್ ಅಲೆ, ತನ್ನ ಹಿಡಿತ ಮತ್ತು ಮಗನನ್ನು ಹೊಸ ಮುಖದ ಇಕ್ವೇಷನ್ ಹೆಣೆದು ಮಗನನ್ನು ಗೆಲ್ಲಿಸಬಲ್ಲ. ಈ ತಂತ್ರಗಾರಿಕೆ ಮ್ಯಾಗಿಯಿಂದ ಸಾಧ್ಯವೇ ಇಲ್ಲ. ಆಕೆಗೆ ಜಿಲ್ಲೆಯ ರಾಜಕಾರಣದ ನಾಡಿಬಡಿತವೇ ಈವರೆಗೆ ಅರ್ಥವಾಗಿಲ್ಲ.


ಕಾಂಗ್ರೆಸ್ ಅಧಿನಾಯಕಿ ಸೋನಿಯಾರ ಅಂತಃಪುರದಲ್ಲಿ ತುಂಬಾ ಪವರ್‌ಫುಲ್ ಎಂದು ಮ್ಯಾಗಿಯನ್ನು ನಂಬಿದ್ದ ಆಕೆಯ ಹಿಂಬಾಲಕರೀಗ ಅತಂತ್ರರಾಗಿದ್ದಾರೆ. ಮ್ಯಾಗಿಗೆ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಆಸ್ಕರ್, ಅಹ್ಮದ್ ಪಟೇಲ್ ರಾಹುಲ್ ಗಾಂಧಿಯಂಥವರೇ ಕಿಮ್ಮತ್ತು ಕೊಡುತ್ತಿಲ್ಲ. ದೇಶಪಾಂಡೆ ತನ್ನ ಬೀಗರ ಬಳಗದ ಬಲ-ಹಣದ ಹಿಕಮತ್ತಿನಿಂದ ಮ್ಯಾಗಿಗಿಂತಲೂ ಈಗ ದಿಲ್ಲಿ ದರ್ಬಾರಲ್ಲಿ ಪ್ರಭಾವಶಾಲಿ. ಇಂಥ ದೇಶಪಾಂಡೆ ತಾನಾಗಲಿ, ತನ್ನ ಮಗ ನಿವೇದಿತ್ ಆಗಲಿ ಅಥವಾ ತನ್ನ ನಂಬಿಗಸ್ಥ ಬಂಟ ರವಿನಾಯ್ಕನಾಗಲಿ ಎಂಪಿ ಕ್ಯಾಂಡಿಡೇಟಾಗುತ್ತೇವೆಂದರೆ ಸಹಿಸಲು ಸಾಧ್ಯವಿಲ್ಲ ಎಂಬುದು ಮ್ಯಾಗಿಗೆ ಈಗ


ಕಾಂಗ್ರೆಸ್‌ನಲ್ಲಿ ನೂಕುನುಗ್ಗಲು !!











ಅಸೆಂಬ್ಲಿ ಎಲೆಕ್ಷನ್ ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಪಡೆಯಲೆಂದು ಮೊನ್ನೆ ಕಾಂಗ್ರೆಸ್ ವೀಕ್ಷಕರ ಟೀಮೊಂದು ಜಿಲ್ಲೆಗೆ ಬಂದಿತ್ತು. ಈ ವೀಕ್ಷಕರಿಗೆ ಯಾರಿಗೆ ಟಿಕೆಟ್ ಕೊಡಬಹುದೆಂದು ಶಿಫಾರಸ್ಸು ಮಾಡುವ ಅಧಿಕಾರ ಇರಲಿಲ್ಲ, ಅರ್ಜಿಯನ್ನು ಕೆಪಿಸಿಸಿಗೆ ಒಪ್ಪಿಸುವುದಷ್ಟೆ ಈ 'ಪೋಸ್ಟ್‌ಮ್ಯಾನ್'ಗಳ ಕೆಲಸವಾಗಿತ್ತು, ಆದರೂ ಕಾಂಗ್ರೆಸ್‌ನ ಕೆಲವು ಬುದ್ಧಿಗೇಡಿ-ಲಜ್ಜೆಗೇಡಿ ಎಮ್ಮೆಲ್ಲೆ ಹಪಾಹಪಿಯ ಪುಢಾರಿಗಳು ನೂರಾರು ಬೆಂಬಲಿಗರ ಕರೆತಂದು ತಮಗೆ ಜಯಕಾರ ಹಾಕಿಸಿಕೊಂಡು ಕಳ್ಳ ಹಣದ ತಾಕತ್ತು ವೀಕ್ಷಕರಿಗೆ ತೋರಿಸಿದರು.

ಅದಿರು ಕಳ್ಳರಾದ ಸತೀಶ್ ಸೈಲ್, ಶಿವರಾಮ ಹೆಬ್ಬಾರ್, ಸರ್ಕಾರಿ ಗುತ್ತಿಗೆದಾರ ವಂಶದ ಕಣ್ಮಣಿ ರವಿಕುಮಾರ್ ಶೆಟ್ಟಿ (ಮಾಜಿ ಶಾಸಕ ದಿವಂಗತ ಮೋಹನ ಶೆಟ್ಟಿ ಮಗ), ಹೆಂಡೋದ್ಯಮಿ ಭೀಮಣ್ಣ ನಾಯ್ಕ (ಮಾಜಿ ಸಿಎಂ ಬಂ ಭಾಮೈದ) ಎಬ್ಬಿಸಿದ ಗೌಜಿ-ಗಲಾಟೆ ಇವರೆಲ್ಲ ಶಾಸಕರಾಗಲು ಅಯೋಗ್ಯರೆಂಬುದನ್ನು ಸಾರಿ-ಸಾರಿ ಹೇಳುವಂತಿತ್ತು, ಮಾಜಿ ಸಂಸದೆ-ಹಾಲಿ ರಾಜಸ್ಥಾನದ ರಾಜ್ಯಪಾಲೆ ಮ್ಯಾಗಿಯಜ್ಜಿ ಕೆನರಾ ಲೋಕಸಭಾ ಕ್ಷೇತ್ರದ 8 ಅಸೆಂಬ್ಲಿ ಸೀಟುಗಳಲ್ಲಿ ನಾಲ್ಕು ತನ್ನ ಬೆಂ-ಬಾಲಕರಿಗೆ ಬಿಟ್ಟುಕೊಡುವಂತೆ ಹೈಕಮಾಂಡ್ ಮಟ್ಟದಲ್ಲಿ ವರಾತ ಹಚ್ಚಿದ್ದಾರೆ. ಖಾನಾಪುರ, ಯಲ್ಲಾಪುರ, ಶಿರಸಿ ಮತ್ತು ಕುಮಟಾ ಆಕೆ ತನ್ನ ಹಿಂಬಾಲಕರಿಗಾಗಿ ಕೇಳಿರುವ ಕ್ಷೇತ್ರಗಳು.

ಮ್ಯಾಗಿ ಮತ್ತು ದೇಶಪಾಂಡೆಗೆ ಟಿಕೆಟ್‌ಗಾಗಿ ದುಂಬಾಲು ಬಿದ್ದಿರುವ ನಾಮರ್ಧರು 'ಎಂಪಿಗಿರಿಯಲ್ಲಿ ನಿಮ್ಮ ವಂಶಾಡಳಿತಕ್ಕೆ ನೆರವಾಗುತ್ತೇವೆ... ಗೆದ್ದು ಶಾಸಕರಾದರೆ ನಿಮ್ಮ ಮಕ್ಕಳು ಪಾರ್ಲಿಮೆಂಟ್ ಅಭ್ಯರ್ಥಿಗಳಾದಾಗ ಅವರ ಎಲೆಕ್ಷನ್ ಖರ್ಚು-ವೆಚ್ಚ ನಮ್ಮ ಕ್ಷೇತ್ರದಲ್ಲಿ ನಾವೇ ನೋಡಿಕೊಳ್ಳುತ್ತೇವೆ' ಎಂದು ಗಾಡ್‌ಫಾದರ್-ಗಾಡ್‌ಮದರ್‌ಗೆ ಪ್ರಾಮೀಸ್ ಮಾಡುತ್ತಿದ್ದಾರೆ. ಟಿಕೆಟ್ ಯಾರಿಗೆ ಸಿಗುತ್ತದೋ, ಬಿಡುತ್ತದೋ ಅರ್ಜಿ ಕೊಡಲಿಕ್ಕಂತೂ ನೂಕುನುಗ್ಗಲೇ ಉಂಟಾಗಿತ್ತು, ಕಾರವಾರದಿಂದ ಅದಿರು ಅವ್ಯವಹಾರಿ ಸತೀಶ ಸೈಲ್, ಶಾಸಕ ಸಂತೋಷ್‌ಲಾಡ್‌ನ ಹಿಂಬಾಲಕ -ಯೂತ್ ಕಾಂಗ್ರೆಸ್‌ನ ರಾಜ್ಯಪ್ರಧಾನ ಕಾರ್ಯದರ್ಶಿ ಗೋಪು ನಾಯಕ್ ಟಿಕೆಟ್ ಕೇಳುತ್ತಿದ್ದಾರೆ. ಇದರಲ್ಲಿ ಸತೀಶ್ ಸೈಲ್ ಬೆಟರ್. ಆತನ ನೂರಾರು ದೌರ್ಬಲ್ಯ ಧೀಮಾಕುಗಳ ನಡುವೆಯೂ ಆತ ಮಂತ್ರಿ ಆನಂದ ಅಸ್ನೋಟಿಕರ್‌ನ ದಾದಾಗಿರಿ ಲೆಕ್ಕಿಸದೇ ರಿಸ್ಕ್ ತಗೊಂಡು ಕಾರವಾರ-ಅಂಕೋಲಾದಲ್ಲಿ ಪಾರ್ಟಿ ಕಟ್ಟಿದ್ದಾನೆ. ಕಳ್ಳ ಹಣ ಇರುವುದರಿಂದ ಆನಂದನ ಕಪ್ಪು ಹಣಕ್ಕೆ 'ಹಣಾಹಣಿ' ಈತ ಕೊಡಬಲ್ಲ. ಅಲ್ಲದೆ ಆತ ಗೆಲ್ಲುವ ಛಾನ್ಸೂ ಇದೆ. ಕಾಂಗ್ರೆಸಿಗೆ ಬರುವ ಕಟಿಪಿಟಿಯಲ್ಲಿರುವ ಆನಂದನಿಗಿಂತಲೂ ಈ ಸೈಲ್ ನೂರು ಪಾಲು ವಾಸಿ.

ಕುಮಟಾದಲ್ಲಿ ಕಾಂಗ್ರೆಸ್ ಎಮ್ಮೆಲ್ಲೆ ಆಗಲು 'ಡಜನ್' ಜನರಿದ್ದಾರೆಂದು 'ಪತ್ರಿಕೆ' ತುಂಬ ಹಿಂದೆಯೇ ಬರೆದಿತ್ತು, ಅದೀಗ ನಿಜವಾಗಿದೆ. ಬರೋಬ್ಬರಿ 12 ಜನ ಅರ್ಜಿ ಗುಜರಾಯಿಸಿದ್ದಾರೆ. ಇದರಲ್ಲಿ ದಿವಂಗತ ಮೋಹನ ಶೆಟ್ಟಿ ಹೆಂಡತಿ ಶಾರದಾ ಶೆಟ್ಟಿಯೇ ಗಟ್ಟಿ ಹುರಿಯಾಳು. ಆಕೆಯ ಮಗನ ಅಧಿಕಪ್ರಸಂಗ ಕಮ್ಮಿಯಾದರೆ ಆಕೆಗೆ ಗೆಲ್ಲುವ ಛಾನ್ಸ್ ಇದೆ. ಡಜನ್‌ನಲ್ಲಿ ಎದ್ದು ಕಾಣುವವರೆಂದರೆ ಸಿದ್ಧರಾಮಯ್ಯರ ಮೈಸೂರು ಮಿತ್ರ ಯಶೋಧರ ನಾಯ್ಕ ಮತ್ತು ಮಾಜಿ ಜಿ.ಪಂ. ಅಧ್ಯಕ್ಷ ಗಾಯತ್ರಿ ಗೌಡ ಇಬ್ಬರೇ. ಉಳಿದವರೆಲ್ಲಾ ಒಗ್ಗರಣೆ ಸೊಪ್ಪು ಇದ್ದಂತೆ. ತಿನ್ನಲು ಬಾರದ್ದು. ಶಾರದಾ ಶೆಟ್ಟಿ ಬಿಟ್ಟರೆ ಹಾಲಕ್ಕಿ ಒಕ್ಕಲಿಗ ಸಮುದಾಯದ ಗಾಯತ್ರಿ ಗೌಡ ಟಿಕೆಟ್ ಪಡೆವ ಅರ್ಹತೆ ಇರುವಾಕೆ.

ಭಟ್ಕಳದಲ್ಲಿ ಹಾಲಿ ಶಾಸಕ ಜೆ.ಡಿ.ನಾಯ್ಕ, ಗೇರುಬೀಜ ದಂಧೆದಾರ ದೀಪಕ್ ನಾಯ್ಕ್, ಗೋಲ್‌ಮಾಲ್ ಗುತ್ತಿಗೆದಾರ ಈಶ್ವರನಾಯ್ಕ, ಮ್ಯಾಗಿ ಬೆಂಬಲಿಗ ಮಾಜಿ ಜಿ.ಪಂ. ಉಪಾಧ್ಯಕ್ಷ ರಾಮಾಮಾಗೇರ್ ಅರ್ಜಿ ಹಾಕಿದ್ದಾರೆ. ಜೆ.ಡಿ.ಯೇ ಕಾಂಗ್ರೆಸಿಗೆ ಗತಿ! ಹಳಿಯಾಳದಿಂದ ಹೈರಾಣಾಗಿರುವ ಹಳೆ ಹುಲಿ ದೇಶಪಾಂಡೆ ಒಬ್ಬರೇ ಟಿಕೆಟ್ ಆಕಾಂಕ್ಷಿ. ಅವರಿಗೇ ಟಿಕೆಟ್. ಆದರೆ ಗೆಲ್ಲೋದು ಅನುಮಾನ. ಪರ್ಯಾಯ ಅಭ್ಯರ್ಥಿ ಬೆಳೆಯಲು ಸೈತಾನ್ ದೇಶಪಾಂಡೆ ಬಿಡಲಿಲ್ಲ, ಕಾಂಗ್ರೆಸಿಗೆ ಗತಿಯಿಲ್ಲದ ಸ್ಥಿತಿ. ಯಲ್ಲಾಪುರದ ಟಿಕೆಟ್ ಮತ್ತೊಮ್ಮೆ ನನಗೇ ಕೊಡಿ ಎನ್ನುತ್ತ 800 ಬೆಂಬಲಿಗರಿಗೆ ಗಣಿ ದಂಧೆ ಹಣ ಹಂಚಿ ಕರಕೊಂಡು ಬಂದು ವೀಕ್ಷಕರ ಮುಂದೆ ಪರೇಡು ಮಾಡಿದಾತ ಶಿವರಾಮ ಹೆಬ್ಬಾರ್ ಎಂಬ ಸಿಬಿಐ ಆರೋಪಿ. ಮ್ಯಾಗಿ ಹಿಂಬಾಲಕನಾದ ಈತನಿಗೆ ತನ್ನ ಗುಲಾಮ ಎಲ್.ಟಿ.ಪಾಟೀಲ ಎಂಬ ಜಿ.ಪಂ. ಮಾಜಿ ಉಪಾಧ್ಯಕ್ಷನಿಂದ ಖೋ ಕೊಡಿಸಲು ದೇಶಪಾಂಡೆ ಹಿಕಮತ್ತು ಮಾಡಿದ್ದಾರೆ. ಹಾಗೆ ನೋಡಿದರೆ ಹೆಬ್ಬಾರನೇ ಶಕ್ತಿವಾನ್.

ಕುತೂಹಲಕರ ಕ್ಷೇತ್ರ ಶಿರಸಿ ಟಿಕೆಟ್‌ಗಾಗಿ ಕಳೆದ ಬಾರಿ ಸೋತ ರವೀಂದ್ರ ನಾಯ್ಕ, ಹಾಲಿ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕ, ಮಾಜಿ ಡಿಸಿಸಿ ಅಧ್ಯಕ್ಷ-ಟಿಎಸ್‌ಎಸ್ ಕಳ್ಳ ಶಾಂತಾರಾಮ ಹೆಗ್ಗಡೆ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷನೂ- ಮ್ಯಾಗಿ ಮಗ ನಿವೇದಿತ್‌ನ ಚೇಲನೂ ಆದ ನಾಗರಾಜ್ ಮಡಿವಾಳ್ ಅರ್ಜಿ ಹಾಕಿದ್ದಾರೆ. ಜನರ ನಂಬಿಕೆ ಗಳಿಸಿರುವಾತ ಇವರಲ್ಲಿ ಯಾರೂ ಇಲ್ಲ, ಈ ಕ್ಷೇತ್ರದ ಟಿಕೆಟ್ ಬೇಕೆಂದು ಅರ್ಜಿ ಹಿಡಿದು ಬಂದಿದ್ದ ಮಾಜಿ ಜಿ.ಪಂ. ಸದಸ್ಯ ಮ್ಯಾಗಿ ಹಿಂಬಾಲಕ ವಿ.ಎನ್.ನಾಯ್ಕರ ಅಂಗಿ ಹರಿದು, ಹೊಡೆದು ದೇಶಪಾಂಡೆ ಬೆಂಬಲಿಗರು ವೀಕ್ಷಕರಿಗೆ 'ತಮ್ಮತನ' ತೋರಿಸಿಕೊಂಡಿದ್ದಾರೆ; ದೇಶಪಾಂಡೆ ಎಂಥವನೆಂದು ಸಾಬೀತುಮಾಡಿದ್ದಾರೆ.

...ನವಟ್ಟಾಗಿದೆ. ಕಳೆದ ಎರಡು ಲೋಕಸಭೆ ಎಲೆಕ್ಷನ್‌ನಲ್ಲಿ ...ಗಿ ಸೋತಿದ್ದೂ ದೇಶಪಾಂಡೆಯ ದುರಾಚಾರದಿಂದಲೇ. ...ಹೀಗಾಗಿ ಈ ಬಾರಿ ದೇಶಪಾಂಡೆಯನ್ನು ಔಟ್ ...ಡಲು ಮ್ಯಾಗಿ ಹೊಸ ಆಟ ಆಡಲು ಸ್ಕೆಚ್ ಹಾಕಿಕೊಂಡಿ...ದೆ. ಮ್ಯಾಗಿ ಅಥವಾ ಆಕೆಯ ಮಗ ನಿವೇದಿತ್ ಟಿಕೆಟ್ ...ದರೆ ಮತ್ತೆ ದೇಶಪಾಂಡೆ ಸೋಲಿಸಿಯೇ ಸೋಲಿಸುತ್ತಾನೆ. ...ಗಂತ ಆತನ ಮಗ ಪ್ರಶಾಂತ್‌ಗೆ ಸುಲಭದಲ್ಲಿ ಟಿಕೆಟ್ ...ಲು ಬಿಡಬಾರದೆಂಬುದು ಮ್ಯಾಗಿ ಮಸಲತ್ತು. ...ಕ್ಕಾಗಿಯೇ ಆಕೆ ಮೊನ್ನೆ ಜಿಲ್ಲೆಗೆ ಬಂದಿದ್ದ ವೀಕ್ಷಕರ ...ಂದೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ...ರನ್ನು ತನ್ನ ಬೆಂಬಲಿಗರಿಂದ ತೇಲಿಸಿಬಿಟ್ಟಿದ್ದಾರೆ. ಈಡಿಗ ...ದಾಯದ ಹರಿ ಇಲ್ಲಿಂದ ಸ್ಪರ್ಧಿಸಿದರೆ ಗೆಲುವು ...ತ ಎಂಬ ವಾದ ಮ್ಯಾಗಿ ಬಳಗದ್ದು. ಜಿಲ್ಲೆಯ ...ಕಸಭಾ ಎಲೆಕ್ಷನ್‌ನಲ್ಲಿ ಈಡಿಗ (ದೀವರು) ರದು ...ರ್ಣಾಯಕ ಪಾತ್ರ. ದೀವರು ಮತ್ತು ಅಲ್ಪಸಂಖ್ಯಾತರು ...ದರೆ ಕಾಂಗ್ರೆಸ್ ನಿರಾಯಾಸವಾಗಿ ಗೆಲ್ಲುತ್ತದೆ. ಇದು ...ಜಾತಿಸಮೀಕರಣ ಹಾಗೊಮ್ಮೆ ಹರಿ ಜಿಲ್ಲೆಗೆ ಎಂಟ್ರಿ ...ಟ್ಟರೆ ಅವರ ಡೈನಮಿಕ್ ಗುಣಧರ್ಮದಿಂದ ...ಶಪಾಂಡೆಯ ಫ್ಯೂಡಲ್ ರಾಜಕಾರಣ ಅಂತ್ಯವೂ ...ಭವಾಗುತ್ತದೆಂಬ ಲೆಕ್ಕಾಚಾರ ಮ್ಯಾಗಿ ಬಳಗದ್ದು.

ಜಿಲ್ಲೆಯ ಅಲ್ಪಸಂಖ್ಯಾತರು, ದೀವರು, ಹಿಂದುಳಿದವರೆಲ್ಲಾ ...ಶಪಾಂಡೆ ಎಂದರೆ ಅಸಹ್ಯದಿಂದ ಮೂಗು ...ರಿಯುತ್ತಾರೆ. ಆದರೆ ಆತನ ಜಾತಿ (ಕೊಂಕಣಿ) ...ಕಾರಣ, ಧನ-ತೋಳುಬಲದ ಗೂಂಡಾಗಿರಿಯನ್ನು ...ಟರ್ ಮಾಡುವ ಸಮರ್ಥ ಎದುರಾಳಿ ಇಲ್ಲದೆ ಈ ...ರೆಲ್ಲ ಅಸಹಾಯಕರಾಗಿದ್ದಾರೆ. ಮ್ಯಾಗಿ ಅದೆಷ್ಟೇ 'ಟರ್-...ರ್' ಎಂದರೂ ದೇಶಪಾಂಡೆ ಎದುರು ಸೋತು ...ಡಿಯೂರಿದ್ದೇ ಹೆಚ್ಚು. ಹೈಕಮಾಂಡ್‌ನಲ್ಲೂ ಹಲ್ಲು ...ರಿದ ಹಾವಿನಂತಾಗಿರುವ ಮ್ಯಾಗಿಗಿಂತ ಡೇರ್‌ಡೇವಿಲ್ ...ಯೇ ತೂಕದಾರ! ಮ್ಯಾಗಿಯನ್ನು ಮಣಿಸಿದಷ್ಟು ...ಭವಾಗಿ ಹರಿಯನ್ನು ಹಣಿಯಲು ಮುದಿ ...ಶಪಾಂಡೆಯಿಂದ ಸಾಧ್ಯವಾಗದು. ಜನರೊಂದಿಗೆ ಹಮ್ಮು-...ಮ್ಮು ಇಲ್ಲದೆ ಬೆರೆವ ಹರಿ ಸೈದ್ಧಾಂತಿಕ ಬದ್ಧತೆಯೂ ...ವವರು. ಇಂಥ ಜನಪರ ನೀತಿ-ನಿಲುವು ದೇಶಪಾಂಡೆ ... ನಾಲ್ಕು ದಶಕದ ಅಧಿಕಾರಸ್ಥ ಜೀವನದಲ್ಲಿ ...ರಿಸಿಕೊಂಡಿದ್ದೇ ಇಲ್ಲ.

ಹಾಗೆಯೇ ಪಕ್ಕದ ದಕ್ಷಿಣ ಕನ್ನಡದ ಮ್ಯಾಗಿ, ಆಕೆಯ ...ವ ಜೋಕಿಂ ಆಳ್ವ, ಅತ್ತೆ ವೈಲೆಟ್ ಆಳ್ವ (ರಾಜ್ಯಸಭೆ) ...ತ್ತರ ಕನ್ನಡಕ್ಕೆ ವಲಸೆ ಬಂದು ಜಿಲ್ಲೆಯನ್ನು ...ನಿಧಿಸಬಹುದಾದರೆ, ಇವರೆಲ್ಲರಿಗಿಂತ ಯೋಗ್ಯರಾದ ...ಲೇ ದಕ್ಷಿಣ ಕನ್ನಡದವರಾದ ಹರಿ ಯಾಕೆ ಇಲ್ಲಿಂದ ...ರ್ಲಿಮೆಂಟ್‌ಗೆ ಹೋಗಬಾರದು? ಇಂಥದೊಂದು ಪ್ರಶ್ನೆ ...ಗ ಕಾಂಗ್ರೆಸ್ ಪಡಸಾಲೆಯಲ್ಲಿ ಗಂಭೀರ ಚರ್ಚೆಗೆ ...ಗಾಗುತ್ತಿದೆ. ತುಂಬ ಹಿಂದೆಯೇ ಉತ್ತರ ಕನ್ನಡದ ...ಲೆ ಕಣ್ಣು ಹಾಕಿದ್ದ ಹರಿ ಮ್ಯಾಗಿ 'ನಿವೃತ್ತಿ'ಗಾಗಿಯೇ ...ದ್ದರು. ಈಗ ಮ್ಯಾಗಿಯೇ ಮುಂದಾಗಿ ಹರಿಯ ಜಿಲ್ಲೆಯ ...ವೇಶಕ್ಕೆ ಮುಹೂರ್ತ ಹುಡುಕುತ್ತಿದ್ದಾರಂತೆ. ಇದೆಲ್ಲದರ ...ಟ್ಟು ಪರಿಣಾಮವೇ ಮ್ಯಾಗಿ ಮತ್ತು ಹರಿ ಬೆಂಬಲಿಗರು ...ದಾಗಿ ಮೊನ್ನೆ ಕಾಂಗ್ರೆಸ್ ವೀಕ್ಷಕರ ಎದುರು 'ಹರಿಗೆ ...ಕಸಭೆ ಟಿಕೆಟ್ ಕೊಡಿ' ಎಂದು ಬೇಡಿಕೆ ...ಟ್ಟಿರುವುದು!!

ಹಾಲಿ ಸಂಸದ ಬಿಜೆಪಿಯ ಬೆಂಕಿ ನವಾಬ ಅನಂತ್ಮಾಣಿ ...ರಿಯಾಸ್ ಅನಂತಕುಮಾರ್ ಹೆಗಡೆ ವಿರುದ್ಧ ಜಿಲ್ಲೆಯಲ್ಲಿ ...ಡಮಾರುತ ಎದ್ದಿದೆ. ಈ ಹಿಂಸೋನ್ಮಾದಿ ಹಿಂದೂತ್ವ-...ಶಭಕ್ತಿಯ ಉದ್ದುದ್ದ ಭಾಷಣ ಬಿಗಿಯುತ್ತಲೇ ಭರ್ಜರಿ ...ಕೆ ತೋಟ-ಅರಣ್ಯ ಅತಿಕ್ರಮಣ ಜಮೀನು, ನಿಗೂಢ ...ದ್ಯಮ, ಹೆಂಡತಿಗೊಂದು ಟ್ರಸ್ಟ್-ಬ್ಯಾಂಕ್, ಕೋಟ್ಯಾಂತರ ...ಪಾಯಿ ಆಸ್ತಿ ಮಾಡಿಕೊಂಡಿದ್ದಾನೆ. ಒಂದು ಕಾಲದಲ್ಲಿ ...ದೂ ಜಾಗರಣಾ ವೇದಿಕೆಯ 'ಬುತ್ತಿಮಾಣಿ'ಯಾಗಿ ...ರೂರಿಗೆ ಕೋಮು ಬೆಂಕಿ ಇಕ್ಕುತ್ತ ಅಂಡಲೆಯುತ್ತಿದ್ದ ...ನಂತ್ಮಾಣಿ ಇವತ್ತು ಐಷಾರಾಮಿ ಜೀವನದಲ್ಲಿ ...ಳಾಡುತ್ತಿದ್ದಾನೆ. ಇದು ಆತನ ಅಸಲಿ ದೇಶಭಕ್ತಿ-ಹಿಂದೂತ್ವ ...ರಿಗೆ ಪರಿಚಯಿಸಿದೆ. ಬಿಜೆಪಿಯಲ್ಲೇ ಆತನ ಬಗ್ಗೆ ...ಸಮಾಧಾನ ಮಡುಗಟ್ಟಿದೆ.


ಇದೆಲ್ಲ ಅರ್ಥವಾಗಿರುವ ಅನಂತ್ಮಾಣಿ ವೈರಾಗ್ಯ ...ದರ್ಶಿಸುತ್ತಿದ್ದಾನೆ. ತಾನು ಮತ್ತೆ ಗೆಲ್ಲುವುದು ಸಾಧ್ಯವಿಲ್ಲ ...ದು ಅರಿವಾಗೇ ಆತ 'ಎಲೆಕ್ಷನ್‌ಗೆ ಸ್ಪರ್ಧಿಸಲಾರೆ' ಎಂದು ...ಳುತ್ತಿದ್ದಾನೆ. ಆರೋಗ್ಯವೂ ಕೈಕೊಟ್ಟಿದೆ. ಜನರಂತೂ ...ದಲ್ಲಿ ಉಗಿಯುತ್ತಿದ್ದಾರೆ. ಎಂಪಿಗಿರಿ ಸಾಕಾಗಿದೆ. ಹುಸಿ ...ಂದೂತ್ವ ನಿರಾಯಾಸವಾಗಿ ದಯಪಾಲಿಸಿರುವ ಹಡಬೆ ...ತ್ತು ಕುಳಿತುಂಡರೂ ಕರಗದಷ್ಟಿದೆ. ಹೀಗಿರುವಾಗ ...ಪಿಗಿರಿಗೆ ನಿಂತು ಸೋಲೋದು ಯಾರಿಗೆ ಬೇಕಾಗಿದೆ?

...ಹಾಗಿದ್ದರೆ ಮುಂದಿನ ಬಿಜೆಪಿ ಎಂಪಿಗಿರಿ ಉಮೇದು ...ರ ಕಾಗೇರಿ ಮಾಣಿಯಾ? ಕಾಂಗ್ರೆಸ್‌ನ ಹರಿಪ್ರಸಾದ್ ...ತ್ತರ ಕನ್ನಡದಲ್ಲಿ ಸ್ಪರ್ಧಿಸಬಹುದಾ? ಇಂತದ್ದೆರಡು ...ಗಳು ಇಡೀ ಜಿಲ್ಲೆಯಲ್ಲಿ ಕುತೂಹಲ ಕೆರಳಿಸಿಬಿಟ್ಟಿದೆ!!

■ ನಹುಷ

ಹಗರಣ ಮರೆಮಾಚಲು 'ದಾಸ'ನ 'ರಾಮ'ಬಾಣ!

ಕಿದ್ವಾಯ್ ಕಿತಾಪತಿ



ಲೋಕರಾಜ್

ವೈದ್ಯಕೀಯ ಸಚಿವ ರಾಮದಾಸ್ ಮೊನ್ನೆ ಕಿದ್ವಾಯ್ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ತಮ್ಮ ಪರಾಕ್ರಮ ಪ್ರದರ್ಶಿಸಿದರು. ಕರ್ತವ್ಯಲೋಪದ ನೆಪವೊಡ್ಡಿ ಇಬ್ಬರು ನೌಕರರನ್ನು ಸಸ್ಪೆಂಡ್ ಮಾಡುವಂತೆ ಸ್ಥಳದಲ್ಲೇ ಫರ್ಮಾನು ಹೊರಡಿಸಿ ಕ್ಯಾಮೆರಾ ಕಣ್ಣಲ್ಲಿ ಮಿರಿಮಿರಿ ಮಿಂಚುವ ಪ್ರಯತ್ನ ಮಾಡಿದರು. ಅಸಲಿಗೆ ಇಂತಹವೆಲ್ಲ ರಾಮದಾಸರ ಟಿಪಿಕಲ್ ಪ್ರಚಾರದ ತಂತ್ರಗಳು. ತಾನೊಬ್ಬ ಕ್ರಿಯಾಶೀಲ ರಾಜಕಾರಣಿ ಎಂದು ತೋರಿಸಿಕೊಳ್ಳುವ ತೆವಲಿನ ಜೊತೆಗೆ ಮಂತ್ರಿಗಿರಿಯ ಅಧಿಕಾರದ ಅಮಲೂ ಸೇರಿಕೊಂಡ ಪರಿಣಾಮವಾಗಿ ರಾಮದಾಸ್ ತಲೆಯಲ್ಲಿ ರಾತ್ರೋರಾತ್ರಿ ಇಂತಹ 'ದಿಢೀರ್' ಐಡಿಯಾಗಳು ಮೊಳೆತುಬಿಡುತ್ತವೆ.

ಆದರೆ ರಾಮದಾಸರ ಕಿದ್ವಾಯ್ ಎಪಿಸೋಡಿನಲ್ಲಿ ಕೇವಲ ತೆವಲು ಮಾತ್ರವಲ್ಲದೆ ತನ್ನ ಬುಡಕ್ಕೇ ವಕ್ಕರಿಸಲಿದ್ದ ಬೃಹತ್ ಅವ್ಯವಹಾರಗಳನ್ನು ಭೂಗತ ಮಾಡುವ ಮಾಸ್ಟರ್ ಪ್ಲಾನೂ ಇತ್ತು. ಅದರಲ್ಲೂ ಜೂನಿಯರ್ ಲ್ಯಾಬ್ ಟೆಕ್ನಿಷಿಯನ್ ಲೋಕರಾಜ್ ಎಂಬಾತನ ಸಸ್ಪೆಂಡ್ ಹೈಡ್ರಾಮದ ಅಸಲಿಯತ್ತನ್ನು ಕೆದಕುತ್ತಾ ಹೋದರೆ ಕಿದ್ವಾಯ್ ಆವರಣದ ಒಂದೊಂದೇ ಮೆಘಾ ಹಗರಣಗಳು ಬೆತ್ತಲಾಗುತ್ತಾ ಸಾಗುತ್ತವೆ. ಅಷ್ಟೂ ಹಗರಣಗಳು ಸುತ್ತಿಬಳಸಿ ಸುತ್ತಿಕೊಳ್ಳೋದು **once again the great** ರಾಮದಾಸನನ್ನು.




ಡಾ. ಎಂ.ವಿಜಯ್ ಕುಮಾರ್

ಸಿಬ್ಬಂದಿಗಳ ನೇಮಕಾತಿ, ಪೆನ್ಷನ್ ಫಂಡ್, ಡ್ರಗ್ ಫೌಂಡೇಷನ್- ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಕೈ ಆಡಿಸಿ ಕ್ಯಾನ್ಸರ್ ರೋಗಿಗಳ ನಿಧಿಯನ್ನೇ ಗುಳುಂ ಮಾಡಿದ ಭಲೇ ಭ್ರಷ್ಟರನ್ನು ಬಯಲಿ ಗೆಳೆಯಬೇಕೆಂದು ಇದೇ ಲೋಕರಾಜ್ ಮಾಹಿತಿ ಹಕ್ಕು ಕಾಯ್ದೆಯಡಿ ಸುಮಾರು ನೂರಕ್ಕೂ ಹೆಚ್ಚು ಆರ್.ಟಿ.ಐ ಅರ್ಜಿ ಗುಜರಾಯಿಸಿದ್ದರು. ಈ ಅರ್ಜಿಗಳಿಗೆ ರಾಮದಾಸ್ ಟೀಮು ಅದೆಷ್ಟು ಬೆದರಿಹೋಗಿತ್ತೆಂದರೆ ಲೋಕರಾಜ್‌ರ ಬಾಯಿ ಮುಚ್ಚಿಸಲು ಇತ್ತೀಚೆಗಷ್ಟೆ ಆಸ್ಪತ್ರೆ ಆವರಣದಲ್ಲೇ ಅವರ ಮೇಲೆ ಹಲ್ಲೆ ನಡೆಸಲಾಗಿತ್ತು. ಆದರೂ ಲೋಕರಾಜ್ ತಮ್ಮ ಪ್ರಯತ್ನದಿಂದ ಹಿಂದೆ ಸರಿಯದಿದ್ದದ್ದು ವಿಪರೀತ ತಲೆನೋವಾಗಿ ಪರಿಣಮಿಸಿತ್ತು. ಕಟ್ಟಕಡೆಯ ಪ್ರಯತ್ನವೆಂಬಂತೆ ಸಚಿವ ರಾಮದಾಸನೇ ಅಖಾಡಕ್ಕಿಳಿದು 'ಸರ್‌ಪ್ರೈಸ್ ಇನ್ಸ್‌ಪೆಕ್ಷನ್' ನೆಪದಲ್ಲಿ ಸಸ್ಪೆಂಡ್‌ನ ರಾಮಬಾಣ ಪ್ರಯೋಗಿಸಿದ್ದಾರೆ. ಅಷ್ಟಕ್ಕೂ ಸಸ್ಪೆಂಡ್ ಮಾಡುವಂತಹ ಘನಂದಾರಿ ತಪ್ಪುಗಳ್ಯಾವೂ ಲೋಕರಾಜ್ ಬಳಿ ಕಂಡುಬಂದಿಲ್ಲ. ಯಕಃಶ್ಚಿತ್ ರೆಕಾರ್ಡ್ ನಿರ್ವಹಿಸಿಲ್ಲ ಎಂಬ ಅಲ್ಲದೆ ಎಲ್ಲಾ ಸಿಬ್ಬಂದಿಗಳೂ ಹಾಜರಿರಬೇಕೆಂಬ ಫರ್ಮಾನು ಹೊರಡಿಸಿದ್ದ ನಿರ್ದೇಶಕ ಡಾ.ಎಂ.ವಿಜಯಕುಮಾರ್ ಸಮಾರಂಭವನ್ನು ಬಿಟ್ಟು ಸಚಿವರ ಜೊತೆ ಏಕಾಏಕಿ ದಾಳಿಗಿಳಿದಿದ್ದರ ಹಿಂದಿನ ಹಕೀಕತ್ತಾದರು ಏನು?

ಅದೆಲ್ಲ ಹಾಳಾಗಲಿ, ಸಚಿವ ಮಹಾಶಯ ಕೇಳಿದ ಪ್ರಶ್ನೆಗಳು, ಅಪೇಕ್ಷಿಸಿದ ಉತ್ತರಗಳಾದರೂ ನೆಟ್ಟಗಿದ್ದವೆ? ವೈದ್ಯಕೀಯ ಸಚಿವನಾಗಿದ್ದುಕೊಂಡು ವೈದ್ಯಕೀಯ ಸಿಬ್ಬಂದಿಗಳ ಕಾರ್ಯಮಿತಿಯ ಬಗ್ಗೆಯೇ ರಾಮದಾಸರಿಗೆ ಕಿಂಚಿತ್ತು ಅರಿವಿಲ್ಲ ಎಂಬುದು ಅವತ್ತು ಮತ್ತೊಮ್ಮೆ ಸ್ಪಷ್ಟವಾಗಿತ್ತು. ಏಕೆಂದರೆ ಲೋಕರಾಜ್ ಮೂಲತಃ ಬ್ಲಡ್ ಬ್ಯಾಂಕ್‌ನ ಜೂನಿಯರ್ ಟೆಕ್ನಿಷಿಯನ್ ಅಂದರೆ ರೋಗಿಗಳ ರಕ್ತವನ್ನು ವೈದ್ಯರ ನಿರ್ದೇಶನದಂತೆ ಸಂಗ್ರಹಿಸಿ ಪ್ರಯೋಗಾಲಯಗಳಿಗೆ ಕಳುಹಿಸಿಕೊಡುವುದಷ್ಟೇ ಅವರ ಜವಾಬ್ದಾರಿ. ಆದರೆ ರಾಮದಾಸ್ ಅವತ್ತು ಲೋಕರಾಜ್ ಬಳಿ ಹೋದವರೇ ಇವತ್ತು ನೀನು ಮಾಡಿದ ಕೆಲಸ ದಾಖಲೆ ತೋರಿಸು ನೋಡೋಣ ಎಂದು ಕೇಳಿದ. ದಾಖಲೆ ಇಟ್ಟುಕೊಳ್ಳುವುದು ಲೋಕರಾಜ್ ಕೆಲಸವೇ ಅಲ್ಲ. ಅದಕ್ಕೆಂದೇ ಲಿಟರೇಚರ್ ಅಟೆಂಡರ್ ಎಂಬ ಮತ್ತೊಬ್ಬ ಸಿಬ್ಬಂದಿ ಇರುತ್ತಾನೆ. ಆತ ರೋಗಿಯ ಎಲ್ಲಾ ವಿವರಗಳನ್ನು ಬರೆದುಕೊಂಡು ವೈದ್ಯರು ನೀಡಿದ ಫಾರ್ಮ್ ಸಮೇತ ಲೋಕರಾಜ್ ಬಳಿ ಕಳುಹಿಸುತ್ತಾನೆ. ಅಲ್ಲಿಗೆ ಬಂದವರ ಬ್ಲಡ್ ಡ್ರಾ ಮಾಡುವುದಷ್ಟೇ ಇವರ ಕೆಲಸ. ಹಾಗೊಮ್ಮೆ ಸಚಿವರಿಗೆ ದಾಖಲೆಯೇ ಬೇಕಾಗಿದ್ದರೆ ಲಿಟರೇಚರ್ ಅಟೆಂಡರ್ ನನ್ನು ಕೇಳಬೇಕಿತ್ತು. ಅದು ಬಿಟ್ಟು ಒಬ್ಬ ಟೆಕ್ನಿಕಲ್ ಸಿಬ್ಬಂದಿಯ ಬಳಿ ಅಕಾಡೆಮಿಕ್ ವ್ಯವಹಾರದ ಎನ್‌ಕ್ವೈರಿ ಮಾಡಿದ ಸಚಿವರ ಘನಪಾಂಡಿತ್ಯ ಇನ್ನೆಂತದ್ದಿರಬೇಡ.

ಅಷ್ಟಕ್ಕೂ ಲೋಕರಾಜ್ ಸಚಿವ ಸ್ಥಾನಕ್ಕೆ ಕೊಡಬೇಕಾದ ಗೌರವದಲ್ಲಿ ರೆಕಾರ್ಡ್ ನಿರ್ವಹಿಸುವುದು ತನ್ನ ಕೆಲಸವಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು. ಅದನ್ನೆಲ್ಲ ಕೇಳಿಸಿಕೊಳ್ಳುವ ದರ್ದು ರಾಮದಾಸ್‌ಗಾಗಲಿ, ಆತನ ಹಿಂದಿದ್ದ ನಿರ್ದೇಶಕನಿಗಾಗಲಿ ಇರಲಿಲ್ಲ. ಸಾರ್ವಜನಿಕವಾಗಿ ತಪ್ಪು ಮಾಡಿ ತಗುಲಿಕೊಂಡ ಎಂಬ ನೆಪ ಮಾತ್ರ ಅವರಿಗೆ ಬೇಕಾಗಿತ್ತು. ಅದಕ್ಕಾಗಿ ಈ ಸನ್ನಿವೇಶವನ್ನು ಸೃಷ್ಟಿಸಿಕೊಂಡಿದ್ದರು. ಹಾಗೊಮ್ಮೆ ರೆಕಾರ್ಡ್ ನಿರ್ವಹಿಸದ ಕಾರಣಕ್ಕೆ ರೇಗಾಡಲೇ ಬೇಕೆಂದಿದ್ದರೆ ರಾಮದಾಸ್ ಮೊದಲು ತನ್ನ ಬೆನ್ನ ಹಿಂದಿದ್ದ ನಿರ್ದೇಶಕ ವಿಜಯ್‌ಕುಮಾರ್‌ನನ್ನು ತರಾಟೆಗೆ ತೆಗೆದುಕೊಳ್ಳಬೇಕಿತ್ತು.





ಸಣ್ಣ ನೆಪ ಇಟ್ಟುಕೊಂಡು ರಾಮದಾಸ್ 'ಬ್ರಹ್ಮಾಸ್ತ್ರ' ಪ್ರಯೋಗಿಸಿರುವುದನ್ನು ನೋಡಿದರೆ ಇದು ಲೋಕರಾಜ್‌ರನ್ನು ಬೆದರಿಸಿ ಸುಮ್ಮನಾಗಿಸುವ ಯತ್ನವೆಂಬ ಸತ್ಯ ಎಂತವರಿಗೂ ಅರ್ಥವಾಗಿಬಿಡುತ್ತೆ.

ಅವತ್ತು ನಡೆದದ್ದೇನು?

ಅಸಲಿಗೆ ಸಚಿವರ ದಿಢೀರ್ ಭೇಟಿಯೇ ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುವಂತಿದೆ. ಏಕೆಂದರೆ ಅವತ್ತು ಅಂದರೆ, ನವೆಂಬರ್ 27ರಂದು, ಕಿದ್ವಾಯ್ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಖುದ್ದು ನಿರ್ದೇಶಕರೇ ಎಲ್ಲಾ ಸಿಬ್ಬಂದಿಗಳು ಕಡ್ಡಾಯವಾಗಿ ರಾಜ್ಯೋತ್ಸವದಲ್ಲಿ ಹಾಜರಿರಬೇಕೆನ್ನುವ ಲಿಖಿತ ಆದೇಶವನ್ನೂ ಹೊರಡಿಸಿದ್ದರು. ಹೀಗೆ ಮುಕ್ಕಾಲು ಪಾಲು ಸಿಬ್ಬಂದಿ ಅಧಿಕೃತವಾಗಿ ಕಾರ್ಯಕ್ರಮದಲ್ಲಿ ಹಾಜರಿರುವಾಗ ಯಾರ ಕರ್ತವ್ಯವನ್ನು ತಾನೇ ಪರೀಕ್ಷಿಸಲು ಸಚಿವರಿಗೆ ಸಾಧ್ಯವಾಗುತ್ತೆ? ಏಕೆಂದರೆ ಲ್ಯಾಬ್ ಟೆಕ್ನಿಷಿಯನ್ ಸಹ ತಾನು ಮಾಡಿದ ಕೆಲಸದ ಬಗ್ಗೆ ಮಾಹಿತಿ ಬರೆದಿಟ್ಟುಕೊಳ್ಳಬೇಕು ಎಂದು ಆಸ್ಪತ್ರೆಯಿಂದ ಯಾವ ದಾಖಲೆ ಪುಸ್ತಕವನ್ನಾಗಲಿ, ರೆಕಾರ್ಡನ್ನಾಗಲಿ ಲೋಕರಾಜ್‌ಗೆ ನೀಡಿರಲಿಲ್ಲ. ಹೀಗೆ ಇಲ್ಲದ ರೆಕಾರ್ಡ್‌ನ ಮಾಹಿತಿಯನ್ನು ರಾಮದಾಸ್ ಅಪೇಕ್ಷಿಸಿದ್ದು ಅದೆಷ್ಟು ಹಾಸ್ಯಾಸ್ಪದವಾಗಿತ್ತೆಂದರೆ ಲೋಕರಾಜ್ ಘಜನಿ ಸಿನಿಮಾದ ಅಮೀರ್‌ಖಾನ್ ತರ ಮೈಮೇಲೆಯೇ ರೋಗಿಗಳ ರಿಜಿಸ್ಟರ್ ನಂಬರ್ ಬರೆದುಕೊಂಡು ಸಚಿವರಿಗೆ ಸಾಕ್ಷಿ ತೋರಿಸಬೇಕಿತ್ತಷ್ಟೆ.

ಕಿದ್ವಾಯ್ ಕರ್ಮಕಾಂಡ

ರಾಮದಾಸನ ಸದ್ಯದ ಸಸ್ಪೆಂಡ್ ಹೈಡ್ರಾಮವನ್ನು ಚೂರೇ ಚೂರು ಕೆದಕಿದರೂ ಕಿದ್ವಾಯ್ ಆಸ್ಪತ್ರೆಯ ಪೆನ್ಷನ್ ಹಗರಣ ಬಯಲಿಗೆ ಬೀಳುತ್ತದೆ. ಇದು ಸರ್ಕಾರಿ ಒಡೆತನಕ್ಕೆ ಸೇರಿದರೂ ಅಟೋನಮಸ್ ಮಾನ್ಯತೆ ಪಡೆದ ಸಂಸ್ಥೆಯಾಗಿರುವುದರಿಂದ ಸಿಬ್ಬಂದಿಗಳ ನಿವೃತ್ತಿಯ ನಂತರ ನೀಡುವ ಪೆನ್ಷನ್‌ಗೆಂದು ಸಂಬಳದಲ್ಲಿ ಮೊದಲೇ ಕಡಿತ ಮಾಡಿ ಸಂಗ್ರಹಣಾ ನಿಧಿಯಲ್ಲಿ ಜಮಾ ಮಾಡಲಾಗಿರುತ್ತದೆ. **1983** ರಿಂದ ಇಲ್ಲಿಯವರೆಗೆ ಏನಿಲ್ಲವೆಂದರೂ **80** ರಿಂದ **90** ಕೋಟಿ ನಿಧಿ ಜಮಾವಣೆಯಾಗಿದೆ. **1998** ರವರೆಗೆ ಎಲ್ಲವೂ ನೆಟ್ಟಗಿತ್ತು. ಆದರೆ ಆಮೇಲೆ ಸಂಸ್ಥೆಗೆ ವಕ್ಕರಿಸಿದ ನಾಲ್ಕು ಅಧಿಕಾರಿಗಳ ಲೂಟಿಯ ಪರಿಣಾಮವಾಗಿ **36** ಕೋಟಿಯಷ್ಟು ಹಣ ಫಂಡ್‌ನಿಂದ ನಾಪತ್ತೆಯಾಗಿದೆ.

ಇನ್ನು ಕಿದ್ವಾಯ್ ಸಂಸ್ಥೆಯಿಂದಲೇ ಕಿದ್ವಾಯ್ ಕ್ಯಾನ್ಸರ್ ಡ್ರಗ್ ಫೌಂಡೇಷನ್ ಎಂಬ ಮತ್ತೊಂದು ಸಂಸ್ಥೆ ನಡೆಯುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಔಷಧಿಗಳನ್ನು ವಿತರಿಸುವುದೇ ಇದರ ಉದ್ದೇಶ. ಆದರೆ ಒಳಗಿಂದೊಳಗೇ ಇಲ್ಲಿ ಭ್ರಷ್ಟರ ಭೋಜನ ನಡೆಯುತ್ತಿರುವುದು ಈಗ ರಹಸ್ಯವಾಗೇನೂ ಉಳಿದಿಲ್ಲ.

ಅಸಲಿಗೆ ಈ ಫೌಂಡೇಷನ್‌ನ ವಾರ್ಷಿಕ ಆದಾಯದಲ್ಲಿ ಶೇ.**10**ರಷ್ಟನ್ನು ಪೆನ್ಷನ್ ಫಂಡ್‌ಗೆ ದೇಣಿಗೆಯಾಗಿ ನೀಡಲಾಗುತ್ತಿದೆ. ಆದರೆ ಇದ್ಯಾವುದೂ ನಿಯಮದ ಪ್ರಕಾರ ನಡೆಯುತ್ತಿಲ್ಲ. ಹೀಗೇಕೆ ಎಂದು ಯಾರೇ ಪ್ರಶ್ನಿಸಿದರೂ 'ಇದು ಚಾರಿಟಬಲ್ ಟ್ರಸ್ಟ್ ಆಗಿರುವುದರಿಂದ ನಿಮ್ಮ ಪ್ರಶ್ನೆಗೆ ಉತ್ತರ ಕೊಡಲಾಗುವುದಿಲ್ಲ' ಎಂಬ ಉತ್ತರ ಸಿದ್ಧವಾಗಿರುತ್ತೆ. ಇಲ್ಲಿ ಮತ್ತೊಂದು ಅನುಮಾನ ಕಾಡುತ್ತದೆ. ಅದು ಚಾರಿಟಬಲ್ ಟ್ರಸ್ಟ್ ಅಂತ ಆದಮೇಲೆ ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಕಿದ್ವಾಯ್‌ನ ನಿರ್ದೇಶಕ ವಿಜಯ್ ಕುಮಾರ್ ಖಾಸಗಿ ಸಂಸ್ಥೆಗೆ ಹೇಗೆ ನಿರ್ದೇಶಕನಾಗಲು ಸಾಧ್ಯ? ಒಂದೊಮ್ಮೆ ಅದು ಸರ್ಕಾರಿ ಸಂಸ್ಥೆ ಅಂತ ಪರಿಗಣಿಸಿದರೂ ಒಬ್ಬನೇ ವ್ಯಕ್ತಿ ಎರಡೆರಡು ಸರ್ಕಾರಿ ಹುದ್ದೆಗಳಲ್ಲಿ ಏಕಕಾಲದಲ್ಲಿ ಮುಂದುವರೆಯುತ್ತಿರುವುದಾದರು ಹೇಗೆ?

ಇನ್ನು ಸಿಬ್ಬಂದಿಗಳ ನೇಮಕಾತಿಯಲ್ಲೂ ಭಾರೀ ಅವ್ಯವಹಾರ ನಡೆದಿದೆ. ಬೋಗಸ್ ಸರ್ಟಿಫಿಕೇಟ್ ಸೃಷ್ಟಿಸಿ ಇಲ್ಲಿ ಕೆಲಸಕ್ಕೆ ಸೇರಿರುವ ಅನರ್ಹ ನೌಕರ ಸಂಖ್ಯೆಯೇನು ಕಡಿಮೆ ಇಲ್ಲ. ಅದರಲ್ಲೂ ಸರ್ಕಾರಿ ನೇಮಕಾತಿಯನ್ನು ವಾಕ್-ಇನ್-ಇಂಟರ್‌ವ್ಯೂ ಮೂಲಕ ಭರ್ತಿ ಮಾಡಿಕೊಳ್ಳುವ ಇಲ್ಲಿಯ ಅಡ್ಜಸ್ಟ್‌ಮೆಂಟೇ ಎಲ್ಲವನ್ನೂ ಬಯಲು ಮಾಡುತ್ತದೆ.

ಹೀಗೆ ಕಿದ್ವಾಯ್ ಆಸ್ಪತ್ರೆಯಲ್ಲಿ ನಡೆಯುತ್ತಿರುವ ಲೂಟಿಯನ್ನು ಆರ್.ಟಿ.ಐ ಮೂಲಕ ಪ್ರಶ್ನಿಸಿದ್ದೇ ಲೋಕರಾಜ್ ಮಾಡಿದ್ದು ದೊಡ್ಡ ತಪ್ಪಾಗಿ ಹೋಗಿದೆ. ಈ ಎಲ್ಲ ಹುಳುಕುಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಲೋಕರಾಜ್‌ರನ್ನು ಬೆದರಿಸಲು ರಾಮದಾಸ್ ಸಸ್ಪೆಂಡ್ ನಾಟಕವಾಡಿದ್ದಾರೆ. ಅವತ್ತು ಜನರೆದುರು ಸಸ್ಪೆಂಡ್ ಮಾಡುವಂತೆ ರೇಗಾಡಿ ನಿರ್ದೇಶನವನ್ನೂ ನೀಡಿದ್ದಾರೆ.

ಆದರೆ ಲೋಕರಾಜ್ ತಾನು ಇದಕ್ಕೆಲ್ಲ ಹೆದರುವುದಿಲ್ಲ, ಸಚಿವ ಮತ್ತು ನಿರ್ದೇಶಕ ಮಾಡುತ್ತಿರುವ ಪ್ರತಿಯೊಂದು ಹಗರಣಗಳನ್ನು ಬಯಲಿಗೆಳೆದೇ ತೀರುತ್ತೇನೆ ಎಂದು ಸವಾಲು ಎಸೆದಿರುವುದು ರಾಮದಾಸನಿಗೆ ಬೇಉ ಕವಿದಂತಾಗಿದೆ. ಒಟ್ಟಿನಲ್ಲಿ ರಾಮದಾಸನ ಭವಿಷ್ಯ ಹೇಳ್ಬೇಂದರೆ ಎರಡರಿಂದ ಮೂರು ತಿಂಗಳಷ್ಟೇ. ಆದರೆ ಅದಕ್ಕೂ ಮುನ್ನವೇ ಆತನ ಒಂದೊಂದೇ ಅನಾಚಾರಗಳು ಬಯಲಾಗುತ್ತಿವೆ. ಕಿದ್ವಾಯ್ ಎಪಿಸೋಡ್ ಅದಕ್ಕೆ ಹೊಸ ಸೇರ್ಪಡೆಯಷ್ಟೆ.

■ ಗಿರೀಶ್

ಕರ್ನಾಟಕ ಕೋಮು ಸೌಹಾರ್ದ ವೇದಿಕೆಗೆ ಹತ್ತು ವರ್ಷ

2002ರ ಡಿಸೆಂಬರ್ 29ರಂದು ಚಿಕ್ಕಮಗಳೂರಿನಲ್ಲಿ ಮಹತ್ವದ ಕಾರ್ಯಕ್ರಮವೊಂದು ನಡೆಯಿತು. ಕರ್ನಾಟಕದ ಪಾರಂಪರಿಕ ಕೋಮು ಸೌಹಾರ್ದದ ನೆಲೆಯಾದ ಬಾಬಾಬುಡನ್‌ಗಿರಿಯಲ್ಲಿರುವ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾದ ಮೇಲೆ ಹಿಂದೂತ್ವ ಕೋಮುವಾದಿಗಳು ಸಾರಿದ್ದ ದಾಳಿಯನ್ನು ಪ್ರತಿರೋಧಿಸುವ ಸಂಕಲ್ಪದಲ್ಲಿ ಕರ್ನಾಟಕದ ಸಮಸ್ತ ಪ್ರಗತಿಪರರು ಅಲ್ಲಿ ಸಮಾವೇಶಗೊಂಡಿದ್ದೆವು. ಅಂದು ಅಲ್ಲಿ ನೆರೆದಿದ್ದ 100ಕ್ಕೂ ಹೆಚ್ಚಿನ ಕರ್ನಾಟಕದ ಪ್ರಗತಿಪರ ಸಂಘಟನೆಗಳು ಮತ್ತು ನಾಡಿನ ಪ್ರಜ್ಞಾವಂತರು 'ಬಾಬಾಬುಡನ್‌ಗಿರಿಯನ್ನು ಉಳಿಸೋಣ, ಕೋಮುವಾದವನ್ನು ಅಳಿಸೋಣ' ಎಂಬ ಸಂಕಲ್ಪವನ್ನು ತೊಟ್ಟೆವು. ಎಡಪಂಥೀಯ, ದಲಿತ, ರೈತ, ಮಹಿಳಾ, ವಿದ್ಯಾರ್ಥಿ ಯುವಜನರ ಹಾಗೂ ವಿವಿಧ ಜನವರ್ಗಗಳ ಸಂಘಟನೆಗಳ ಐಕ್ಯ ಸಮ್ಮೇಳನವಾಗಿ ಅದು ಒಂದು ಐತಿಹಾಸಿಕ ಕಾರ್ಯಕ್ರಮವಾಗಿತ್ತು.

ಅದೇ ವರ್ಷದ ಮಾರ್ಚ್-ಏಪ್ರಿಲ್‌ನಲ್ಲಿ ನಡೆದಿದ್ದ ಗುಜರಾತ್ ನರಮೇಧದ ನಂತರವೂ ನರಹಂತಕ ಮೋದಿ ನೇತೃತ್ವದಲ್ಲಿ ಬಿಜೆಪಿ ಮತ್ತೆ ಚುನಾವಣೆಯಲ್ಲಿ ಗೆದ್ದು ಬಂದಿದ್ದು ಎಲ್ಲರನ್ನೂ ಆತಂಕಕ್ಕೀಡುಮಾಡಿತ್ತು, ಬಾಬಾಬುಡನ್‌ಗಿರಿಯನ್ನು ದಕ್ಷಿಣದ ಅಯೋಧ್ಯೆಯನ್ನಾಗಿಸುತ್ತೇವೆ, ಕರ್ನಾಟಕವನ್ನು ಗುಜರಾತನ್ನಾಗಿಸುತ್ತೇವೆ ಎಂಬ ಹಿಂದೂತ್ವವಾದಿ ಸಂಘಟನೆಗಳ ಕೋಮು ವಿದ್ವೇಷದ ಘೋಷಣೆಗೆ ಸರಿಯಾದ ಪ್ರತಿರೋಧವನ್ನು ಒಡ್ಡಿದ ಆ ಸಮಾವೇಶವು, ಕೋಮುವಾದದ ವಿರುದ್ಧದ ಐಕ್ಯ ಹೋರಾಟಕ್ಕೆ ಹೊಸ ತಿರುವನ್ನು ನೀಡಿತು. ಮುಂದಿನ ವರ್ಷ ಕಾಂಗ್ರೆಸ್ ಸರ್ಕಾರವಿದ್ದಾಗಲೇ, ಸಂಘಪರಿವಾರದ ಹುಸಿ ದತ್ತಜಯಂತಿ ಹಾಗೂ ಕೋಮುದ್ವೇಷದ ಶೋಭಾಯಾತ್ರೆಗೆ ಅವಕಾಶ ನೀಡಿ, ಕೋಮುಸೌಹಾರ್ದದ ಕಾರ್ಯಕ್ರಮಕ್ಕೆ ಅನುಮತಿ ನಿರಾಕರಿಸಲಾಯಿತು. ಆದರೆ ಡಿಸೆಂಬರ್ 7ರಂದು ಸೌಹಾರ್ದದ ಕಾರ್ಯಕ್ರಮವನ್ನು ನಿಷೇಧದ ನಡುವೆಯೂ ನಡೆಸಲಾಯಿತು. ಅದರ ಫಲವಾಗಿ ಒಂದು ಸಾವಿರ ಜನರನ್ನು ಬಂಧಿಸಲಾಯಿತು. ಕರ್ನಾಟಕದ ಕೋಮುವಾದ ವಿರುದ್ಧದ ಆಂದೋಲನದ ಇತಿಹಾಸದಲ್ಲಿ ಅದೂ ಒಂದು ಮಹತ್ವದ ವಿದ್ಯಮಾನವಾಗಿತ್ತು, ಮತ್ತೆ ಐಕ್ಯತೆಯ ಸಂದೇಶ ಸಾರಲು ಅದೇ ತಿಂಗಳ 28ರಂದು 'ಸೌಹಾರ್ದ ಕರ್ನಾಟಕ ಕಟ್ಟೋಣ' ಎಂಬ ಕೇಂದ್ರ ಘೋಷಣೆಯಡಿ ಹಿಂದಿನ ವರ್ಷಕ್ಕಿಂತಲೂ ದೊಡ್ಡ ಸಮಾಗಮ ನಡೆಯಿತು.

ನಂತರ ಸೌಹಾರ್ದ ಕರ್ನಾಟಕ ಕಟ್ಟುವ ಸಂಕಲ್ಪಕ್ಕೆ ಬೆನ್ನೆಲುಬಾಗಿ ಕೆಲಸ ಮಾಡುವಂತೆ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯನ್ನು ರಚಿಸಿಕೊಂಡೆವು. ಹೆಸರಿಗೆ ಅನ್ವರ್ಥವಾಗಿರುವಂತೆ ಸಂಘಟನೆಗೆ ಕರ್ನಾಟಕದಲ್ಲಿ ಕೋಮು ಸೌಹಾರ್ದ ಚಳವಳಿಯನ್ನು ಕಟ್ಟಿ ಬೆಳೆಸುವುದೊಂದೇ ಧ್ಯೇಯವಾಗಿರಬೇಕು; ಜಾತಿ-ಮತ-ಸೈದ್ಧಾಂತಿಕ-ಸಂಖ್ಯಾಬಲಗಳನ್ನು ಮೀರಿ ಹಿಂದೂತ್ವದ ಕೋಮುವಾದಿ ರಾಜಕಾರಣವನ್ನು ಪ್ರತಿರೋಧಿಸಲು ಬಯಸುವ ಸಕಲ ಜನಸಾಮೂಹಿಕ ಸಂಘಟನೆಗಳ ಒಕ್ಕೂಟವಾಗಿ ಕಾರ್ಯಾಚರಿಸಬೇಕು; ಪ್ರಜಾಪ್ರಭುತ್ವದ ಸದ್ಬಲ-ಚೈತನ್ಯಗಳ ಸ್ಫೂರ್ತಿಯಲ್ಲಿ ವೇದಿಕೆಯು ಕಾರ್ಯ ನಿರ್ವಹಿಸಬೇಕು ಎನ್ನುವುದು ಹತ್ತು ವರ್ಷಗಳ ಹಿಂದೆ ಒಗ್ಗೂಡಿದ ಪ್ರಜ್ಞಾವಂತ ಜನಸಮೂಹದ ಆಶಯವಾಗಿತ್ತು. ಈ ಮೂರೂ ಧ್ಯೇಯೋದ್ದೇಶಗಳಿಗೆ ಚ್ಯುತಿತಾರದ ಎಚ್ಚರದಲ್ಲಿ ವೇದಿಕೆಯು ಒಂದು ದಶಕದ ಕಾಲ ಸಕ್ರಿಯವಾಗಿ ಕಾರ್ಯವೆಸಗಿದೆ. ಚಾರಿತ್ರಿಕ ಒತ್ತಡಗಳಿಗೆ ಕಿವಿಕೊಟ್ಟು ಹುರಿಗೊಂಡ ಮನುಷ್ಯರ ಸಂಘಟನಾ ಪ್ರಯತ್ನದಲ್ಲಿ ವೇದಿಕೆಯು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ.

ಆ ಅರಿವನ್ನು ಉಳಿಸಿಕೊಂಡು, ಕಳೆದ ಹತ್ತು ವರ್ಷಗಳಲ್ಲಿ ವೇದಿಕೆಯು ಮಾಡಿದ ಸಾಧನೆಗಳನ್ನೂ, ಸನ್ನಿವೇಶಗಳ ಒತ್ತಡದ ತರಾತುರಿಯಲ್ಲಿ ಎಸಗಿರಬಹುದಾದ ತಪ್ಪುಗಳನ್ನೂ ನಿರ್ದಾಕ್ಷಿಣ್ಯವಾಗಿ ಅವಲೋಕಿಸಿಕೊಳ್ಳಬೇಕು; ಸಾಧನೆಗಳ ಸ್ಫೂರ್ತಿಯನ್ನು ಮೈಮ್ಮಡಿಗೊಳಿಸಿಕೊಂಡು ಕೋಮು ಸೌಹಾರ್ದ ಚಳವಳಿಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಬೇಕು; ಎಸಗಿದ ತಪ್ಪುಗಳನ್ನು ಪ್ರಾಮಾಣಿಕವಾಗಿ ವಿಮರ್ಶಿಸಿಕೊಂಡು, ಅವು ಮುನ್ನಡೆಯುವ ಕಾಲುಗಳಿಗೆ ಕಟ್ಟಿದ ಗುಂಡುಗಳಾಗದಂತೆ ಎಚ್ಚರ ವಹಿಸಬೇಕು ಎಂಬ ಸದುದ್ದೇಶದಲ್ಲಿ ವೇದಿಕೆಯು ದಶಮಾನದ ಸಮಾವೇಶವನ್ನು ಸಂಘಟಿಸಲು ನಿರ್ಧರಿಸಿದೆ.

ಕಳೆದ ಹತ್ತು ವರ್ಷಗಳಲ್ಲಿ ನಮ್ಮ ವೇದಿಕೆಯ ಬಹುವೈವಿಧ್ಯದ ಕಾರ್ಯಕ್ರಮಗಳು:

* ಬಾಬಾಬುಡನ್‌ಗಿರಿ ವಿವಾದವನ್ನು ಸೃಷ್ಟಿಸಿದ ಹಿಂದೂತ್ವದ ಕೋಮು ವಿದ್ವೇಷಕ ಉದ್ದೇಶಗಳ ಕುರಿತು ಜನಜಾಗೃತಿ ಮೂಡಿಸಲು ಕರ್ನಾಟಕದಾದ್ಯಂತ ಜಾಗೃತಿ ಮತ್ತು ಪ್ರಚಾರಾಂದೋಲನಗಳು, ಅಧ್ಯಯನ, ಬೀದಿ ಹೋರಾಟ, ಸಮಾವೇಶಗಳನ್ನು ನಡೆಸಿ ಗಿರಿಯ ಮೇಲೆ ಯಾವುದೇ ವೈದಿಕ ಆಚರಣೆಗಳಿಗೆ ಅವಕಾಶವಿಲ್ಲದಂತೆ ಮಾಡಲಾಯಿತು. ಆ ನಂತರ ಬಿಜೆಪಿ ನೇತೃತ್ವದ ಸರ್ಕಾರ ಬರುವ ಹೊತ್ತಿಗೆ ಸುಪ್ರೀಂಕೋರ್ಟ್‌ನಲ್ಲಿ ಮಹತ್ವದ ಕಾನೂನು ಹೋರಾಟವನ್ನು ಆರಂಭಿಸಲಾಯಿತು. ಇವೆಲ್ಲದರ ಫಲವಾಗಿ ಇದುವರೆಗೆ 'ಬಾಬಾಬುಡನ್‌ಗಿರಿಯನ್ನು ಕೋಮು ವಿದ್ವೇಷದ ತಾಣವನ್ನಾಗಿಸುವ ಹುನ್ನಾರ'ವನ್ನು ಯಶಸ್ವಿಯಾಗಿ ತಡೆಗಟ್ಟಲಾಗಿದೆ.
* ಸಂಘಪರಿವಾರವು ಕರ್ನಾಟಕದ ಮತೀಯ ರಾಜಕಾರಣದ ಪ್ರಧಾನ ಪ್ರಯೋಗಶಾಲೆಯಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚಟುವಟಿಕೆಗಳನ್ನು ಹರಿಯಬಿಡುತ್ತಿದ್ದುದರಿಂದ, ವೇದಿಕೆಯು ಅದನ್ನು ತನ್ನ ಪ್ರಮುಖ ಕಾರ್ಯಕ್ಷೇತ್ರಗಳಲ್ಲೊಂದನ್ನಾಗಿ ಮಾಡಿಕೊಂಡಿತು. ಆದಿ ಉಡುಪಿ ಬೆತ್ತಲೆ ಪ್ರಕರಣದಿಂದ ಆರಂಭಿಸಿ, ಮಾಧ್ಯಮಗಳ ಕೋಮುವಾದೀಕರಣದ ವಿರುದ್ಧ ವಿಚಾರಮಂಥನ, ಮಂಗಳೂರು ಕೋಮುಗಲಭೆಯ ಕುರಿತು ರಾಷ್ಟ್ರೀಯ ಸತ್ಯಶೋಧನೆಗಳ ಆಯೋಜನೆ, ಭಾವೈಕ್ಯತಾ ಸಮಾವೇಶಗಳು, ಉಡುಪಿಯಲ್ಲಿ ಸೌಹಾರ್ದ ಸಾಹಿತ್ಯ ಸಮ್ಮೇಳನ, ಪಬ್ ದಾಳಿ ಹಾಗೂ ಹೋಂಸ್ಟೇ ಮೇಲಿನ ದಾಳಿಯ ವಿರುದ್ಧ ಪ್ರತಿಭಟನೆಗಳು, ಹತ್ತಾರು ಸಂಖ್ಯೆಯಲ್ಲಿ ಬೃಹತ್ ಪ್ರತಿಭಟನೆಗಳು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಯಿತು.
* ಶ್ರೀರಂಗಪಟ್ಟಣದಿಂದ ಆರಂಭಿಸಿ ಮಂಗಳೂರು, ಭದ್ರಾವತಿ, ಧಾರವಾಡ, ಹುಬ್ಬಳ್ಳಿ, ದಾವಣಗೆರೆ ಸೇರಿದಂತೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಟಿಪ್ಪು ಸುಲ್ತಾನ್ ನೆನಪಿನ ಕಾರ್ಯಕ್ರಮಗಳು ಹಾಗೂ ಹಿಂದೂ ಮುಸ್ಲಿಮರ ಅಪೂರ್ವ ಮೈತ್ರಿಯ ಹೋರಾಟವಾಗಿದ್ದ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮಗಳನ್ನು ನಡೆಸಲಾಯಿತು.
* ಉಮಾ ಭಾರತಿ ಪ್ರಕರಣ, ರಾಮಸೇತು ವಿವಾದ, ಜಾರ್ಜ್ ಬುಷ್ ಭಾರತ ಭೇಟಿಯ ವಿರುದ್ಧದ ಕಾರ್ಯಕ್ರಮಗಳು, ಮೈಸೂರು ಹಾಗೂ ಶಿವಮೊಗ್ಗ ಕೋಮುಗಲಭೆಗಳ ಸತ್ಯಶೋಧನೆ ಮಾಡಿ ಸತ್ಯ ಬಯಲುಗೊಳಿಸಿದ್ದು, ಕೋಮು ಹಿಂಸಾಚಾರ ತಡೆ ಮಸೂದೆಯ ಕುರಿತು ಕಾರ್ಯಕ್ರಮಗಳು, ಎರಡು ಚುನಾವಣೆಗಳಲ್ಲಿ ಸಕ್ರಿಯ ಮಧ್ಯ ಪ್ರವೇಶ, ಸಿಂಧಗಿಯಲ್ಲಿ ಪಾಕ್ ಧ್ವಜ ಹಾರಿಸಿದ ವಿರುದ್ಧ, ಕೇಸರಿ ಭಯೋತ್ಪಾದನೆ ವಿರುದ್ಧ, ಲಿಬರ್ಹಾನ್ ಆಯೋಗದ ವರದಿ ಬಂದ ಸಂದರ್ಭದಲ್ಲಿ ಪ್ರತಿಭಟನೆಗಳು, ಕಂಬಾಲಪಲ್ಲಿ ಹತ್ಯಾಕಾಂಡದ ತೀರ್ಪು ಬಂದಾಗ ಪ್ರತಿಭಟನೆಗಳು, ಅಡ್ವಾಣಿ ರಥಯಾತ್ರೆಯ ವಿರುದ್ಧ, ಗುಜರಾತ್ ನರಮೇಧದ 10 ವರ್ಷಗಳ ಸಂದರ್ಭದ ಕಾರ್ಯಕ್ರಮಗಳು, ಗೋ ಸಾಗಾಣಿಕೆ ಹೆಸರಿನಲ್ಲಿ ದಲಿತ ಕೃಷ್ಣಪ್ಪರ ಹತ್ಯೆ ವಿರೋಧಿಸಿ ಪ್ರತಿಭಟನೆಗಳು, ನಾಲ್ಕೈದು ಬಾರಿ ಸೌಹಾರ್ದ ಸಂಗೀತ ಕಾರ್ಯಕ್ರಮಗಳು ಹೀಗೆ ಹಲವು ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿದೆ.
* ಕರ್ನಾಟಕದಾದ್ಯಂತ ಸಂಘಪರಿವಾರ ಯೋಜಿತವಾಗಿ ನಡೆಸಿದ ಕ್ರೈಸ್ತ ಪ್ರಾರ್ಥನಾಮಂದಿರಗಳ ಮೇಲಿನ ದಾಳಿಯ ವಿರುದ್ಧ ಬೃಹತ್ ಜನಾಭಿಪ್ರಾಯ ಚಳವಳಿಗಳನ್ನು ಸಂಘಟಿಸಿ, ಕ್ರೈಸ್ತ ಸಮುದಾಯದ ಕಾನೂನು ಹಾಗೂ ಮಾನವ ಹಕ್ಕು ಹೋರಾಟಗಳಿಗೆ ಬೆನ್ನೆಲುಬಾಗಿ ದುಡಿದಿದೆ.
* ಲಕ್ಷಾಂತರ ಕರಪತ್ರಗಳು, ಭಿತ್ತಿಪತ್ರಗಳು, ವಾರ್ತಾಪತ್ರಗಳು, ಹತ್ತಾರು ಪುಸ್ತಕಗಳು, ಸಂಶೋಧನಾ ಗ್ರಂಥವನ್ನು ಪ್ರಕಟಿಸಲಾಗಿದೆ. ಮೂರು ಸಾಕ್ಷ್ಯಚಿತ್ರಗಳನ್ನೂ ಪೆಡೆಸ್ಟ್ರಿಯನ್ ಪಿಕ್ಚರ್ಸ್ ಸಹಯೋಗದಲ್ಲಿ ತಂದಿದೆ.
* ರಾಜ್ಯದ ವಿವಿಧ ಭಾಗಗಳಲ್ಲಿ ಹತ್ತಾರು ಕಾರ್ಯಾಗಾರಗಳು, ಚಿಂತನಾ ಶಿಬಿರಗಳನ್ನು ಆಯೋಜಿಸಿದೆ.
* ಕರ್ನಾಟಕದ ಲಕ್ಷಾಂತರ ಜನರ ಉದ್ಯೋಗ ಹಾಗೂ ಆಹಾರದ ಹಕ್ಕನ್ನು ಹಿಂಸಾತ್ಮಕವಾಗಿ ತುಳಿಯುವ 'ಜಾನುವಾರು ಹತ್ಯಾ ನಿಷೇಧ ಕಾಯ್ದೆ'ಯ ವಿರುದ್ಧ ಬೃಹತ್ ಪ್ರಮಾಣದ ಹೋರಾಟಗಳನ್ನು ಸಂಘಟಿಸಿ, ಸಂಘಪರಿವಾರದ ಕೋಮುದ್ವೇಷದ ಪ್ರಚಾರಕ್ಕೆ ತೀವ್ರ ಪ್ರತಿರೋಧವನ್ನು ಒಡ್ಡಲಾಗಿದೆ.
* ಶಾಲಾ ಪಠ್ಯಪುಸ್ತಕಗಳ 'ಕೇಸರೀಕರಣ'ದ ಕುರೂಪವನ್ನು ಜಾಹೀರು ಮಾಡಲು ಅಧ್ಯಯನಶೀಲ ಸಮಾವೇಶಗಳನ್ನೂ, ಬೀದಿ ಹೋರಾಟಗಳನ್ನೂ ಸಂಘಟಿಸಿ ಜನಜಾಗೃತಿ ಮೂಡಿಸಲು ಕಾರ್ಯಾಚರಿಸಿದೆ. ಶಾಲಾ ಕಾಲೇಜುಗಳಲ್ಲಿ ಭಗವದ್ಗೀತೆ ಬೋಧನೆ ವಿರುದ್ಧ ಹೋರಾಟ ನಡೆಸಿ ಸರ್ಕಾರ ವಾಪಸ್ಸು ತೆಗೆದುಕೊಳ್ಳುವಂತೆ ಮಾಡಲಾಗಿದೆ.
* ಅಲ್ಪಸಂಖ್ಯಾತ ಸಮುದಾಯದ ಮೇಲೆ ಸಂಘಪರಿವಾರ ನಡೆಸುತ್ತಿರುವ ಹಿಂಸೆಯನ್ನು ಆಮೂಲಾಗ್ರವಾಗಿ ದಾಖಲುಗೊಳಿಸಿ, ಹಿಂದೂತ್ವ ಕೋಮುವಾದದ ಫ್ಯಾಸಿಸ್ಟ್ ಸ್ವರೂಪವನ್ನು ಜನರ ಮುಂದೆ ತೆರೆದಿಟ್ಟಿದೆ; ಹಿಂಸೆಗೆ ತುತ್ತಾದ ಅಲ್ಪಸಂಖ್ಯಾತ ಸಮುದಾಯದ ದನಿಯಾಗಿ ಸಂವಿಧಾನಿಕ ನ್ಯಾಯಕ್ಕಾಗಿ ಸತತವಾಗಿ ಹೋರಾಡುತ್ತಾ ಬಂದಿದೆ.
* ಕೋಮುವಾದದ ವಿರುದ್ಧ ನಡೆಯುತ್ತಿರುವ ಅಖಿಲ ಭಾರತ ಮಟ್ಟದ ಹಲವು ಪ್ರಯತ್ನಗಳ ಜೊತೆ ಭಾಗಿಯಾಗಿದೆ.

ಕೋಮುವಾದವು ಕೇವಲ ಅಲ್ಪಸಂಖ್ಯಾತರ ಶತ್ರುವಲ್ಲ, ದಲಿತರು, ಹಿಂದುಳಿದವರು, ಮಹಿಳೆಯರು, ರೈತ-ಕಾರ್ಮಿಕರನ್ನೂ ಬಾಧಿಸುವ ಫ್ಯಾಸಿಸ್ಟ್ ವಿದ್ಯಮಾನವೆಂಬುದನ್ನು ವೇದಿಕೆಯು ನಿರೂಪಿಸಲೆತ್ನಿಸಿದೆ.

ಹಲವು ಬಾರಿ ಮೊಕದ್ದಮೆಗಳನ್ನು ಹಾಕಿಸಿಕೊಳ್ಳಬೇಕಾಗಿ ಬಂದರೂ, ಬಂಧನಕ್ಕೊಳಗಾಗಿ ಜೈಲು ಸೇರಬೇಕಾಗಿ ಬಂದರೂ ವೇದಿಕೆಯ ಸಹಭಾಗಿಗಳು ಧೃತಿಗೆಡದೆ ಚಳವಳಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಹಿಂದೂತ್ವವಾದಿ ಆಕ್ರಮಣಕ್ಕೆ ಅಲ್ಪಸಂಖ್ಯಾತ ಸಮುದಾಯವು ಧಾರ್ಮಿಕ ನೆಲೆಯ ಪ್ರತಿಕ್ರಿಯೆಯನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳುತ್ತದೆ. ಆದರೆ ಅದನ್ನು ಆ ಸಮುದಾಯದೊಳಗಿನ ಮೂಲಭೂತವಾದಿಗಳು ದುರುಪಯೋಗ ಪಡಿಸಿಕೊಳ್ಳುವುದನ್ನು ಖಂಡಿಸುತ್ತಾ ಬಂದಿದೆ.

ಕೋಮು ಸೌಹಾರ್ದದ ಚಳವಳಿಯು, ಸರ್ವಧರ್ಮೀಯ ಗುರುಗಳ ಪ್ರಾರ್ಥನಾ ಮಂಡಳಿಯಾಗುವುದರಿಂದ ಯಶಸ್ಸನ್ನು ಸಾಧಿಸಲಾಗದು. ಸೈದ್ಧಾಂತಿಕ ಮತ್ತು ಸಂಘಟನಾ ವ್ಯಾಪ್ತಿಯ ಬಗ್ಗೆ ಸ್ಪಷ್ಟತೆ, ಸಮರಶೀಲ ಹೋರಾಟ, ವಿಶಾಲ ಐಕ್ಯರಂಗ, ನಿರಂತರ ಮಧ್ಯಪ್ರವೇಶ, ಉದ್ವಿಗ್ನ ಸಂದರ್ಭದಲ್ಲೂ ಶಾಂತಿ ಸಮಯದಲ್ಲೂ ನಿರಂತರ ಎಚ್ಚರ ಇವುಗಳನ್ನು ಕಾಯ್ದುಕೊಂಡು ಬರಲು ಯತ್ನಿಸಿದೆ.

ಖ್ಯಾತ ಮಾನವಹಕ್ಕು ಹೋರಾಟಗಾರರಾದ ತೀಸ್ತಾ ಸೆಟ್ಲ್‌ವಾದರ ಅಭಿಪ್ರಾಯದಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು 'ಕೋಮು ಸೌಹಾರ್ದವನ್ನೇ ಏಕೈಕ ಧ್ಯೇಯವಾಗಿಟ್ಟುಕೊಂಡು ಚಳವಳಿಯನ್ನು ಸಂಘಟಿಸುತ್ತಿರುವ ಭಾರತದ ಬೆರಳೆಣಿಕೆಯಷ್ಟು ಸಂಘಟನೆಗಳಲ್ಲಿ ಪ್ರಮುಖವಾಗಿರುವ ಸಂಘಟನೆ' ಆಗಿದೆ. ವೇದಿಕೆಯು ಅಂದಿಗೂ, ಇಂದಿಗೂ, ಜಾತಿ-ಮತ-ಪಂಥ ಭೇದವಿಲ್ಲದೇ, ಕರ್ನಾಟಕದಲ್ಲಿ ಕೋಮುಸೌಹಾರ್ದಕ್ಕಾಗಿ ಶ್ರಮಿಸುತ್ತಿರುವ ಸಕಲ ಸಂಘಟನೆಗಳೂ ಹಾಗೂ ಪ್ರಜ್ಞಾವಂತ ನಾಗರಿಕರ ನೈಜ ಒಕ್ಕೂಟವಾಗಿ ಕಾರ್ಯನಿರ್ವಹಿಸುವ ಮಹದಾಸೆಯನ್ನು ಪೋಷಿಸಿಕೊಂಡೇ ಬಂದಿದೆ. ಕೋಮು ಸೌಹಾರ್ದ ಚಳವಳಿಯ 10 ವರ್ಷಗಳ ಸಂದರ್ಭದ ಈ ಸಮಾವೇ[ಶ] ಮತ್ತೆ ಎಲ್ಲರನ್ನೂ ಒಗ್ಗೂಡಿಸುವ ಚಾರಿತ್ರಿಕ ಐ[ಕ್ಯ] ಸಮ್ಮೇಳನವಾಗಬೇಕೆಂಬ ಅಭಿಲಾಷೆ ನಮ್ಮದು. [...] ದಶಕದುದ್ದಕ್ಕೂ ವೇದಿಕೆಯ ಜೊತೆಗಿರುವವರು, [...] ಬಿಟ್ಟು ಹೋಗಿ ನಂತರ ಜೊತೆಯಾದವರು, ವಿ[...] ಕಾರಣಗಳಿಂದಾಗಿ ವೇದಿಕೆಯಿಂದ ಹೊರಗಿರುವ[ವರು] ಎಲ್ಲರೂ ಮತ್ತೆ ಒಟ್ಟಾಗೋಣ.

ಸರಿಯಾಗಿ 20 ವರ್ಷಗಳ ಹಿಂದೆ ದೇಶದ ಪ[...] ನ್ಯಾಯಿಕ, ಶಾಸನಾತ್ಮಕ ಸಂಸ್ಥೆಗಳ ಸೂಚನೆಗಳ[ನ್ನು] ವಿರೋಧಿಸಿ, ಈ ದೇಶದ ಜಾತ್ಯತೀತ ಪರಂಪರೆಗೆ ಮ[...] ಮಸಿ ಬಳಿಯುವ ರೀತಿಯಲ್ಲಿ ಬಾಬ್ರಿ ಮಸೀದಿಯ[ನ್ನು] ಕೆಡವಲಾಯಿತು. ಆ ಪ್ರಕ್ರಿಯೆಯಲ್ಲಿ ಮತ್ತು ನಂ[...] ದೇಶಾದ್ಯಂತ ವಿವಿಧ ಮತೀಯ ಸಮುದಾಯಗಳ ನಡ[ುವೆ] ಬಿರುಕು ಮೂಡಿಸುವ ಪ್ರಯತ್ನ ನಡೆಯಿತು. ಅದ[...] ಕೋಮುವಾದಿಗಳು ಭಾಗಶಃ ಯಶಸ್ವಿಯಾಗಿರುವುದ[ು] ಅಲ್ಲದೇ, ಕೆಲವು ರಾಜ್ಯಗಳಲ್ಲಿ ಮತ್ತು ಒಮ್ಮೆ ಕೇಂದ್ರ[ದ] ಅಧಿಕಾರವನ್ನೂ ಹಿಡಿದರು. ಪ್ರಭುತ್ವದ ಮೇಲಿನ ಹಿಡಿ[ತ] ಅವರ ಫ್ಯಾಸಿಸ್ಟ್ ಹುನ್ನಾರಕ್ಕೆ ಮತ್ತಷ್ಟು ಇಂಬು ಕೊಟ್ಟಿ[...] ಇದನ್ನು ಬುಡಸಮೇತ ಕಿತ್ತುಹಾಕುವ ಸವಾಲು ದೇ[ಶದ] ಎಲ್ಲಾ ಪ್ರಜಾತಂತ್ರವಾದಿಗಳ, ಸೌಹಾರ್ದ ಪ್ರೇಮಿ[ಗಳ] ಮುಂದಿದೆ.

ಅದೇ ರೀತಿ ಕರ್ನಾಟಕದಲ್ಲೂ ಕಳೆದ ನಾಲ್ಕೂ[...] ವರ್ಷಗಳಲ್ಲಿ ಸಂಘಪರಿವಾರದ ನೇತೃತ್ವದ ಬಿಜೆಪಿ ಸರ್ಕಾ[ರ] ಈ ನಾಡಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮ[ತ್ತು] ಶೈಕ್ಷಣಿಕ ವಾತಾವರಣದಲ್ಲಿ ಉಂಟುಮಾಡಿರ[ುವ] ಅನಾಹುತಗಳು ಅಷ್ಟಿಷ್ಟಲ್ಲ, ಜಾತಿ ಧ್ರುವೀಕರ[ಣ,] ಸಂಘಪರಿವಾರದ ಸಂಸ್ಥೆಗಳನ್ನು ಬಲಪಡಿಸಿದ ಹತ[...] ಯೋಜನೆಗಳು, ಪ್ರತಿಗಾಮಿ ಹಿಡಿತವನ್ನು ಹೆಚ್ಚಾಗಿಸ[...] ಮಾಡಿದ ಹತ್ತು ಹಲವು ರೀತಿಯ ಪ್ರಯತ್ನಗಳು, ರೈ[ತರು] ಮತ್ತು ಅಲ್ಪಸಂಖ್ಯಾತರ ವಿರುದ್ಧ ಗುರಿ ಮಾಡಿದ್ದ ಜಾನುವಾ[ರು ಹತ್ಯಾ] ನಿಷೇಧ ಕಾಯ್ದೆ, ಶಿಕ್ಷಣದ ಕೇಸರೀಕರಣ ಮತ್ತು ಮತಾಂ[ತರ] ನಿಷೇಧ ಕಾಯ್ದೆ ಹೀಗೆ ಒಂದೇ ಎರಡೇ. . . [...] ಮಾಡುತ್ತಾ ಹೋದರೆ ಸಾವಿರಾರು ಉದಾಹರಣೆಗಳ[ು] ಇವೆಲ್ಲದರ ಪರಿಣಾಮಗಳನ್ನು ಇಲ್ಲವಾಗಿಸುವುದು 'ಅ[...] ಸುಲಭವಲ್ಲವೆಂಬುದು ನಮ್ಮೆಲ್ಲರಿಗೂ ತಿಳಿದ ವಿಚಾರ[ವೇ] ಆಗಿದೆ.

ಇಂತಹ ಜನವಿರೋಧಿ, ಮನುಷ್ಯ ವಿರೋಧಿ ಬಿ[ಜೆಪಿ]ಯನ್ನು ಸಂಪೂರ್ಣ ತಿರಸ್ಕರಿಸದೇ ಇದ್ದರೆ, ಈ ನಾ[ಡಿನ] ಇತಿಹಾಸದಲ್ಲಿಯೇ ಅತ್ಯಂತ ಕರಾಳಕಾಲ ಸನ್ನಿಹಿತವಾ[ಗು]ವುದರಲ್ಲಿ ಸಂಶಯವಿಲ್ಲ, ಆದರೆ ಇಂದಿನ ಒಟ್ಟ[ು] ಸನ್ನಿವೇಶವನ್ನು ಅವಲೋಕಿಸಿದರೆ ಬಿಜೆಪಿ ಮತ್ತು ಇನ್ನಿ[ತರ] ಅವಕಾಶವಾದಿಗಳ ಮೈತ್ರಿಕೂಟ ಮತ್ತೆ ಗೆದ್ದು ಬರ[ುವ] ಸಂಭವ ಇಲ್ಲವೆಂದು ಹೇಳುವುದೂ ಕಷ್ಟ. ಬಿಜೆಪಿ[ಯ] ಸೋಲನ್ನು ಕೋಮುವಾದದ ಸೋಲೆಂದು ವ್ಯಾಖ್ಯಾ[ನಿಸ]ಲಾಗದು. ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಮತ್ತಷ್ಟು ಚೈ[ತನ್ಯ,] ದೃಢತೆ ಹಾಗೂ ಐಕ್ಯತೆಯಿಂದ ಒಗ್ಗೂಡಿ ಕೋಮು ಸೌಹಾರ್ದದ ಚಳವಳಿಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಂ[ಡು] ಮುನ್ನಡೆಸುವುದು ಅತ್ಯಂತ ಅಗತ್ಯವಾಗಿದೆ. ಆ ನಿಟ್ಟ[ಿನಲ್ಲಿ] ಈ ಸಮಾವೇಶ ಒಂದು ಮುಖ್ಯ ಹೆಜ್ಜೆಯಾಗಬೇ[ಕು.] ನಾಡಿನ ಎಲ್ಲಾ ಪ್ರಜಾತಂತ್ರವಾದಿಗಳು ಮತ್ತು ಶೋ[ಷಿತ] ಜನರು ಒಂದಾಗಿ ಸೇರಬೇಕೆಂಬುದು ನಮ್ಮ ಆಶಯವಾ[ಗಿದೆ.]


ಇದರಲ್ಲಿ ನಿಮ್ಮ ಸಕ್ರಿಯ, ಉತ್ಸಾಹಪೂ[ರ್ಣ] ಭಾಗೀದಾರಿಕೆಯನ್ನು ಎದುರು ನೋಡುತ್ತಾ,


■ ಕೆ.ಎಲ್.ಅಶೋಕ್
ರಾಜ್ಯ ಪ್ರಧಾನ ಕಾರ್ಯದರ್ಶಿ, ಕರ್ನಾ[ಟಕ] ಕೋಮು ಸೌಹಾರ್ದ ವೇದಿಕೆ ಮತ್ತು ಇತ[ರರು]
ಸಂಪರ್ಕ ವಿಳಾಸ: 1) ಪ್ರಜ್ವಲ್ ನಿಲಯ, 2ನೇ ತಿರ[ುವು,] ಬಾಪೂಜಿ ನಗರ, ಶಿವಮೊಗ್ಗ. ಫೋ: 94482562[...] 7353770206
2) ಈಶವಾಸ್ಯಂ ನಿಲಯ, 2-10-776, ಬ[...] ಮಂಗಳೂರು - 4. ಫೋ: 0824 22256[...] 7899580151, 9964071782


ಚಿಕ್ಕಮಗಳೂರಿನಲ್ಲಿ ಕೋಮು ಸೌಹಾರ್ದ ವೇದಿಕೆಯಿಂದ ಪ್ರತಿಭಟನೆ



ಆತ್ಮಹತ್ಯೆಯ ಹಾದಿಯಲ್ಲಿ ಬಿಜೆಪಿ





ಬಿಜೆಪಿ ಪಕ್ಷಕ್ಕೆ ಇದು ಕೇಡುಗಾಲ. ಕೇಡನ್ನು ಆಹ್ವಾನಿಸಿಕೊಂಡವರು ಸ್ವತಃ ಬಿಜೆಪಿಯ ರಾಷ್ಟ್ರೀಯ ನಾಯಕರೇ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಮೊನ್ನೆ ಮೊನ್ನೆ ವಿವೇಕಾನಂದರ ಐಕ್ಯೂ ಟೆಸ್ಟಿಂಗ್ ಮಾಡಲು ಹೋಗಿ ಭಾರೀ ಮುಖಭಂಗ ಅನುಭವಿಸಿದ್ದ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿಗೆ ಯಾಕೋ ಗ್ರಹಗತಿಗಳು ಚೆನ್ನಾಗಿದ್ದಂತಿಲ್ಲ. ಈಗ ಮತ್ತೊಂದು ಪೀಕಲಾಟ ಎದುರಾಗಿದೆ. ಈ ಬಾರಿ ಗಡ್ಕರಿ ವಿರುದ್ಧ ಬಂಡಾಯದ ಬಾವುಟ ಹಾರಿಸಿದವರು ಬಿಜೆಪಿಯ ಹಿರಿಯ ನಾಯಕ ಹಾಗೂ ರಾಜ್ಯಸಭಾ ಸದಸ್ಯ ರಾಮ್ ಜೇಠ್ಮಲಾನಿ.

ಗಡ್ಕರಿಯನ್ನು ಈ ಕೂಡಲೇ ಅಧಿಕಾರದಿಂದ ತೊಲಗಿಸಬೇಕೆಂದು ರಾಮ್ ಜೇಠ್ಮಲಾನಿ ಪಟ್ಟುಹಿಡಿದು ಬಹಿರಂಗವಾಗಿ ಸೆಡ್ಡುಹೊಡೆದು ನಿಂತುಬಿಟ್ಟರು. ನಾಯಕಮಣಿಗಳು ಏನೆಲ್ಲ ತ್ಯಾಪೆ ಕೆಲಸ ಮಾಡುತ್ತಾ ಬಂದರೂ ಈ ಒಳಜಗಳ ಬೀದಿಗೆ ಬಂದೇಬಿಟ್ಟಿತು. ಟೈಮ್ಸ್ ಚಾನೆಲ್‌ಗೆ ಜೇಠ್ಮಲಾನಿ ಕೊಟ್ಟ ಸಂದರ್ಶನದಲ್ಲಿ ಗಡ್ಕರಿಯ ಅಧ್ಯಕ್ಷಗಿರಿಯ ಬಗ್ಗೆ ಹಲವಾರು ಹಿರಿಯ ನಾಯಕರು ಅಸಮಾಧಾನ ಹೊಂದಿದ್ದಾರೆಂದೂ, ಸದ್ಯದಲ್ಲೇ ಅವರೂ ಕೂಡ ಗಡ್ಕರಿ ವಿರುದ್ಧದ ಹೋರಾಟದಲ್ಲಿ ಕೈಜೋಡಿಸುತ್ತಾರೆಂದೂ ಮತ್ತೊಂದು ಹೊಸ ಬಾಂಬ್ ಸಿಡಿಸಿಬಿಟ್ಟರು. ಹಾಗೆ ಅವರು ಹೆಸರಿಸಿದ ವ್ಯಕ್ತಿಗಳು ಮಾಮೂಲಿ ಕಾರ್ಯಕರ್ತರಾಗಿರಲಿಲ್ಲ. ರಾಷ್ಟ್ರೀಯ ಮಟ್ಟದ ನಾಯಕರಾದ ಯಶವಂತ ಸಿನ್ಹ ಶತ್ರುಘ್ನ ಸಿನ್ಹ ಜಸವಂತ್ ಸಿಂಗ್ ಮೊದಲಾದವರು ಗಡ್ಕರಿಯನ್ನು ತೊಲಗಿಸುವಲ್ಲಿ ಆಸಕ್ತರಾಗಿದ್ದಾರೆಂಬ ಸುದ್ದಿ ಮಾಧ್ಯಮಗಳಿಗೆ ಆಹಾರವಾಯಿತು.

ಆರೆಸ್ಸೆಸ್ ಮತ್ತು ಪಕ್ಷದ ಮೇಲೆ ಹಿಡಿತ ಸಾಧಿಸಿರುವ ನಿತಿನ್ ಗಡ್ಕರಿ, ಅರುಣ್ ಜೈಟ್ಲಿ, ಸುಷ್ಮಾ ಸ್ವರಾಜ್ ಮುಂತಾದವರ ಬಲಾಢ್ಯ ಗುಂಪು ಕೂಡಲೇ ಜಾಗೃತವಾಯಿತು. ಶಿಸ್ತು ಉಲ್ಲಂಘಿಸಿದ್ದಕ್ಕಾಗಿ ಪಕ್ಷದಿಂದ ಜೇಠ್ಮಲಾನಿ ಅವರನ್ನು ಅಮಾನತು ಮಾಡಿ, ತಮ್ಮ ವಿರೋಧಿಗಳ ಮೇಲೆ ನೇರ ಪ್ರಹಾರಕ್ಕೆ ಇಳಿದಿದ್ದಾರೆ. ಜೇಠ್‌ಮಲಾನಿ ಬೀಸಿದ ದೊಣ್ಣೆಯಿಂದ ಗಡ್ಕರಿಯನ್ನು ತಪ್ಪಿಸಿ ಅವರ ಆಯುಸ್ಸು ಹೆಚ್ಚಿಸಲು ಈ ಬಣದ ನಾಯಕರಿಗೆ ಬೇರೆ ದಾರಿಯೇ ಇರಲಿಲ್ಲ.

ಬಿಜೆಪಿಯ ಆಂತರಿಕ ಭಿನ್ನಾಭಿಪ್ರಾಯಗಳು ತಾತ್ವಿಕ ಅಂಶಗಳಿಗೆ ಸೀಮಿತ ಎಂಬ ತಮ್ಮ ಹಳಸಲು ಡೈಲಾಗನ್ನು ಈಗ ಬಿಜೆಪಿ ನಾಯಕರೇ ಹೇಳುತ್ತಿಲ್ಲ. ನಾಯಕರ ಅಧಿಕಾರದಾಹ, ಭ್ರಷ್ಟಾಚಾರ, ನೈತಿಕ ಅಧಃಪತನ ಈಗ ರಾಷ್ಟ್ರದಾದ್ಯಂತ ಹಸಿಹಸಿಯಾಗಿ ಹೊರಬಿದ್ದಿವೆ. ಈ ಬಾರಿಯ ಬಾನ್ಗಡಿಯ ಹಿಂದಿನ ಕೈವಾಡ ಇರುವುದು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯದ್ದು.

ಜೇಠ್‌ಮಲಾನಿ ಹೇಳಿಕೇಳಿ ಮೋದಿಯ ಬಲಗೈ ಬಂಟ. ಜೇಠ್‌ಮಲಾನಿಯನ್ನು ಬಿಜೆಪಿ ರಾಜ್ಯಸಭಾ ಎಂಪಿ ಮಾಡಿದ್ದೇ ನರೇಂದ್ರ ಮೋದಿಯ ಒತ್ತಾಯದಿಂದಾಗಿ. ಅದಕ್ಕೆ ಪ್ರತಿಯಾಗಿ ಜೇಠ್‌ಮಲಾನಿಯೂ ಮೋದಿ ಋಣ ತೀರಿಸುತ್ತಲೇ ಬಂದಿದ್ದಾರೆ. ಹೇಗೆಂದರೆ ಅವಕಾಶ ಸಿಕ್ಕಾಗಲೆಲ್ಲ ನರೇಂದ್ರ ಮೋದಿಯೇ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಬಹಿರಂಗವಾಗಿ ಘೋಷಿಸುತ್ತಾ ಬಿಜೆಪಿಯೊಳಗೆ ಮೋದಿ ಪರವಾದ ಲಾಬಿಯನ್ನು ಮಾಡಿಕೊಂಡು ಬಂದಿದ್ದಾರೆ.

ಆದರೆ ಇತ್ತೀಚೆಗೆ ಆರೆಸ್ಸೆಸ್‌ನ ಹಿರಿಯ ಧುರೀಣ ಎಂ.ಜಿ.ವೈದ್ಯ ನಾಗಪುರ ಕೇಂದ್ರದಿಂದ ಅಖಾಡಕ್ಕಿಳಿದು ನರೇಂದ್ರ ಮೋದಿಯ ವಿರುದ್ಧ ಹರಿಹಾಯ್ದಿದ್ದಾರೆ. ಪಕ್ಷದ ಅಧ್ಯಕ್ಷರ ಮೇಲೆ ನಡೆಯುತ್ತಿರುವ ದಾಳಿಗಳ ಹಿಂದೆ ಮೋದಿಯ ನೇರ ಕೈವಾಡ ಇದೆಯೆಂದು ಆರೋಪಿಸಿದ್ದಾರೆ. ಅದಕ್ಕೆ ಮೋದಿ ಬಣ ನೀಡುವ ವಿವರಣೆಯೇ ಬೇರೆ. ಅದೇನೆಂದರೆ ಗುಜರಾತ್ ರಾಜಕಾರಣದಲ್ಲಿ ವೈದ್ಯನ ಮಗ ಮನಮೋಹನನಿಗೂ ಮೋದಿಗೂ ಭಿನ್ನಾಭಿಪ್ರಾಯಗಳಿರುವುದರಿಂದ ಪರಿವಾರದ ನಾಯಕ ವೈದ್ಯ ಮೋದಿ ವಿರುದ್ಧ ಮಾತಾಡುತ್ತಿದ್ದಾರೆ ಎಂಬುದು ಅವರ ವಿವರಣೆ.

ಈ ಎಲ್ಲ ಬೆಳವಣಿಗೆಗಳಿಗೆ ಕೆಲದಿನಗಳ ಮುಂಚೆ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯನಾಗಿದ್ದ ರಾಮ್ ಜೇಠಮಲಾನಿಯ ಮಗ ಮಹೇಶ್ ಜೇಠಮಲಾನಿ "ಗಡ್ಕರಿಯ ಭ್ರಷ್ಟಾಚಾರದಿಂದ ಬೇಸತ್ತು" ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ದೊಡ್ಡ ಸುದ್ದಿ ಮಾಡಿದ್ದ. ಹಾಗೆಯೇ ಬಹಳ ಹಿಂದಿನಿಂದಲೂ ಪ್ರಧಾನಿ ಹುದ್ದೆಯ ಕನಸನ್ನು ಜೀವಂತವಾಗಿರಿಸಿಕೊಂಡಿರುವ ವಯೋವೃದ್ಧ ಎಲ್.ಕೆ.ಅಡ್ವಾಣಿ ಕೂಡ ಗಡ್ಕರಿಯ ಏಳ್ಗೆಯನ್ನು ವಿರೋಧಿಸುತ್ತಲೇ ಬಂದಿದ್ದಾರೆ. ತೀರಾ ಇತ್ತೀಚೆಗೆ ನಡೆದ ಪಕ್ಷದ ಉನ್ನತ ಮಟ್ಟದ ಸಭೆಯೊಂದಕ್ಕೆ ಗೈರುಹಾಜರಾಗುವ ಮೂಲಕ ಗಡ್ಕರಿ ಗುಂಪಿಗೆ ಶಾಕ್ ನೀಡಿದ್ದಾರೆ.

ಹೀಗೆ ಕೇಂದ್ರ ಮಟ್ಟದಲ್ಲೂ ಬಿಜೆಪಿಯ ಆರೋಗ್ಯ ಚೆನ್ನಾಗಿಲ್ಲ. ಕರ್ನಾಟಕದ ಸ್ಥಿತಿಗಿಂತಲೂ ಹೀನಾಯ ಸ್ಥಿತಿಯತ್ತ ಸಾಗುತ್ತಿದೆ. ಈಗ ಅಸಲಿಗೆ ಬಿಜೆಪಿಯಲ್ಲಿ ಪ್ರಮುಖವಾಗಿ ಆಪರೇಟ್ ಆಗುತ್ತಿರುವ ಗುಂಪುಗಳು ಮೂರು. ಮೊದಲನೆಯದು ಗಡ್ಕರಿ ನಾಯಕತ್ವದ ಗುಂಪು; ಎರಡನೆಯದು ಅಡ್ವಾಣಿಯ ಗುಂಪು; ಮೂರನೆಯದು ಮೋದಿಯ ಗುಂಪು. ಈ ಯಾವ ಗುಂಪೂ ಮತ್ತೊಂದು ಗುಂಪಿನ ಮಾತು ಕೇಳುವ ಸ್ಥಿತಿಯಲ್ಲಿ ಇವತ್ತಿಲ್ಲ.

ಗಡ್ಕರಿಯೆಂಬ ಅಪ್ಪಟ 420 ಬ್ಯುಸಿನೆಸ್‌ಮೆನ್ ಕಂ ರಾಜಕಾರಣಿ ಅಧ್ಯಕ್ಷ ಸ್ಥಾನಕ್ಕೇರಿದ ನಂತರ ಈ ಆಂತರಿಕ ಕಚ್ಚಾಟಕ್ಕೆ ಕೊನೆ ಮೊದಲೇ ಇಲ್ಲವಾಗಿದೆ. ಯಾಕೆಂದರೆ ಗಡ್ಕರಿಯ ಆಗಮನದಿಂದ ಬಿಜೆಪಿಯ ಉನ್ನತ ವಲಯದಲ್ಲಿ ಹರಿದ ಹಣ ಒಂದೆರಡು ಕೋಟಿಗಳದ್ದಲ್ಲ, ಗಡ್ಕರಿಯ ಡೀಲುಗಳು ಏನಿದ್ದರೂ ನೂರಾರು, ಸಾವಿರಾರು ಕೋಟಿಗಳ ಭಾರೀ ಗಂಟುಗಳು. ನಮ್ಮ ಬಳ್ಳಾರಿಯಿಂದಲೂ ನಾಗಪುರದ ದಿಕ್ಕಿನಲ್ಲಿ ಕಪ್ಪುಹಣ ಹರಿದಿರುವ ಬಗ್ಗೆ ಈಗಾಗಲೇ ಹಲವು ಬಾರಿ ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಹೀಗೆ ಕಂಡಾಪಟ್ಟೆ ಹರಿಯುತ್ತಿರುವ ಕಳ್ಳಹಣದಲ್ಲಿ ಬಿಜೆಪಿಯ ತತ್ವ ನೀತಿಗಳೆಲ್ಲಾ ಕೊಚ್ಚಿಹೋಗಿ ಬರೀ ಭ್ರಷ್ಟಾಚಾರದ ಕೊಚ್ಚೆಯಲ್ಲಿ ಕಂಠಪೂರ್ತಿ ಮುಳುಗಿ ಆತ್ಮಹತ್ಯೆಯ ಹಾದಿ ಹಿಡಿದಿದೆ. ಸದಾ ದೇಶಭಕ್ತಿಯನ್ನು ಬೋಧಿಸುವ ಸಂಘ ಪರಿವಾರದ ಬಹುಪಾಲು ನಾಯಕರೂ ಕೂಡ ಹುಚ್ಚಿ ಮದುವೆಯಲ್ಲಿ ಉಣ್ಣಲು ಕೂತುಬಿಟ್ಟಿದ್ದಾರೆ. ಇಂಥಾ ಸಂದಿಗ್ಧ ಸನ್ನಿವೇಶದಲ್ಲಿ ತತ್ವ ನೀತಿಗಳನ್ನು ನಂಬಿ ಕೂತಿರುವ ಅಮಾಯಕ ಕಾರ್ಯಕರ್ತರನ್ನು (ಅಂಥವರು ಯಾರಾದರೂ ಇನ್ನೂ ಇದ್ದರೆ??!) ಶ್ರೀ ರಾಮಚಂದ್ರನೇ ಕಾಪಾಡಬೇಕು.

■ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಫೈಜ್ ನೆನಪಿನಲ್ಲಿ ಸೆರೆಮನೆ ಕಾವ್ಯ ಮೇಳ



ಪ್ರಜಾಪ್ರಭುತ್ವ ವ್ಯವಸ್ಥೆಯ ಜೊತೆಗೆ ಹುಟ್ಟಿದ ಹಲವು ವ್ಯವಸ್ಥೆಗಳಲ್ಲಿ ಸೆರೆಮನೆಯೂ ಒಂದು. ಜನರ ಹಕ್ಕುಗಳ ರಕ್ಷಣೆಗಾಗಿ ನ್ಯಾಯಾಲಯಗಳು ಆರಂಭವಾದಂತೆ ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದರ ಭಾಗವಾಗಿ ಸೆರೆಮನೆಗಳು ಹುಟ್ಟಿಕೊಂಡವು. ವ್ಯಂಗ್ಯವೆಂದರೆ ಜನರ ಹಕ್ಕುಗಳನ್ನು ಕಸಿದವರಿಗಿಂತ ಜನರ ಹಕ್ಕುಗಳಿಗಾಗಿ ಹೋರಾಡಿದ, ಜನಪರವಾಗಿ ಸಾಹಿತ್ಯ ರಚಿಸಿದವರೂ ಈ ಸೆರೆಮನೆಗಳಲ್ಲಿ ಶಿಕ್ಷೆ ಅನುಭವಿಸಿದ್ದಿದೆ. ಅನೇಕ ಜನಪರ ಮತ್ತು ಮಾನವ ಹಕ್ಕು ಹೋರಾಟಗಾರರು ಇಂದಿಗೂ ಸೆರೆಮನೆಗಳಲ್ಲಿ ಜೀವನ ನಡೆಸುತ್ತಿದ್ದಾರೆ.

ಬ್ರಿಟಿಷರು ಮತ್ತು ಇತರ ವಸಾಹತುಶಾಹಿ ದೇಶಗಳ ಆಡಳಿತದಡಿ ಕ್ರೂರವಾದ ಶಿಕ್ಷೆ ಅನುಭವಿಸಿದವರಿದ್ದಾರೆ. ವಿದೇಶಿಯರಿಂದ ಬಿಡುಗಡೆ ಪಡೆದು ತಮ್ಮದೇ ಆಡಳಿತ ವ್ಯವಸ್ಥೆ ಸ್ಥಾಪಿಸಿದ ಸ್ವತಂತ್ರ ದೇಶಗಳಲ್ಲಿಯೂ ಮಾನವ ಹಕ್ಕು ಹೋರಾಟಗಾರರು ಸೆರೆಮನೆ ಸೇರಿದ್ದಿದೆ. ಪಾಬ್ಲೋ ನೆರೂಡ, ಬ್ರೆಕ್ಟ್, ಆಂಟೋನಿಯೋ ಗ್ರಾಮ್ಸಿ, ಜೀನ್ ಜೆನೆ, ವೋಲೆ ಶೋಯಿಂಕಾ, ಡುವರ್ಡೋರ್ ಗಿಲಿಯಾನೊ, ಡೆನಿಸ್ ಬ್ರೂಟಸ್, ಗೋರ್ಕಿ, ಮಾಯಾ ಏಂಜೆಲೋ, ಕೆನ್ ಸಾರೋವಿವಾ, ಫೈಜ್ ಅಹಮದ್ ಫೈಜ್, ವರವರ ರಾವ್, ಚೆರಬಂಡ ರಾಜ್, ಶ್ರೀಲಂಕಾದ ಕೆಲವು ತಮಿಳು ಕವಿಗಳು ಹಾಗೂ ಇನ್ನೂ ಅನೇಕ ಮಾನವ ಹಕ್ಕು ಹೋರಾಟಗಾರರು, ಕವಿಗಳು ಸೆರೆಮನೆವಾಸ ಮಾಡಿದ್ದಾರೆ. ಬ್ರಿಟಿಷರನ್ನು ಅಣಕಿಸಿ ಪದ್ಯ ರಚಿಸಿದ ಕಾರಣ ಚೆಂದ್ರೆಯವರು ಸೆರೆವಾಸ ಅನುಭವಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತುರ್ತು ಪರಿಸ್ಥಿತಿಯಲ್ಲಿ ಅನೇಕರು ಜೈಲು ಸೇರಿದ್ದರು.

ಹೀಗೆ ಸೆರೆಮನೆಗಳಲ್ಲಿ ಶಿಕ್ಷೆಗೆ ಒಳಗಾಗಿದ್ದವರು ರಚಿಸಿದ ಸಾಹಿತ್ಯ, ಇತರ ಸಾಹಿತ್ಯ ಸಂವೇದನೆಗಿಂತ ಭಿನ್ನವಾದುದು. ಅವರ ಶೀರ್ಷಿಕೆ, ನುಡಿಗಟ್ಟು, ವಸ್ತು ವಿನ್ಯಾಸ ಮತ್ತು ಆಶಯಗಳು ಎಲ್ಲವೂ ಭಿನ್ನವಾಗಿದ್ದು ಅದು ಬೇರೆಯದೇ ಬಗೆಯ ಮೀಮಾಂಸೆಯನ್ನು ಮಂಡಿಸುತ್ತಿರುತ್ತದೆ. ಇದನ್ನು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಷ್ಟಾಗಿ ಚಿಂತನೆಗೆ ಒಳಪಡಿಸಿದಂತಿಲ್ಲ. ಅದರ ವಿಶಿಷ್ಟತೆಯನ್ನು ತಿಳಿಯಲು ಯತ್ನಿಸಿಲ್ಲ. ಹೊಸ ತಲೆಮಾರಿನ ಬರಹಗಾರರು ಸಕ್ರಿಯವಾದ ಚಳವಳಿಯಲ್ಲಿ ಪಾಲ್ಗೊಳ್ಳುತ್ತ ಹೋರಾಟಪರವಾದ ಸಾಹಿತ್ಯ


ಪಾಬ್ಲೋ ನೆರೂಡ


ಮಾಯಾ ಏಂಜೆಲೋ

ರಚಿಸುವ; ಜಡ್ಡುಗಟ್ಟಿದ ವ್ಯವಸ್ಥೆಯನ್ನು ಬದಲಿಸಲು ಕಾರ್ಯಯೋಜನೆಗಳನ್ನು ರೂಪಿಸುವ ಕೆಲಸದಿಂದ ದೂರವಾಗುತ್ತಿದ್ದಾರೆಯೇ? ಸೆರೆಮನೆ ಮತ್ತು ಅರಮನೆಗಳ ಬಗೆಗೆ ಆಕರ್ಷಿತರಾಗಿ ದಂತಗೋಪುರದ ಬಂಡಾಯ ಸಾಹಿತ್ಯವನ್ನು ರಚಿಸುತ್ತಿದ್ದಾರೆಯೇ? ಹೊಸ ಸಮಾಜಕ್ಕಾಗಿ ಹೋರಾಡುವ ತುಡಿತ ಕಡಿಮೆಯಾಗಿ ಕಂಫರ್ಟ್ ಜೋನ್‌ಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆಯೇ?

ಈ ಪ್ರಶ್ನೆಗಳ ಬಗೆಗೆ ಆಸಕ್ತಿ ತಾಳಿದ ಅನೇಕ ಹೊಸ ತಲೆಮಾರಿನ ಬರಹಗಾರರು ಒಂದುಗೂಡಿ ಓದುವ, ಅದನ್ನು ಚರ್ಚಿಸುವ ಆಸಕ್ತಿ ತೋರಿದ್ದಾರೆ. ಹೆಸರಾಂತ ಕವಿ ಫೈಜ್ ಅಹಮದ್ ಫೈಜ್ ನೆನಪಿನಲ್ಲಿ ಡಿಸೆಂಬರ್ 9, 2012 ಭಾನುವಾರದಂದು ಬೆಂಗಳೂರಿನಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿದೆ. ಇದು ಬೆಂಗಳೂರಿನ ಸರಕಾರಿ ಕಲಾ ಕಾಲೇಜಿನಲ್ಲಿ ನಡೆಯಲಿದೆ.

ಡಾ. ಎಚ್.ಎಸ್. ರಾಘವೇಂದ್ರ ರಾವ್, ಡಾ. ರಹಮತ್ ತರೀಕೆರೆ, ಡಾ. ಬಂಜಗೆರೆ ಜಯಪ್ರಕಾಶ್, ಗೌರಿ ಲಂಕೇಶ್, ಬಾಗೇಶ್ರೀ ಭಾಗವಹಿಸಲಿದ್ದಾರೆ. ಲಕ್ಷ್ಮೀಪತಿ ಕೋಲಾರ, ದು.ಸರಸ್ವತಿ, ಗಂಗಾಧರಯ್ಯ ಕೃಷ್ಣಮೂರ್ತಿ ಬಿಳಿಗೆರೆ, ಕವಿತಾ ರೈ, ಎಂ.ಆರ್.ಕಮಲ, ಎಚ್.ಎನ್.ಆರತಿ, ಎಸ್.ಎ.ಎಂ.ಇಸ್ಮಾಯಿಲ್, ನಗರಗೆರೆ ರಮೇಶ್, ವಿ.ಆರ್.ಕಾರ್ಪೆಂಟರ್, ವಿ.ಎಂ.ಮಂಜುನಾಥ್, ಲಕ್ಕೂರು ಸಿ.ಆನಂದ, ವೆಂಕಟೇಶ್ ನೆಲ್ಲುಕುಂಟೆ, ಮಲರ್‌ವಿಳಿ, ವಿಕ್ರಮ್ ವಿಸಾಜಿ, ಪೀರ್ ಬಾಷಾ, ಜ.ನಾ.ತೇಜಶ್ರೀ, ಅರುಣ್ ಜೋಳದಕೂಡ್ಲಗಿ, ವಡ್ಡಗೆರೆ ನಾಗರಾಜಯ್ಯ, ರಮೇಶ್‌ಬಾಬು ಚೀಮನಹಳ್ಳಿ ಇನ್ನೂ ಮುಂತಾದ ಕವಿಗಳು ಭಾಗವಹಿಸಲಿದ್ದಾರೆ. ಸೆರೆಮನೆ ವಾಸ ಅನುಭವಿಸಿ ಬರೆದವರ ಅನುವಾದಿತ ಕವನಗಳನ್ನು ಇವರೆಲ್ಲರೂ ಓದಲಿದ್ದಾರೆ. ಈ ಬಗೆಗೆ ಸಂವಾದ ನಡೆಸಲಿದ್ದಾರೆ. ದಿನವಿಡೀ ನಡೆಯಲಿರುವ ಈ ಕಾರ್ಯಕ್ರಮವನ್ನು ಗೌರಿ ಲಂಕೇಶ್ ಪತ್ರಿಕೆಯ ಬಳಗ ಮತ್ತು ಪರಸ್ಪರ ಬಳಗಗಳೆರಡೂ ಕೂಡಿ ಆಯೋಜಿಸಿವೆ.

ಆಸಕ್ತರು ಇದರಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇವೆ.

■ ಗೌರಿ ಲಂಕೇಶ್ ಪತ್ರಿಕಾ ಬಳಗ ಮತ್ತು ಪರಸ್ಪರ ಬಳಗ

ಫೈಜ್ ನೆನಪಿನಲ್ಲಿ ಸೆರೆಮನೆ ಕಾವ್ಯ ಮೇಳ


ಡಿಸೆಂಬರ್ 9, 2012 ಭಾನುವಾರ

ಸ್ಥಳ: ಬೆಂಗಳೂರಿನ ಸರಕಾರಿ ಕಲಾ ಕಾಲೇಜ್

ಸಮಯ: ಬೆಳಗ್ಗೆ 10.20 ರಿಂದ ಸಂಜೆ 5.00

ಎಲ್ಲರಿಗೂ ಪ್ರೀತಿಯ ಸ್ವಾಗತ

ಚಾಮರಾಜಪೇಟೆಯ 'ಮಹಾಪ್ರಚಂಡನ' ಹತ್ಯೆ ಮಾರ್ಕೆಟ್‌ದೇವಿ ಬಂಟರ ಗ್ಯಾಂಗ್‌ವಾರ್ ಶುರು


ಲಿಂಗರಾಜು


ಮಾರ್ಕೆಟ್ ದೇವಿ

ಕೊಲೆಯಾದ ಸೋಕಾಲ್ಡ್ ಸಂಪಾದಕ ಚಾಮರಾಜಪೇಟೆಯ ಲಿಂಗರಾಜು ಹತ್ಯೆಯ ಹಿಂದೆ ಕೇವಲ ಪಾಲಿಕೆ ಪಾಲಿಟಿಕ್ಸ್ ಮಾತ್ರವಲ್ಲದೆ ಮುಂಬರುವ ವಿಧಾನಸಭಾ ಚುನಾವಣೆಯ ಭವಿಷ್ಯವೂ ಅಡಗಿತ್ತೆ?

ಇಂಥದೊಂದು ಊಹಾಪೋಹಕ್ಕೆ ದಿನೇದಿನೇ ರೆಕ್ಕೆಪುಕ್ಕ ಬಲಿಯುತ್ತಿದೆ. ಬೆಂಗಳೂರು ದಕ್ಷಿಣದ ಡಿಸಿಪಿ ರೇವಣ್ಣ ಚಾಮರಾಜಪೇಟೆಯ ಅನುಭವಿ ಎಸಿಪಿ ಜೇಗರ್‌ಕಲ್, ಇನ್ಸ್‌ಪೆಕ್ಟರ್ ಶಿವಮಲ್ಲಯ್ಯ ಸೇರಿದಂತೆ ಬಹುತೇಕ ಪೊಲೀಸ್ ಅಧಿಕಾರಿಗಳ ಹೊಟ್ಟೆಸಂಕಟ, ಹತ ಲಿಂಗರಾಜನ ನಟೋರಿಟಿ, ಆತನ ಪತ್ನಿಯ ಹಿನ್ನೆಲೆ ಮತ್ತು ಒಂದಾನೊಂದು ಕಾಲಕ್ಕೆ ಮುಕ್ಕಾಲುಪಾಲು ಬೆಂಗಳೂರಿನ ರೌಡಿಗಳ ಪಾಲಿಗೆ ಗಾಡ್‌ಫಾದರ್‌ನಂತಿದ್ದು ಈಗ ಗಾಯ ನೆಕ್ಕುತ್ತಿರುವ ಮಾಜಿ ಶಾಸಕ ಆರ್.ವಿ.ದೇವರಾಜ್ ಅಲಿಯಾಸ್ ಮಾರ್ಕೆಟ್ ದೇವಿಯ ಹಿಂಬಾಲಕರಲ್ಲೇ ಭುಗಿಲೆದ್ದ ಗ್ಯಾಂಗ್‌ವಾರ್ ಅನ್ನು ಕೆದಕಹೊರಟ ಯಾರಿಗಾದರೂ ಹತ್ಯೆಯ ಹಿಂದಿನ ಮತ್ತೊಂದು ಮುಖ ಗೋಚರಿಸಲೇಬೇಕು!

ಮೊನ್ನೆ ಅಂದರೆ ನವೆಂಬರ್ 20ರ ಬೆಳ್ಳಂಬೆಳಗ್ಗೆ ಚಾಮರಾಜಪೇಟೆಯ ಟಿ.ಆರ್.ಮಿಲ್ ಪಕ್ಕದ ವಿಠ್ಠಲನಗರದ ನಾಲ್ಕನೇ ಕ್ರಾಸಿನಲ್ಲಿ ತನ್ನ ಮನೆಯೆದುರೇ ಕೊಲೆಯಾದವನು ಮಾರ್ಕೆಟ್ ದೇವಿಯ ಮಾಜಿ ಬಂಟ, ಹಾಲಿ ಬಿಜೆಪಿ ಕಾರ್ಯಕರ್ತ, ಸೋಕಾಲ್ಡ್ ಆರ್.ಟಿ.ಐ. ಕಾರ್ಯಕರ್ತ ಮತ್ತು ಗತಕಾಲದ ಪತ್ರಿಕೆಯೊಂದರ ಸ್ವಯಂಘೋಷಿತ ಸಂಪಾದಕ ಲಿಂಗರಾಜು ಅಲಿಯಾಸ್ ಬೈಕ್ ಲಿಂಗ.

ಬೀದಿನಲ್ಲಿಯೊಂದರಿಂದ ಬಕೆಟ್ಟಿನಲ್ಲಿ ನೀರು ಸಾಗಿಸುತ್ತಿದ್ದ ಲಿಂಗನನ್ನು ಆತನ ಪತ್ನಿ ಉಮಾದೇವಿಯ ಎದುರೇ ಮೂವರು ಹಂತಕರ ತಂಡವೊಂದು ನಡುರಸ್ತೆಯಲ್ಲಿ ಕೊಚ್ಚಿ ಹಾಕಿತ್ತು, ಕೊಲೆಯಾದ 48 ಗಂಟೆಗಳೊಳಗೇ ಸಿನಿಮೀಯವಾಗಿ ಚಾಮರಾಜಪೇಟೆಯ ಪೊಲೀಸರು ಹಂತಕರ ತಂಡವನ್ನು ಹಿಡಿದುಹಾಕಿದ್ದರು. ಹಂತಕರನ್ನು ಹಿಡಿದ ಬೆನ್ನಲ್ಲೇ ಆಜಾದ್‌ನಗರ ವಾರ್ಡಿನ ಕಾಂಗ್ರೆಸ್ ಕೌನ್ಸಿಲರ್ ಗೌರಮ್ಮಳ ಪತಿ ಗೋವಿಂದರಾಜುವನ್ನೂ ಲಾಕಪ್ಪಿಗೆ ತಳ್ಳಿದ ಪೊಲೀಸರು ಅರೆಕ್ಷಣದಲ್ಲೇ ಕೊಲೆಯ ರಹಸ್ಯವನ್ನು ಭೇದಿಸಿದಂತೆ-ಇದೊಂದು ಸುಪಾರಿ ಕೊಲೆಯೆಂದೂ, ಕೌನ್ಸಿಲರ್ ಗೌರಮ್ಮರ ಪತಿ ಗೋವಿಂದರಾಜುವೇ ಎರಡೂವರೆ ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟು ಹಂತಕರನ್ನು ಛೂಬಿಟ್ಟಿದ್ದೆಂದೂ, ಕೊಲೆಗೂ ವಾರದ ಮೊದಲೇ ಗೋವಿಂದರಾಜು ಮನೆ ಮೇಲೆ ನಡೆದ ಲೋಕಾಯುಕ್ತರ ದಾಳಿಗೆ ಲಿಂಗರಾಜ್ ಕಾರಣಕರ್ತನಾಗಿದ್ದೇ ಹತ್ಯೆಗೆ ಮೂಲವೆಂದೂ ಪೊಲೀಸರು ಘೋಷಿಸಿಬಿಟ್ಟರು.

ನಿಜವಿರಬಹುದು. ಮಗಳ ಮದುವೆಗಿನ್ನೂ ವಾರ ಬಾಕಿಯಿರುವಾಗಲೇ ತನ್ನ ಮನೆ ಮೇಲೆ ಲೋಕಾಯುಕ್ತರನ್ನು ಛೂಬಿಟ್ಟು ಕೋಟಿಗಟ್ಟಲೇ ಆಸ್ತಿಪಾಸ್ತಿಯನ್ನು ಜಪ್ತಿ ಮಾಡಿಸಿದ ಬೈಕ್ ಲಿಂಗನ ವಿರುದ್ಧ ಕೌನ್ಸಿಲರ್ ಗೌರಮ್ಮನ ಪತಿ ಗೋವಿಂದರಾಜು ಸುಪಾರಿ ಕೊಟ್ಟಿರಲೂಬಹುದು. ಎಷ್ಟೆಂದರೂ ಸರ್ಕಾರ ಬಿಜೆಪಿಯದ್ದು. ಗಣೇಶ್‌ಮಂದಿರ ವಾರ್ಡಿನ ಕಾಂಗ್ರೆಸ್ ಕೌನ್ಸಿಲರ್ ಗೋವಿಂದರಾಜು ಲಂಚದ ಕೇಸಲ್ಲಿ ಜೈಲು ಪಾಲಾಗುವುದಕ್ಕೂ, ಆಜಾದ್‌ನಗರದ ಕಾಂಗ್ರೆಸ್ ಕೌನ್ಸಿಲರ್ ಗೌರಮ್ಮಳ ಪತಿ ಗೋವಿಂದರಾಜು ಕೊಲೆ ಕೇಸಲ್ಲಿ ಜೈಲು ಪಾಲಾದ್ದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ಚುನಾವಣೆಗಿನ್ನು ಕೆಲವೇ ತಿಂಗಳುಗಳಿರುವಾಗಲೇ ಏಕೆ ವಿರೋಧಿ ರಾಜಕಾರಣಿಗಳು, ಅವರ ಸಂಬಂಧಿ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ, ಕೊಲೆಕೇಸು, ಕಾರ್ಯಕರ್ತರ ಹತ್ಯೆಗಳಾಗುತ್ತಿವೆ? ಏಕೆ ಪೊಲೀಸರ ತನಿಖೆ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧವೇ ಶರವೇಗದಲ್ಲಿ ನುಗ್ಗುತ್ತದೆ?

ಈ ಥರದ ಸಾಧ್ಯತೆಯೊಂದನ್ನು ಚಾಮರಾಜಪೇಟೆಯ ಸೋಕಾಲ್ಡ್ ಸಂಪಾದಕ ಲಿಂಗರಾಜು ಹತ್ಯೆಯ ಹಿನ್ನೆಲೆಯಲ್ಲಿ ಜನ ಲೆಕ್ಕ ಹಾಕುವುದಕ್ಕೂ ಕಾರಣವಿದೆ.

ಕೊಲೆಯಾದ ಲಿಂಗರಾಜು ಉರ್ಫ್ ಬೈಕ್‌ಲಿಂಗ ಮತ್ತು ಸದ್ಯ ಕೊಲೆ ಆರೋಪ ಹೊತ್ತು ಜೈಲು ಪಾಲಾಗಿರುವ ಗೋವಿಂದರಾಜು ಇಬ್ಬರೂ ಇಲ್ಲಿಗೆ ವರ್ಷದ ಹಿಂದೆಷ್ಟೇ


ಕಾಂಗ್ರೆಸ್ ನಾಯಕ ಗೋವಿಂದ ರಾಜು


ಕೌನ್ಸಿಲರ್ ಗೌರಮ್ಮ

ಗಳಸ್ಯ ಕಂಠಸ್ಯರಾಗಿದ್ದವರು. ಚಾಮರಾಜಪೇಟೆಯ ಆಗುಹೋಗುಗಳಲ್ಲಿ ಅವಿಭಾಜ್ಯ ಅಂಗದಂತಿರುವ ಮಾರ್ಕೆಟ್ ದೇವಿ ಯಾನೇ ಮಾಜಿ ಶಾಸಕ ಆರ್.ವಿ.ದೇವರಾಜ್‌ರ ಅಭೇದ್ಯ ಕೋಟೆ ಈಗ ಚಿಂದಿಯೆದ್ದಿದೆ. ಎಸ್.ಎಂ.ಕೃಷ್ಣರ ಸರ್ಕಾರವಿದ್ದಷ್ಟೂ ಕಾಲ ಬೆಂಗಳೂರಿನ ಅನಭಿಷಕ್ತ ದೊರೆಯಂತೆ ಮೆರೆದ ಮಾರ್ಕೆಟ್ ದೇವಿ ಆಸ್ಥಾನದಲ್ಲಿದ್ದ ಬೆಕ್ಕಿನ ಕಣ್ಣು ರಾಜೇಂದ್ರ ಕೊಲೆಯಾಗಿ ಹೋದ. ಇಡೀ ಕಲಾಸಿಪಾಳ್ಯದ ಮಾರುಕಟ್ಟೆಗೆ ದೊರೆಯಂತಿದ್ದ ಗೇಟ್ ಗಣೇಶನೂ ಬೀದಿ ಹೆಣವಾದ. ದೇವಿಯ ಎಡಗೈ ಮತ್ತು ಬಲಗೈಯಂತಿದ್ದ ಪೂಣೆ-ಲೋಕಿ ಜೋಡಿಯಲ್ಲಿ ಪೂಣೆ ಅವಮಾನಕರವಾಗಿ ಕೊಲೆಯಾದರೆ ಗತವೈಭವದ ಅವಶೇಷದಲ್ಲಿ ಬದುಕುಳಿದ ಲೋಕಿ ದೇವಿಯ ಸಹವಾಸಕ್ಕೆ ಗುಡ್‌ಬೈ ಹೇಳಿ ಬಿಜೆಪಿ ಸೇರಿಕೊಂಡ. ಆ ಕಾಲದ ದೇವಿ ಬಂಟರ ಪೈಕಿ ಅಕ್ಕಿಮಂಡಿ ದಿನೇಶನ ಹೊರತಾಗಿ ಬೇರೆ ಯಾರೂ ಕೊನೆತನಕ ದೇವಿಯ ಬೆನ್ನಿಗೆ ನಿಲ್ಲಲೇ ಇಲ್ಲ.

ಪೂಣೆ ಲೋಕಿ, ಕೋಟೆ ನಾರಾಯಣ, ಮಾರ್ಕೆಟ್ ರಾಜ, ಗೇಟ್ ಗಣೇಶ, ಮಾರ್ಕೆಟ್ ವೇಲು, ಜಿಂಕೆ ಗೋವಿಂದ, ಶೇಖಿ, ಅಪ್ಪೋದ, ಜೋಡಿ ರಾಜೇಂದ್ರ, ಗಾರ್ಡನ್ ಕದಿರೇಶ್, ಡಿಚ್ಚಿ ಅನಂತ, ಬೈಕ್ ಲಿಂಗ, ಡೀಲು ವೆಂಕಟೇಶ, ಮಲೆಯಾಳಿ ಪ್ರವೀಣ, ಕುಟ್ಟಿರಾ... ಹೀಗೆ ಬೆಳೆಯುವ ಮಾರ್ಕೆಟ್ ದೇವಿ ಪಟಾಲಮ್ಮಿನ... ಇವತ್ತು ಒಬ್ಬೊಬ್ಬರದ್ದೂ ಒಂದೊಂದು ದಾರಿ. ಈ ಪೈ... ಅನೇಕರಿಗೆ ಅವರವರಲ್ಲೇ ದುಷ್ಮನಿ. ಹೀಗೆ ಶುರುವಾ... ಅಧಿಕಾರಹೀನ ದುಷ್ಕಾಲಕ್ಕೆ ಸಿಲುಕಿದ ದೇವಿ ಪಡೆಯ... ಅಂತಃಕ್ಷೋಭೆಯ ಫಲವೇ ಬೈಕ್‌ಲಿಂಗನ ಹತ್ಯೆ.

ಇಲ್ಲಿಗೆ ವರ್ಷದ ಹೀಗೆ ಜಿದ್ದಾಜಿದ್ದಿಗಿಳಿದವರ... ಗೋವಿಂದರಾಜ ಮತ್ತು ಬೈಕ್‌ಲಿಂಗ. ಆ ಹೊತ್ತಿಗಾಗಲೇ ಮಾರ್ಕೆಟ್ ದೇವಿಯ ಶಿಷ್ಯ ಮಧ್ಯೆ ಕಚ್ಚಾಟ ಶುರುವಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಜಮೀರ್... ಆರ್ಭಟಕ್ಕೆ ಹೆದರಿ ಪಕ್ಕದ ಚಿಕ್ಕಪೇಟೆಗೆ ಕಾಂಗ್ರೆಸ್... ಅಭ್ಯರ್ಥಿಯಾದ ದೇವಿಗೆ ಅಲ್ಲೂ ಅಡ್ಡಗಾಲಾಗಿದ್ದು ಜಮೀರ್... ಅಹ್ಮದರೇ. ಜಮೀರ್ ತಮ್ಮ ಮುಜಮ್ಮಿಲ್ ಖಾನ್... ಮುಸ್ಲಿಂ ಓಟುಗಳನ್ನೆಲ್ಲ ಸಾರಾಸಗಟಾಗಿ ಕಿತ್ತ. ಕ್ಷೇತ್ರ... ಜನಕ್ಕೆ ಯಾರೆಂದೇ ಗೊತ್ತಿಲ್ಲದ ಹೇಮಚಂದ್ರಸಾಗರ್... ಬಿಜೆಪಿಯಿಂದ ಗೆದ್ದ. ಆ ಹೊತ್ತಿಗೆ ಮಾರ್ಕೆಟ್ ದೇ... ಒಂದಲ್ಲ ಎರಡು ಚುನಾವಣೆಗಳು ಸತತವಾಗಿ ಸೋತಾಗಿತ್ತು...

ಅಧಿಕಾರವಿಲ್ಲದೆ ದೇವಿ ಕಂಗೆಟ್ಟಿದ್ದು ಒಂದೆಡೆಯಾದ... ಮತ್ತೊಂದೆಡೆ ರುಚಿ ಕಂಡ ಅನುಯಾಯಿಗಳಲ್ಲೇ ಹಾಹಾಕಾ... ಭುಗಿಲೆದ್ದಿತ್ತು, ಬಲಗೈ ಬಂಟ ಲೋಕಿಯ ಅಡ್ಡೆಗಳಿ... ಪದೇಪದೇ ಸಿಸಿಬಿ ಪೊಲೀಸರು ನುಗ್ಗಿ ಹಾವಳಿಯಿಡುತ್ತಿದ್ದ...

ಪತ್ನಿ ಬೆಂಗ್ಳೂರಮ್ಮ, ಗಂಡ ಮಹಾಪ್ರಚಂಡ!

ಇಲ್ಲಿಗೆ ಮೂರು ವರ್ಷದ ಹಿಂದಿನ ಮಾತು. ಚೂಡಿದಾರ್ ಹಾಕ್ಕೊಂಡು ದಢೂತಿ ಹೆಂಗಸೊಬ್ಬಳು ಚಿತ್ರವಿಚಿತ್ರವಾಗಿ ಕುಣಿಯುತ್ತಾ ತನ್ನ ಎದುರಿಗಿದ್ದ ಭಕ್ತಾದಿಗಳನ್ನು ದೊಣ್ಣೆಯಿಂದ ಹೊಡೆಯುತ್ತಿದ್ದ ದೃಶ್ಯಾವಳಿಯನ್ನು ಕನ್ನಡದ ನ್ಯೂಸ್ ಚಾನಲ್ಲೊಂದು ಗೇಲಿ ಮಾಡಿ ಬಿತ್ತರಿಸಿತ್ತು. ಹಾಗೇ ಬುಸುಗುಟ್ಟುತ್ತಾ ಕುಣಿಯುತ್ತಿದ್ದ ಹೆಂಗಸಿನ ಮೈಮೇಲೆ ಯಾರೂ ಕಂಡರಿಯದ ಬೆಂಗ್ಳೂರಮ್ಮ ಎಂಬ ದೇವರು ಬರುತ್ತಿತ್ತಂತೆ. ಚಾಮರಾಜಪೇಟೆಯ ವಿಠ್ಠಲನಗರದ ತನ್ನ ಮನೆಯಲ್ಲಿ ಅದೆಂಥದೋ ಫೋಟೋ ಇಟ್ಟು ಅದರ ಸುತ್ತ ದೀಪ, ಧೂಪ, ಕುಂಕುಮ, ಮನುಷ್ಯನ ತಲೆ ಬುರುಡೆಯಿಟ್ಟು ವಿಕಾರವಾಗಿ ಕೂಗಾಡುತ್ತಾ ನರ್ತಿಸುತ್ತಿದ್ದಾಕೆಯೇ ಈಗ ಕೊಲೆಯಾದ ಲಿಂಗನ ಪತ್ನಿ ಉಮಾದೇವಿ!


ಪತ್ನಿ ಉಮಾದೇವಿ

ನ್ಯೂಸ್ ಟೀವಿಯಲ್ಲಿ ಹೀಯಾಳಿಸಿದ ಆ ವರದಿ ಬಂದಿದ್ದೇ ತಡ ಉಮಾದೇವಿಯ ಬೆಂಗ್ಳೂರಮ್ಮನ ಅವತಾರಕ್ಕೆ ಗಿರಾಕಿಗಳು ಕಮ್ಮಿಯಾದರು. ಕ್ರಮೇಣ ಶ್ರೀನಗರದ ಶ್ರೀಮಾತಾ ಮಹಿಳಾ ಕೋ-ಆಪರೇಟಿವ್ ಬ್ಯಾಂಕಿನೆದುರು ಉಮಾದೇವಿ ಸಾಲ ಕೊಡಿಸುತ್ತೇನೆಂದು ಠಳಾಯಿಸತೊಡಗಿದಳು. ಯಾರೇ ಸಾಲಬೇಕೆಂದರೂ ಈಕೆಗೆ ಅಡ್ವಾನ್ಸಾಗಿ 25 ಸಾವಿರ ರೂಪಾಯಿಗಳ ಕಮೀಷನ್ ಕೊಡಬೇಕು.

ಇದು ಹತಲಿಂಗನ ಪತ್ನಿಯ ಸಣ್ಣ ಪರಿಚಯವಷ್ಟೆ. ಇನ್ನು ಲಿಂಗರಾಜು ಅಲಿಯಾಸ್ ಬೈಕ್ ಲಿಂಗನ ಇತಿಹಾಸ ವಿಚಿತ್ರ ಮತ್ತು ವಿಲಕ್ಷಣ. ಸತ್ತವರ ಬಗ್ಗೆ ಯಾರಿಗೆ ತಾನೇ ಮರುಕವಿರುವುದಿಲ್ಲ? ಎಂಥಾ ಪಾಪಿಯಾದರೂ ಅದಕ್ಕೆ ಹತ್ಯೆ ಪರಿಹಾರವಲ್ಲ, ಶಿಕ್ಷೆಯೂ ಅಲ್ಲ, ಆದರೆ ಲಿಂಗನ ಹತ್ಯೆಗೆ ಕಾರಣ ಹುಡುಕಬೇಕಲ್ಲವೇ?

ಮೂಲತಃ ಮದ್ದೂರಿನ ದೇವಯ್ಯನ ಮಗನಾದ ಲಿಂಗರಾಜು ಇಲ್ಲಿಗೆ ಹತ್ತು ವರ್ಷದ ಹಿಂದೆ ಜೆ.ಸಿ. ರಸ್ತೆಯ ಕೆನರಾ ಬ್ಯಾಂಕ್ ಹೆಡ್ಡಾಫೀಸಿನಲ್ಲಿ ಅಟೆಂಡರ್ ಆಗಿದ್ದ. ಏನೋ ಭಾನಗಡಿ ಮಾಡಿಕೊಂಡು ಶಿಕ್ಷಾರ್ಥವಾಗಿ ವರ್ತೂರ್‌ಗೆ ಎತ್ತಂಗಡಿಯಾದರೆ ಅಲ್ಲಿ ಬ್ಯಾಂಕಿನ ಲಾಕರ್‌ನ ಕೀಯನ್ನೇ ನಕಲು ಮಾಡಿಕೊಂಡು ತನ್ನ ಸಹಚರರನ್ನು ಬಿಟ್ಟು ಬ್ಯಾಂಕಿಗೇ ಕನ್ನ ಹಾಕಿಸಿ ಜೈಲು ಸೇರಿದ್ದ. ಅತ್ತ ಬ್ಯಾಂಕ್ ನೌಕರಿಯೂ ಕೈತಪ್ಪಿ ಜೈಲುಶಿಕ್ಷೆಗೂ ಸಿಲುಕಿ ಬೀದಿಗೆ ಬಿದ್ದ ಲಿಂಗರಾಜನಿಗೆ ಆಸರೆಯಾಗಿದ್ದು ಚಾಮರಾಜಪೇಟೆಯ ಮಾರ್ಕೆಟ್ ದೇವಿಯ ಅಡ್ಡೆ. ಕೊಲೆಯಾದ ಪೂಣೆಯ ಜೊತೆ ಬಿದ್ದು ಆತ ನಡೆಸುತ್ತಿದ್ದ ಆಟೋ ಫೈನಾನ್ಸ್ ಮತ್ತು ಮೀಟರ್ ಬಡ್ಡಿ ದಂಧೆಗೆ ಬ್ರೋಕರ್ ಆಗಿ ಜಮೆಯಾದ ಲಿಂಗನ ಮುಂದೆ ತಾನೇ ಒಂದು ಆಟೋ ಫೈನಾನ್ಸ್ ಅಡ್ಡೆ ಆರಂಭಿಸಿದ.

ಅಲ್ಲಿ ಆಟೋ ಚಾಲಕರಿಗೆಲ್ಲ ಸ್ವಂತ ಆಟೋ ಕೊಡಿಸುತ್ತೇನೆಂದು ವಂಚಿಸಿ ಪರಾರಿಯಾದವನು ಮತ್ತೆ ಪ್ರತ್ಯಕ್ಷನಾಗಿದ್ದು ವಶೀಲಿ ಪತ್ರಕರ್ತನ ಗೆಟಪ್ಪಿನಲ್ಲಿ. ಪತ್ರಿಕೆಯ ಹೆಸರೇ ಮಹಾ ಪ್ರಚಂಡ! ಅದು ಎಷ್ಟು ದಿನಗಳ ಕಾಲ ನಡೆಯಿತು? ಹೇಗಿತ್ತು? ಏನೆಲ್ಲ ಬರೆಯುತ್ತಿದ್ದ? ಓದುಗರ್‍ಯಾರು? ಏನೊಂದೂ ಯಾರಿಗೂ ಗೊತ್ತಿಲ್ಲ. ಆತನ ಪತ್ರಿಕೆಯನ್ನು ನೋಡಿದವರೂ ಇಲ್ಲ. ಆದರೆ ಮಹಾಪ್ರಚಂ... ಪತ್ರಿಕೆಯ ಸಂಪಾದಕನೆಂಬ ವಿಜಿಟಿಂಗ್ ಕಾರ್ಡ್‌ನ್ನು ಮಾ... ಬೇಕಾಬಿಟ್ಟಿ ಹಂಚುತ್ತಿದ್ದ!

ಬಹುಶಃ ಅದು ಕೇವಲ ವಿಜಿಟಿಂಗ್ ಕಾರ್ಡಿಗಷ್ಟೇ ಸೀಮಿತವಾಗಿತ್ತೆ? ವಿಚಿತ್ರವೆಂದರೆ ಸಂಪಾದಕನ ವೇ... ಬದಿಗಿಟ್ಟು ಲಿಂಗ ಇದ್ದಕ್ಕಿದ್ದಂತೆ ಮಾರ್ಕೆಟ್ ದೇವಿಯ... ಅಡ್ಡೆಯಲ್ಲಿ ಪ್ರತ್ಯಕ್ಷನಾಗಿದ್ದ. ಅವರ ಬಲಗೈ ಬಂಟ ಲೋಕಿಯ... ಜೊತೆ ಬಿದ್ದ. ದೇವಿ -ಸಹವಾಸಕ್ಕೆ ವಿದಾಯ ಹೇಳಿ... ಲೋಕಿ ಬಿಜೆಪಿ ಸೇರಿಕೊಂಡು ಸಂಸದ ಪಿ.ಸಿ. ಮೋಹನ್... ಜೊತೆಬಿದ್ದ ನಂತರ ಲಿಂಗ ತಾನೂ ಕೂಡ ಬಿಜೆ... ಕಾರ್ಯಕರ್ತನೆಂದು ಚಾಲ್ತಿಗೆ ಬಂದ. ಅಷ್ಟೇ ಆಗಿದ್ದ... ಲಿಂಗನ ಬಗ್ಗೆ ಯಾರಿಗೂ ತಕರಾರಿರಲಿಲ್ಲ. ಆದ... ರೋಲ್‌ಕಾಲ್ ದುರಾಶೆಯಿತ್ತಲ್ಲ-

ಚಾಮರಾಜಪೇಟೆ, ಶಂಕರಪುರ, ಮೈಸೂರು ರ... ಟಿ.ಆರ್. ಮಿಲ್ ಸುತ್ತಮುತ್ತ ಯಾವುದೇ ಹೊಸ ಕಟ್ಟ... ತಲೆ ಎತ್ತಿತೆಂದರೆ ಅಲ್ಲಿಗೆ ಲಿಂಗ ಪ್ರತ್ಯಕ್ಷನಾಗುತ್ತಿದ್ದ... ಸಂಬಂಧಪಟ್ಟ ಕಟ್ಟಡದ ನಕ್ಷೆಯನ್ನು ಆರ್‌ಟಿಐ ಬಳ... ಹೊರತೆಗೆದು ಕಟ್ಟಡದ ಮಾಲೀಕರನ್ನು ಸುಲಿಯುತ್ತಿದ್ದ... ಇದಕ್ಕೆ ಲಿಂಗನ ಜೊತೆ ಕೈಜೋಡಿಸಿದ್ದು ಡಿಚ್ಚಿ ಅನಂ... ಮತ್ತು ಡೀಲು ವೆಂಕಟೇಶನೆಂಬ ಪಕ್ಕಾಚುಕ್ಕಾ ಜೋಡಿ... ಡಿಚ್ಚಿ ಅನಂತನ ವಿಕೃತಿ ಎಂಥಾದ್ದೆಂದರೆ ಚಾಮರಾಜಪೇ... ಸುತ್ತಮುತ್ತಲ ಎಲ್ಲಾ ಕೌನ್ಸಿಲರ್‌ಗಳು, ರೌಡಿಗಳು, ಪುಢಾರಿಗ... ಜೊತೆ ಬಿದ್ದು ಅವರ ದೌರ್ಬಲ್ಯ ಮತ್ತು ವೈಯಕ್ತಿ... ಮಾಹಿತಿ ಕಲೆ ಹಾಕುವುದು ಮತ್ತು ಅದನ್ನು ಅವ... ವಿರೋಧಿಗಳಿಗೆ ಮುಟ್ಟಿಸುವುದು!

ಅನಂತನಿಗೆ ಆಳ್ಕಾಟಿ ಅನಂತ ಎಂಬ ಹೆಸರೂ ಇದ... ಹೀಗೆ ಅನಂತ ಕಲೆಹಾಕುವ ಮಾಹಿತಿ ಇಟ್ಟುಕೊಂಡ... ಡೀಲು ಕುದುರಿಸುವವನು ದೇವಿಯ ಮತ್ತೊಬ್ಬ ಶಿ... ವೆಂಕಟೇಶ. ಈತ ರಕ್ಷಣಾ ವೇದಿಕೆಯ ಚಾಮರಾಜಪೇ... ಘಟಕಕ್ಕೆ ಅಧ್ಯಕ್ಷ. ಇಂಥ ಖದೀಮ ಜೋಡಿಗೆ ವಿ...

ತಡೆಗಟ್ಟುವ ಶಕ್ತಿ ದೇವಿಗಿರಲಿಲ್ಲ. ಇದೇ ಹೊತ್ತಿಗೆ ಕಿಟ್ಟಿ ರಾಜೇಂದ್ರ ಕೊಲೆಯಾದ. ಶಾರ್ವತಿಪುರದ ...ಕೆ ಅದೆಂಥದೋ ಕಾಯಿಲೆಗೆ ಸಿಲುಕಿ ಸತ್ತ. ...ತಿಪುರದ ಮಾದೇಶ ಬಿಜೆಪಿಗೆ ಸೇರಿ ದೂರವಾದರೆ ...ತಮ್ಮ ಎರ್ರಾಸ್ವಾಮಿ ದೇವಿಯ ಗ್ಯಾಂಗಿನಲ್ಲೇ ...ದುವರೆದ.

...ನ್ನು ದೇವಿಯನ್ನು ನಂಬಿ ಉಳಿಗಾಲವಿಲ್ಲ ಎನ್ನಿಸಿ ...ಶ್ ಕದಿರೇಶ ಬಿಜೆಪಿ ಸೇರಿ ಪಿ.ಸಿ.ಮೋಹನ್ ...ಗಿಗಿಳಿದರೆ, ಭಕ್ಷಿಗಾರ್ಡನ್ನಿನ ಹಂತಕ ಸಹೋದರರಾದ ...ರಾಜ ಏರಿಯಾನೇ ಬಿಟ್ಟು ಗುಳೇ ಹೊರಟುಬಿಟ್ಟರು. ...ಮವಾಗಿ ದೇವಿ ಜೊತೆಗಿದ್ದದ್ದು ಕೋಟೆ ನಾರಾಯಣ, ...ಂದ, ಪೂಣೆ-ಲೋಕಿ, ಗೇಟ್ ಗಣೇಶ, ಡಿಚ್ಚಿ ಅನಂತ, ...ಲಿಂಗ, ಡೀಲು ವೆಂಕಟೇಶ ಮತ್ತು ಅಕ್ಕಮಂಡಿ ...ಶ ಮಾತ್ರ!

...ದೇನು ಕೇಡುಗಾಲವೋ ಕಲಾಸಿಪಾಳ್ಯದ ತರಕಾರಿ ...ಟ್ಟಿನ ಆಮದನಿಯ ಆಕರ್ಷಣೆಗೆ ಬಿದ್ದು ಮಾರ್ಕೆಟ್ ...ಯ ಗ್ಯಾಂಗ್ ಗೇಟ್ ಗಣೇಶನನ್ನು ಕೊಚ್ಚಿಹಾಕಿತು. ...ದ್ದಷ್ಟೂ ಕಾಲ ಆರ್.ವಿ.ದೇವರಾಜು ಅಭಿಮಾನಿಗಳ ...ದ ಅಧ್ಯಕ್ಷನಾಗಿದ್ದ ಗೇಟ್ ಗಣೇಶನ ಪಾಲಿಗೆ ಗುಡ್‌ಬೈ ಹೇಳಿದ್ದೇ ನೇರವಾಗಿ ಪಿ.ಸಿ.ಮೋಹನ್ ಪಾದಕ್ಕೆ ಶರಣಾಗಿ ಬಿಜೆಪಿಗೆ ಸೇರಿಕೊಂಡ.

ಮತ್ತೊಂದೆಡೆ ಗೋವಿಂದ ಮತ್ತು ಕೋಟೆ ನಾರಾಯಣರ ಗ್ಯಾಂಗ್ ದೇವಿ ಪಡೆಯನ್ನು ತೊರೆದು ಪ್ರತ್ಯೇಕ ಗ್ಯಾಂಗ್ ಆಗಿ ಅಸ್ತಿತ್ವಕ್ಕೆ ಬಂದಿತ್ತು. ಒಂದಾನೊಂದು ಕಾಲಕ್ಕೆ 'ಡಿ' ಗ್ರೂಪ್ ನೌಕರರ ಸಂಘದ ಅಧ್ಯಕ್ಷನಾಗಿದ್ದು ಅದರ ಸದಸ್ಯರಿಗೆ ಸೈಟು ವಿತರಿಸುತ್ತೇನೆಂದು ರಿಯಲ್ ಎಸ್ಟೇಟ್ ದಂಧೆಗಿಳಿದ ಗೋವಿಂದ ಅದರಲ್ಲೇ ಕೋಟಿಗಟ್ಟಲೆ ಕಮಾಯಿಸಿದ್ದ. ಜೊತೆಗಿಟ್ಟುಕೊಂಡೇ ತನ್ನನ್ನು ಪೊಲೀಸರ ಮೂಲಕ ಪೀಡಿಸುತ್ತಿದ್ದ ದೇವಿ ವಿರುದ್ಧ ಕೋಟೆ ನಾರಾಯಣ ಒಳಗೊಳಗೇ ಕತ್ತಿ ಮಸೆಯುತ್ತಿದ್ದ. ಇದನ್ನೇ ಕಾದು ಕಾಂಗ್ರೆಸ್ ನಾಯಕ ಡೀಕೆಯ ಪಟಾಲಮ್ಮಿಗೆ ಹಾರಿದ ಗೋವಿಂದ ತನ್ನ ಜೊತೆ ಅಳಿದುಳಿದ ದೇವಿ ಬಂಟರನ್ನೆಲ್ಲ ಸೇರಿಸಿಕೊಂಡ.

ಆದರೆ ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಕೋಟೆ ಗ್ಯಾಂಗಿನಲ್ಲೂ ಕಚ್ಚಾಟ ಶುರುವಾಗಿ ಕೋಟೆ ನಾರಾಯಣನ ವಿರುದ್ಧ ಆತನ ಬಲಗೈ ಭಟ್ಟಂಗಿಯಂತಿದ್ದ ಶೇಖರ್ ಅಲಿಯಾಸ್ ಶೇಖಿಯೇ ತಿರುಗಿಬಿದ್ದ. ಇದೇ ಹೊತ್ತಿಗೆ ಪಾಲಿಕೆ ಚುನಾವಣೆ ಬಂತು. ಚಾಮರಾಜಪೇಟೆ ವಾರ್ಡಿಗೆ ಅಪ್ಪೋಡ, ಬೀಟಿ ಮತ್ತು ಗೋವಿಂದ: ಈ ಮೂವರೂ ಒಂದಾನೊಂದು ಕಾಲಕ್ಕೆ ದೇವಿ ಪಾಳಯದಲ್ಲಿದ್ದವರೆ. ತನ್ನೆಲ್ಲ ರಿಯಲ್ ಎಸ್ಟೇಟ್ ಖಮಾಯಿಯನ್ನೂ ಬೇಕಾಬಿಟ್ಟಿ ಸುರಿದ ಗೋವಿಂದ ವಿಪರೀತ ಅಂತರದಿಂದ ಗೆದ್ದುಬಿಟ್ಟ. ಗೌರಮ್ಮನಿಗೆ 8000 ರಷ್ಟು ಓಟುಗಳು ಬಿದ್ದಿದ್ದರೆ ಎದುರಾಳಿ ಬಿಜೆಪಿ ಅಭ್ಯರ್ಥಿಗೆ ನಾಲ್ಕು ಸಾವಿರದಷ್ಟು ಓಟು ಬಿದ್ದಿದ್ದವು. ಗೋವಿಂದ ನಾಲ್ಕು ಸಾವಿರಕ್ಕೂ ಅಧಿಕ ಅಂತರದಿಂದ ತನ್ನ ಪತ್ನಿಯನ್ನು ಗೆಲ್ಲಿಸಿದ್ದ. ಅದೇ ಆತನ ಪಾಲಿಗೆ ವಿಪತ್ತಾಯಿತು.

ಗೆದ್ದ ಗೋವಿಂದ ಯಾವ ಪರಿ ಬೆಳೆದನೆಂದರೆ, ಆಜಾದ್‌ನಗರವಷ್ಟೇ ಅಲ್ಲ ಸುತ್ತಮುತ್ತಲ ಗೋರಿಪಾಳ್ಯ, ರಾಯಪುರಂ, ಟಿಪ್ಪೂನಗರ, ಆನಂದಪುರ, ಚಾಮರಾಜಪೇಟೆ, ಕಲಾಸಿಪಾಳ್ಯ ಇತ್ಯಾದಿ ಏರಿಯಾಗಳಲ್ಲಿ ಏನೇ ಕಾರ್ಯವಾದರೂ ಫಂಡು ಕೊಡುತ್ತಿದ್ದ. ಚಾಮರಾಜಪೇಟೆ ಬ್ಲಾಕ್ ಕಾಂಗ್ರೆಸ್ಸಿಗೆ ಅಧ್ಯಕ್ಷನಾದ. ಒಂದೆಡೆ ಡೀಕೆ ಬೆಂಬಲ ಜೊತೆ ವಿರೋಧಿ ನಾಯಕ ಸಿದ್ಧರಾಮಯ್ಯನವರ ಆಶೀರ್ವಾದ. ಹೇಗೂ ಚಾಮರಾಜಪೇಟೆಗೆ ಮುಂಬರುವ ಚುನಾವಣೆಯಲ್ಲಿ ಸೂಕ್ತ ಕಾಂಗ್ರೆಸ್ ಅಭ್ಯರ್ಥಿಯಿಲ್ಲದ್ದು ಗೋವಿಂದನ ಪಾಲಿಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ...ಗಡೆಯಿತು. ಹಾಗೇ ಗಡೆದ ಬಿಟಿ ದಾಳಿಗೆ ದೂರು ಕೊಟ್ಟಿದ್ದು ಇದೇ ಲಿಂಗ. ಜೊತೆಗೆ ಗೋವಿಂದರಾಜು ವಿರೋಧಿಗಳಾದ ವಿಜಿ, ಡಿಚ್ಚಿ ಅನಂತ, ಡೀಲು ವೆಂಕಟೇಶ, ಲೋಕಿಯೂ ಸೇರಿ ದೂರಿನ ಅರ್ಜಿಗೆ ಸಹಿ ಹಾಕಿದ್ದರು. ಈಗ ನಡೆದ ಲೋಕಾಯುಕ್ತ ದಾಳಿ ಗೋವಿಂದರಾಜು ವಿರುದ್ಧದ ಎರಡನೇ ದಾಳಿಯಾಗಿತ್ತು. ಇದಕ್ಕೆ ವಿಜಿ, ಡಿಚ್ಚಿ ಅನಂತ, ಡೀಲು ವೆಂಕಟೇಶ ಮತ್ತು ಲೋಕಿಯೇ ಲಿಂಗನ ಜೊತೆ ಸಹ ಅರ್ಜಿದಾರರಾಗಿ ಸಹಿ ಹಾಕಿದ್ದರು.

ಮಗಳ ಮದುವೆಗಿನ್ನು ವಾರ ಬಾಕಿಯಿದೆ ಎನ್ನುವಾಗಲೇ ಕೌನ್ಸಿಲರ್ ಗೌರಮ್ಮನ ಮನೆಗೆ ಲೋಕಾಯುಕ್ತ ಪೊಲೀಸರು ನುಗ್ಗಿದ್ದರು. 16 ಕೋಟಿಯಷ್ಟು ಆಸ್ತಿ ಜಪ್ತಿಯಾಯಿತು ನಿಜ. ಆದರೆ ಇಷ್ಟೆಲ್ಲ ಆಸ್ತಿಗೂ ಗೋವಿಂದರಾಜು ಈಗಾಗಲೇ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳಿಗೆ ಲೆಕ್ಕ ಕೊಟ್ಟಿದ್ದ. ಒಂದೇ ವರ್ಷದ ಅವಧಿಯಲ್ಲಿ ಇನ್‌ಕಮ್ ಟ್ಯಾಕ್ಸ್ ಮತ್ತು ಲೋಕಾಯುಕ್ತ ದಾಳಿ ನಡೆದಿತ್ತಾದರೂ ಕೌನ್ಸಿಲರ್ ಗೌರಮ್ಮನ ಪಾಲಿಗಿದ್ದು ಅನಿರೀಕ್ಷಿತವೇನಲ್ಲ. ಆದರೆ ಮಗಳ ಮದುವೆಯಿತ್ತಲ್ಲ, ಗೋವಿಂದರಾಜು ಪಾಲಿಗಿದು ದೊಡ್ಡ ಅವಮಾನವಾಗಿತ್ತು. ಮದುವೆಗೆಂದು ತಂದಿಟ್ಟಿದ್ದ ಒಡವೆ, ದುಡ್ಡು, ರೇಷ್ಮೆ ಸೀರೆಗಳನ್ನೆಲ್ಲ ಲೋಕಾಯುಕ್ತ ಪೊಲೀಸರು ಹೊತ್ತೊಯ್ದರು.



ಡೀಲು ವೆಂಕಟೇಶ | ಲೋಕಿ | ವಿಜಿ | ಡಿಚ್ಚಿ ಅನಂತ | ಅಪ್ಪೋಡ | ಚಂದ್ರ | ಮುಗ್ಯಾಂಬೋ ನಾಗ

...ಎನಂತಿದ್ದವನು ಪೂಣೆ. ಆದರೆ ಪೂಣೆಯ ಆಯುಸ್ಸಿನ ...ವೂ ತುಂಬಿಬಂದಿತ್ತು. ತನ್ನ ಜೊತೆಗಿದ್ದ ಹುಡುಗರ ...ಲ್ಲೇ ಪೂಣೆ ಕೊಲೆಯಾಗಿ ಹೋದ. ಅದೂ ಗೇಟ್ ...ಶನ ಹತ್ಯೆ ನಡೆದ ಒಂದೇ ತಿಂಗಳಿಗೆ ಪೂಣೆ ...ವಿಯಾಗಿದ್ದ. ಉಳಿದವನು ಲೋಕಿ ಮಾತ್ರ. ತನ್ನ ...ಲ್ಲ ಒಬ್ಬೊಬ್ಬರಾಗಿ ಕೊಲೆಯಾಗುತ್ತಿರುವುದಕ್ಕೆ ತಲೆಕೆಟ್ಟ ಅದೊಂದು ದಿನ ಲೋಕಿಯನ್ನು ಕಂಡಿದ್ದೆ 'ಪೂಣೆ ...ದ ಮರ್ಡರ್ ಆದ ಸರಿ. ಜೊತೆಗೆ ನೀನೂ ಹೋಗಿದ್ದರೆ ...ಗಿತ್ತು. ನಿನ್ನಿಂದಲೇ ನನಗೆ ಕೆಟ್ಟ ಹೆಸರು...' ಎಂದು ...ಬಿಟ್ಟ. ಇದನ್ನು ಕೇಳಿದ್ದೇ ತಡ ಲೋಕಿಯೂ ದೇವಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಲು ಸಕಲ ತಯಾರಿಯನ್ನು ಪೂರೈಸಿಕೊಂಡಿದ್ದ ಗೋವಿಂದನಿಗೆ ನಿರಾಶೆಯಾಗುವಂತೆ ಅದರ ಕ್ಯಾಟಗರಿಯೇ ಬದಲಾಗಿತ್ತು. ಆದರೆ ಪಕ್ಕದ ಆಜಾದ್‌ನಗರ ವಾರ್ಡ್ ಮಹಿಳಾ ಜನರಲ್ ಆಗಿದ್ದರಿಂದ ಗೋವಿಂದ ಅಲ್ಲಿಗೆ ತನ್ನ ಪತ್ನಿ ಗೌರಮ್ಮನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ.

ಗೌರಮ್ಮ ವಿರುದ್ಧ ಮಾಜಿ ಕೌನ್ಸಿಲರ್ ಬಿ.ಟಿ.ಶ್ರೀನಿವಾಸ್ ತನ್ನ ಪತ್ನಿಯನ್ನು ಬಿಜೆಪಿ ಅಭ್ಯರ್ಥಿಯನ್ನಾಗಿಸಿದರೆ, ಅಲ್ಲಿಗೆ ಜೆಡಿಎಸ್ ಅಭ್ಯರ್ಥಿಯಾಗಿದ್ದು ಚಾಮರಾಜಪೇಟೆಯ ಮಾಜಿ ಕೌನ್ಸಿಲರ್ ಅಪ್ಪೋಡರ ಪತ್ನಿ ಕೋಕಿಲ ಚಂದ್ರಶೇಖರ್.

ಇಂಥ ಅವಕಾಶವನ್ನೇ ಹೊಂಚು ಹಾಕಿ ಕಾಯುತ್ತಿದ್ದವನು ಬೈಕ್ ಲಿಂಗ ಅಲಿಯಾಸ್ ಲಿಂಗರಾಜ. ಪತ್ನಿಯನ್ನು ಗೆಲ್ಲಿಸಿದ ಮರುಕ್ಷಣವೇ ಗೋವಿಂದನ ಬೆನ್ನಿಗೆ ಬಿದ್ದ ಲಿಂಗ ಪದೇಪದೇ ಕಾಸು ಕೀಳಲಾರಂಭಿಸಿದ. ಬರುಬರುತ್ತ ಕಾಂಟ್ರಾಕ್ಟ್ ದಂಧೆಗೂ ಕೈಯಿಟ್ಟು ಆಜಾದ್‌ನಗರ ವಾರ್ಡಿಗೆ ಸಂಬಂಧಪಟ್ಟಂತೆ ತಲಾ 20 ಲಕ್ಷದ ನಾಲ್ಕು ಪ್ರಮುಖ ಟೆಂಡರ್‌ಗಳನ್ನು ತನಗೇ ಒಪ್ಪಿಸುವಂತೆ ಗೋವಿಂದನಿಗೆ ದುಂಬಾಲು ಬಿದ್ದ. ಲಿಂಗನ ದಾಹ ಮತ್ತು ಬ್ಲಾಕ್‌ಮೇಲ್‌ಗೆ ಹೈರಾಣಾದ ಗೋವಿಂದ ಕ್ರಮೇಣ ಆತನ ತಲೆಕಂಡರೇನೇ ಜಾಗ ಖಾಲಿ ಮಾಡುತ್ತಿದ್ದ.

ಯಾವತ್ತು ಗೋವಿಂದನಿಂದ ಲಕ್ಷಗಟ್ಟಲೆ ಲಾಭ ಹುಟ್ಟಲಿಲ್ಲವೋ ತಿರುಗಿಬಿದ್ದ ಲಿಂಗ ನೇರವಾಗಿ ಗೋವಿಂದನ ಬದ್ಧವೈರಿ ಮತ್ತು ದೇವಿಯ ಮಾಜಿ ಬಂಟ ಲೋಕಿಯ ಆಸ್ಥಾನದಲ್ಲಿ ಪ್ರತ್ಯಕ್ಷನಾದ. ಒಂದಾನೊಂದು ಕಾಲಕ್ಕೆ ದೇವಿಯ ಅಡ್ಡೆಯಲ್ಲಿ ತನಗೆ ಮಸ್ಕಾ ಹೊಡೆದುಕೊಂಡಿದ್ದು ಈಗ ಪತ್ನಿಯನ್ನು ಕೌನ್ಸಿಲರ್ ಮಾಡಿದ್ದೂ ಅಲ್ಲದೆ ಮುಂಬರುವ ಚುನಾವಣೆಯಲ್ಲಿ ಚಾಮರಾಜಪೇಟೆಗೇ ಕಾಂಗ್ರೆಸ್ ಅಭ್ಯರ್ಥಿಯೆಂದು ಘೋಷಿಸಲ್ಪಟ್ಟ ಗೋವಿಂದನ ಮೇಲೆ ಲೋಕಿಗೆ ಹೊಟ್ಟೆಕಿಚ್ಚು. ಜೊತೆಗೆ ಚಾಮರಾಜಪೇಟೆಯ ಆಲ್ಬಾಟಿ ಡಿಚ್ಚಿ ಅನಂತನೂ ಸೇರಿಕೊಂಡ. ಇಡೀ ಗ್ಯಾಂಗಿನಲ್ಲಿ ಸಕ್ರಿಯನಾಗಿದ್ದ ಡೀಲು ವೆಂಕಟೇಶನಿಗೂ ಗೋವಿಂದನ ಮೇಲೆ ಹಗೆಯಿತ್ತು. ಕಳೆದ ಪಾಲಿಕೆ ಚುನಾವಣೆಯಲ್ಲಿ ಚಾಮರಾಜಪೇಟೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ವಿಜಿಯೂ ಲೋಕಿ ಗ್ಯಾಂಗಿನಲ್ಲಿ ಜೊತೆ ಕೈಜೋಡಿಸಿದ.

ಗೋವಿಂದನ ಏಳಿಗೆ ಸಹಿಸದೇ ಒಗ್ಗಟ್ಟಾದ ಆತನ ಮಾಜಿ ಗೆಳೆಯರೆಲ್ಲರಿಗೂ ಹೇಗಾದರೂ ಮಾಡಿ ಗೋವಿಂದನಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿಸಬೇಕೆಂಬ ದುರಾಸೆ. ಜೊತೆಗೆ ಮಾರ್ಕೆಟ್ ದೇವಿಗೂ ತನ್ನನ್ನು ಮೀರಿ ಬೆಳೆಯದಂತೆ ಗೋವಿಂದನನ್ನು ಮಟ್ಟಾ ಹಾಕುವ ಅಸೂಯೆ. ಎಲ್ಲಿ ಗೋವಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಬಿಟ್ಟರೆ ತನಗೆ ಮುಳುವಾಗುತ್ತಾನೋ ಎಂದು ಶಾಸಕ ಜಮೀರ್‌ಗೂ ಆತಂಕ ಶುರುವಾಯಿತು. ಜೆಡಿಎಸ್ ಮತ್ತು ಕಾಂಗ್ರೆಸ್ ಮಧ್ಯೆ ಮುಸ್ಲಿಂ ಮತಗಳು ಹಂಚಿಕೆಯಾಗಿ ಇದರ ಲಾಭದಲ್ಲೇ ಬಿಜೆಪಿ ಗೆಲ್ಲಬೇಕೆಂಬುದು ಈ ಭಾಗದ ಬಿಜೆಪಿ ಧುರೀಣ ಮತ್ತು ಸಂಸದ ಪಿ.ಸಿ.ಮೋಹನ್ನರ ಹುನ್ನಾರ. ಆಜಾದ್‌ನಗರ ವಾರ್ಡಿಗೆ ಬಿಜೆಪಿಯಿಂದ ಪತ್ನಿಯನ್ನು ನಿಲ್ಲಿಸಿ ಸೋತಿದ್ದ ದೇವಿಯ ಮಾಜಿ ಅನುಯಾಯಿ ಬಿ.ಟಿ.ಶ್ರೀನಿವಾಸ್‌ರೇ ಮುಂದಿನ ಚುನಾವಣೆಗೆ ಬಿಜೆಪಿಯ ಅಭ್ಯರ್ಥಿಯಾಗಲು ಸಕಲ ರಣತಂತ್ರ ಹೊಸೆಯುತ್ತಿದ್ದದ್ದು ಗೋವಿಂದನ ಪಾಲಿಗೆ ಶತ್ರು ಬಲವನ್ನು ಉಲ್ಬಣಿಸಿತ್ತು.

ಇವರೆಲ್ಲರೂ ಸೇರಿ ಛೂಬಿಟ್ಟಿದ್ದು ಬೈಕ್ ಲಿಂಗನನ್ನು. ಲೋಕಾಯುಕ್ತ ದಾಳಿಗೂ ವರ್ಷದ ಮೊದಲೇ ಗೋವಿಂದರಾಜು ವಿರುದ್ಧ ಇನ್‌ಕಮ್ ಟ್ಯಾಕ್ಸ್ ದಾಳಿ...

ಈ ಒಂದೇ ಕಾರಣಕ್ಕೆ ಗೋವಿಂದರಾಜು ಬೈಕ್ ಲಿಂಗನನ್ನು ಕೊಲ್ಲಿಸುತ್ತಾನೆಂದರೆ- ಅದು ಸುಲಭಕ್ಕೆ ನಂಬಲು ಸಾಧ್ಯವಿಲ್ಲದ್ದು. ಏಕೆಂದರೆ ಕೊಲ್ಲಿಸುವುದೇ ಆಗಿದ್ದರೆ ಗೋವಿಂದರಾಜುವಿಗೆ ಲಿಂಗನನ್ನು ಛೂಬಿಟ್ಟ ಲೋಕಿಯನ್ನೋ, ತನ್ನ ಎದುರಾಳಿ ವಿಜಿಯನ್ನೋ ಕೊಲ್ಲಿಸಬಹುದಿತ್ತು. ಹೀಗೆ ಕೊಲ್ಲಿಸುವ ರಿಸ್ಕಿಗೆ ಕೈಹಾಕುವ ಬದಲು ಎರಡೋ ಮೂರೋ ಲಕ್ಷ ಕೊಟ್ಟರೆ ಲಿಂಗನೇ ತೆಪ್ಪಗಾಗುತ್ತಿದ್ದ. ಇವತ್ತಲ್ಲ ನಾಳೆ ಚಾಮರಾಜಪೇಟೆಗೆ ಶಾಸಕನಾಗುವ ಗುರಿ ಹೊತ್ತೇ ಕೋಟಿಗಟ್ಟಲೆ ಸುರಿದಿದ್ದ ಗೋವಿಂದರಾಜು ವಿರೋಧಿ ಬಿಜೆಪಿ ಸರ್ಕಾರದ ಭೀತಿಯಿದ್ದೂ ಸುಲಭಕ್ಕೆ


ದುಸ್ಸಾಹಸಕ್ಕಿಳಿಯವಷ್ಟು ದಡ್ಡನೇನಲ್ಲ. ಸಾಲದ್ದಕ್ಕೆ ಮಗಳ



ಮದುವೆಯನ್ನು ಇನ್ನೊಂದು ವಾರದಲ್ಲೇ ಇಟ್ಟುಕೊಂಡು ಊರ ತುಂಬಾ ಆಮಂತ್ರಣ ಹಂಚಿ ಬಂದಿದ್ದವನು ಕೊಲೆಗೆ ಕೈಹಾಕಿ ಏಕೆ ಪಜೀತಿಗೆ ಸಿಲುಕುತ್ತಾನೆ?

ಸತ್ಯ ಬೇರೆಯದೇ ಇದೆಯೆ? ಮಾರ್ಕೆಟ್ ದೇವಿಯನ್ನು ಮೀರಿ ಚಾಮರಾಜಪೇಟೆಗೆ ಶಾಸಕನಾಗಲು ಹೊರಟಿದ್ದೇ ಗೋವಿಂದರಾಜುವಿಗೆ ಮುಳುವಾಯಿತೆ? ಎದುರಾಳಿಗಳು ಹೂಡಿದ ಷಡ್ಯಂತ್ರಕ್ಕೆ ಗೋವಿಂದರಾಜು ಹುಂಬನಂತೆ ಸಿಲುಕಿ ಬಿದ್ದನೆ? ಅಥವಾ ಬೆಂಬಲಿಗರ ಅತೀ ಹುಮ್ಮಸ್ಸಿಗೆ ಸಿಲುಕಿ ಜೈಲು ಪಾಲಾದನೆ? ಎತ್ತಿಂದೆತ್ತ ಲೆಕ್ಕ ಹಾಕಿದರೂ ಮುಂಬರುವ ಚುನಾವಣೆಯಲ್ಲಿ ಎಮ್ಮೆಲ್ಲೆಯಾಗಬೇಕಿದ್ದ ಗೋವಿಂದರಾಜುವಿಗೆ ಇದು ಸರ್ವನಾಶವೆ.

ಒಂದಂತೂ ಸತ್ಯ. ಚಾಮರಾಜಪೇಟೆಯ ಮಟ್ಟಿಗೆ ಬಿಜೆಪಿ, ಜೆಡಿಎಸ್ ಮತ್ತು ಮಾರ್ಕೆಟ್ ದೇವಿಯ ಕೂಟಕ್ಕೊದಗಿದ ರಾಜಕೀಯ ಅನುಕೂಲ ನಿರಾಳವಾಗಿದೆ



...ಲೋಕಿಯೇ ಅನ್ನದಾತರು. ತೀರ ಇತ್ತೀಚೆಗೆ ...ಸೂರು ಸರ್ಕಲ್ ಅಂದರೆ ಸಿರ್ಸಿ ಸರ್ಕಲ್ಲಿನ ಜೋಷಿ ...ಗ್ ಹೋಮ್ ಎದುರಿಗಿದ್ದ ಐಪಾರಾಮಿ ಕಾಂಪ್ಲೆಕ್ಸ್ ...ದ್ಧ ಹಾವಳಿಗಿಳಿದ ಲಿಂಗ ಆರ್‌ಟಿಐ ಕಾಯ್ದೆ ಬಳಸಿದ್ದೆ ...ಮೇಲ್ ಶುರುಹಚ್ಚಿಕೊಂಡ. ಅದು ಮಹಾವೀರ್ ...ಕ್ಸ್. ಅದರ ಮಾಲೀಕ ಮಹಾವೀರ್ ಭಂಡಾರಿ. ...ಗಳೂರಿನ ಕುಖ್ಯಾತ ಮಾರುತಿ ಮೆಡಿಕಲ್ಸ್ ಖದೀಮ ...ತ ಕುಖ್ಯಾತ ಕಿರಿಗೆ ವಂಚಕ ಮಹೇಂದ್ರ ಮನ್ನೋಟ್ ...ಮಾರ್ವಾಡಿಗೆ ಬಂಡಾರಿ ಬಲಗೈ ಬಂಟ. ಇಬ್ಬರದೂ ...ದೇ ದಂಧೆಯಾದ್ದರಿಂದ ಸಹಜವಾಗೇ ಮಾರುತಿ ...ಡಿಕಲ್ಸ್ ಧಣಿ ಮನ್ನೋಟನೂ ಭಂಡಾರಿಯ ಬೆಂಬಲಕ್ಕೆ ...ದ್ದಾನೆ.


...ಕಟ್ಟಿಸುತ್ತಿದ್ದ ಕಾಂಪ್ಲೆಕ್ಸ್‌ನ ಒಟ್ಟು ಬಂಡವಾಳವೇ 20 ...ಟಿಯಷ್ಟು. ಇಷ್ಟೆಲ್ಲ ಸುರಿದು ನಿರ್ಮಿಸುತ್ತಿದ್ದ ಕಾಂಪ್ಲೆಕ್ಸ್‌ಗೆ ...ರಾಜನ ಹಾವಳಿ ಶುರುವಾಗಿದ್ದೇ ವಿಜಯನಗರದ ...ಟ್ ಮತ್ತು ಮಹಾವೀರ್ ಕಾಂಪ್ಲೆಕ್ಸ್ ಧಣಿ ಭಂಡಾರಿ ...ಮಾರ್ವಾಡಿಗಳಿಬ್ಬರಿಗೂ ತಲೆ ತಿರುಗಿದೆ. ಮಾಜಿ ...ರ್ ಅಪ್ಪೋಡಾ ಚಂದ್ರಶೇಖರ್ ಕಾಲಿಗೆ ಬಿದ್ದಿದ್ದೇ ಲಿಂಗನನ್ನು ಮಟ್ಟ ಹಾಕುವಂತೆ ಡೀಲಿಗಿಳಿದಿದ್ದಾರೆ. ಲಿಂಗನನ್ನು ಕರೆಸಿದ ಅಪ್ಪೋಡಾ ಚೌಕಾಸಿಗಿಳಿದರೆ ಲಿಂಗ ಮುಲಾಜಿಲ್ಲದೆ 25 ಲಕ್ಷ ಕೊಡಿಸುವಂತೆ ತಾಕೀತು ಮಾಡಿದ್ದಾನೆ.

ಒಂದು ಮೂಲದ ಪ್ರಕಾರ ಮಹಾವೀರ್ ಕಾಂಪ್ಲೆಕ್ಸ್‌ನ ಮಾರ್ವಾಡಿ ಲಿಂಗನಿಗೆ 25 ಲಕ್ಷ ರೂಪಾಯಿಗಳ ರೋಲ್‌ಕಾಲ್ ಪಾವತಿಸಿದ್ದಾನೆ. ಆದರೆ ದುರಾಶೆಗೆ ಬಿದ್ದ ಲಿಂಗ ಅದರಲ್ಲಿ ಪಾಲು ಕೊಡದೇ ಡಿಚ್ಚಿ ಅನಂತನನ್ನು ಯಾಮಾರಿಸಿದ್ದಾನೆ. ಡೀಲು ವೆಂಕಟೇಶನಿಗೂ ಪಾಲು ತಲುಪದೇ ಸಿಟ್ಟುಬಂದಿದೆ. ಇದು ಒಂದು ಸಾಧ್ಯತೆಯಾದರೆ, ಇನ್ನೂ ಕೆಲವರ ಪ್ರಕಾರ ಲಿಂಗನಿಗೆ 25 ಲಕ್ಷ ಕೊಡುವ ಬದಲು ಆತನಿಗೇ ಧಮಕಿ ಹಾಕುವಂತೆ ಮಾರ್ವಾಡಿಯೊಬ್ಬನನ್ನು ಮೊರೆ ಹೊಕ್ಕಿದ್ದಾರೆ.

ಇದರಲ್ಲಿ ಯಾವುದು ನಿಜ. ರೊಕ್ಕಸ್ಥ ಮಾರ್ವಾಡಿಗಳ ರಕ್ಷಣೆಗೆ ನಿಂತ ಆರೆಸ್ಸೆಸ್ ಮೂಲದ ಬಿಜೆಪಿ ನಾಯಕನೋರ್ವ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯಲು ಪೊಲೀಸರನ್ನು ಬಳಸಿಕೊಂಡನೆ?

ಪ್ರಾಣಿಗಳೇ ಕಾಡಿನ ದೇವರು

ಭಾಗ 3



ಕಾಡಿನ ಪ್ರವಾಸ



ಡಾ. ರೀಟಾ ರೀನಿ



ನಾವು ಹೋಗಿದ್ದ ಸಂದರ್ಭದಲ್ಲಿ ಮಳೆ. ಕಾಡಿನ ಎಲ್ಲಾ ಕಡೆ ಸಾಕಷ್ಟು ನೀರು, ದಟ್ಟ ಹಸಿರು. ಹಾಗಾಗಿ ನಮಗೆ ಕಂಡ ಪ್ರಾಣಿಗಳು ಕಡಿಮೆ. ಇದೇ ಜಾಗಕ್ಕೆ ಬೇಸಿಗೆಯಲ್ಲಿ ಹೋದರೆ ಪ್ರಾಣಿಗಳ ಓಡಾಟ, ಚಿನ್ನಾಟ, ಒದ್ದಾಟ ಎಲ್ಲ ನೋಡಲು ಸಿಗುತ್ತದಂತೆ. ಆಗ ನೀರು ಒಣಗಿ ಪ್ರಾಣಿಗಳೆಲ್ಲ ನೀರನ್ನು ಹುಡುಕುತ್ತಾ ನದಿ ಇರುವ ಈ ಜಾಗಕ್ಕೆ ಬರುತ್ತವೆ. ಅಲ್ಲದೆ ಕಾಡು ಕೂಡ ಸಾಕಷ್ಟು ಒಣಗಿರುತ್ತದೆ. ಆದ್ದರಿಂದ ಪೊದೆಗಳಿಲ್ಲದೆ ಪ್ರಾಣಿಗಳು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತವೆ. ನಾವು ಕೂತಿದ್ದ ಎಡಕ್ಕೆ ಎರಡು ಕರಡಿಗಳು ಅದೆಲ್ಲಿಂದಲೋ ಇದ್ದಕ್ಕಿದ್ದಂತೆ ಕಾಣಿಸಿಕೊಂಡವು.

ಕಾರು ಪಾರ್ಕಿಂಗ್ ಬಗ್ಗೆ ಯಾಕೆ ಅಷ್ಟು ಆತಂಕ ಇತ್ತು ಅಂದರೆ ಈ ಹಿಂದೆ ಕಾಡಿನಿಂದ ಬಂದ ಆನೆ ಅಲ್ಲಿ ಪಾರ್ಕ್ ಮಾಡಲಾಗಿದ್ದ ಕಾರನ್ನು ಜಖಂಗೊಳಿಸಿದ್ದ ಉದಾಹರಣೆಗಳು ಇದ್ದವು. ಕಾಡಿನಿಂದ ರಾತ್ರಿ ಹೊತ್ತು ಅಡ್ಡಾಡುತ್ತಾ ಬರುವ ಆನೆಗಳು ತಿನ್ನಲು ಏನೂ ಸಿಗದಿದ್ದರೆ ಸಿಕ್ಕ ಸಿಕ್ಕದ್ದನ್ನು ಎಳೆಯುತ್ತಾ, ಒದೆಯುತ್ತಾ ಸಾಗುವುದು ಸಾಮಾನ್ಯವಂತೆ. ಈ ಜಾಗಕ್ಕೆ ನಮಗಿಂತ ಮೊದಲೇ ಹೋಗಿ ಬಂದಿದ್ದ ಆಮೇಲೆ ನನಗೆ ಪರಿಚಯವಾದ ಸ್ನೇಹಿತರೊಬ್ಬರ ಹೋಂಡಾ ಸಿವಿಕ್ ಕಾರನ್ನು ಆನೆ ಕಾಲಿನಿಂದ ಒದ್ದು ದಂತದಿಂದ ತಿವಿಯಲು ಯತ್ನಿಸಿ ಅದು ರಿಪೇರಿ ಆಗದಷ್ಟು ಜಖಂ ಆಗಿಹೋಗಿದೆಯಂತೆ. ನಿಮ್ಗೀಗ ಅರ್ಥವಾಗಿರಬೇಕು, ನಾವು ಕಾಡಾನೆಗಳು ಆರಾಮವಾಗಿ ಓಡಾಡುವ ಒಂದು ಜಾಗದಲ್ಲಿದ್ದೇವೆ. ಅಲ್ಲಿ ಕಾರ್ ಪಾರ್ಕ್ ಮಾಡುವುದೆಂದರೆ ದೊಡ್ಡ ರಿಸ್ಕ್. ಗಾಡಿ ಪಾರ್ಕಿಂಗ್‌ಗೆ ಅಷ್ಟು ರಿಸ್ಕ್ ಎಂದಾದಮೇಲೆ ಇನ್ನು ನಾವು!

ಅದಿರಲಿ, ನಾನು ಮೊದಲೇ ಹೇಳಿದ ಹಾಗೆ ನನ್ನ ಕಲ್ಪನೆಯ ಟೆಂಟ್ ಬದಲು ಇಲ್ಲೊಂದು ಪುಟ್ಟ ಮನೆಯಿದೆ. ಅದೇ ನಮ್ಮ ಗುಡಾರ. ಅದರ ಹೊರಗಡೆ ಹೋಗುವುದು ಬಹಳ ಅಪಾಯ ಎಂಬ ಎಚ್ಚರಿಕೆ ಕೊಡಲಾಗಿತ್ತು. ಈ ಆನೆಗಳು ಅದೆಷ್ಟು ದೈತ್ಯವಾಗಿದ್ದರೂ ಅವು ಬರುವುದು ಹೋಗುವುದು ಮಾತ್ರ ಗೊತ್ತೇ ಆಗುವುದಿಲ್ಲ. ಎಷ್ಟು ನಿಶಬ್ಧವಾಗಿ ಬರುತ್ತವೆ ಅಂದರೆ ನೀವು ಈ ಮನೆಯಿಂದ ಹೊರಗೆ ಹೋಗುವ ಧೈರ್ಯ ಮಾಡಿದಿರಾದರೆ ನಿಶಬ್ಧವಾಗಿ ಬರುವ ಆನೆಗೆ ಹೆದರದೆ ಇರುವ ಎಂಟೆದೆ ಇರಬೇಕು. ಕಾಡಾನೆ ನಿಮ್ಮ ಮುಂದೆ ಹೀಗೆ ಬಂದು ಹೋಗುವುದನ್ನು ನೋಡುವುದೇ ಒಂದು ಅಪರೂಪದ ಅನುಭವ.

ಪರಿಸರವಾದಿಗಳು, ವೈಲ್ಡ್ ಲೈಫ್ ಫೋಟೋಗ್ರಾಫರ್‌ಗಳು ಕಾಡಿಗೆ ಹೋಗುವುದು ದಿನಗಟ್ಟಲೆ ಅಲ್ಲಿ ಉಳಿದುಬರುವುದು ಏಕೆ ಎಂಬ ಅನುಭವ ನನಗೀಗ ಆಗಲಾರಂಭಿಸಿತು. ದೇವರನ್ನು ಹುಡುಕುತ್ತಾ ಹೋದಂತೆ ಅಂದುಕೊಳ್ಳಿ! ತಿರುಪತಿಯಲ್ಲಿ ತಿಮ್ಮಪ್ಪನ ದರುಶನಕ್ಕಾಗಿ ದಿನಗಟ್ಟಲೆ ಸಾಲಿನಲ್ಲಿ ಕಾಯುವ ಭಕ್ತರ ಬಗ್ಗೆ ಕೇಳಿದ್ದೇನೆ. ಹಾಗೆ ಕಾಡಿನಲ್ಲಿ ಪ್ರಾಣಿಗಳೇ ದೇವರು. ಪ್ರಾಣಿಗಳ ದರ್ಶನಕ್ಕಾಗಿ ಕಾಯುತ್ತಾ ಕೂರಬೇಕು. ಕೈಯಲ್ಲಿ ಬೈನಾಕುಲರ್ಸ್, ಕುತ್ತಿಗೆಯಲ್ಲಿ ಕ್ಯಾಮೆರಾ ಹಾಕಿ ಕುಳಿತರೆ ಮಾತಿಲ್ಲ, ಕತೆಯಿಲ್ಲ, ಕೂತ ಕಡೆಯಿಂದ ಮೂರು ಕಡೆಗೂ ನಿಮ್ಮ ಕಣ್ಣು ಚಿತ್ತ ನೆಟ್ಟಿರುತ್ತದೆ. ಅಪಾರವಾದ ಸಹನೆಯನ್ನು ಅಪೇಕ್ಷಿಸುವ ಈ ಕೆಲಸ ನಿಜಕ್ಕೂ ರೋಮಾಂಚಕ.

ನಾವು ಕೂತಿರುವ ಸ್ಥಳದಿಂದ ಕಾಡಿಗೆ ಬಾಗಿಲೋ ಎಂಬಂತೆ ಬಿದಿರು ಮೆಳೆಗಳಿಂದ ಏರ್ಪಟ್ಟ ಕಮಾನುಗಳು ಅಲ್ಲಲ್ಲಿ ಕಾಣುತ್ತವೆ. 50 ಮೀಟರ್‌ನಷ್ಟು ದೂರದಲ್ಲಿ ಒಂದು ನೀರಿನ ಝರಿ. ಆ ನೀರಿನ ಝರಿಯ ಹತ್ತಿರ ಅಥವಾ ಆ ಬಿದಿರು ಮೆಳೆಗಳ ಸಂದುಗಳಿಂದ ಯಾವುದಾದರೂ ಪ್ರಾಣಿಗಳು ಬಂದರೆ ನಮಗೆ ದರ್ಶನ ಭಾಗ್ಯ. ಹಾಗೆ ಪ್ರಾಣಿಗಳು ಬರುವುದನ್ನು ಕಾಯುತ್ತಾ ಕೂರುವುದೇ ಈ 'ಆಪರೇಷನ್ ಕಾಡು'ವಿನ ಮುಖ್ಯ ಆಕರ್ಷಣೆ. ಎಲ್ಲಿಂದಲೋ ಒಂದು ಕಾಡಂದಿ ನಮ್ಮ ಮುಂದೆ ಹಾದುಹೋಗುತ್ತದೆ. ಮೊದಲ ಬಾರಿ ಕಣ್ಮುಂದೆ ಬಂದ ಕಾಡಂದಿ ಫೋಟೋ ತೆಗೆಯಲು ನಾನು ಸಜ್ಜಾಗಿ ಕುಳಿತೆ. ಅದಕ್ಕಂತೂ ನಾವಿರುವ ಪರಿವೆ ಇಲ್ಲ, ಅದು ಅಡ್ಡಾಡುತ್ತದೆ. ಸಿಕ್ಕಿದ್ದನ್ನು ತಿನ್ನುತ್ತಾ ತಿನ್ನುತ್ತಾ ಹಾಗೆ ಪೊದೆಗಳ ನಡುವೆ ಮರೆಯಾಗುತ್ತದೆ. ಆಗಾಗ್ಗೆ ಅಂಥಾ ಕಾಡಂದಿಗಳು ನೋಡಲು ಸಿಗುತ್ತವೆ.


ಎದುರಿಗೆ ಒಂದು ಕಾಡಂದಿ ಇದೆ ಎಂದರೆ ಹಂದಿ ತಿನ್ನೋರ ನಾಲಗೆ ತುಟಿ ಸವರಿಕೊಳ್ಳುತ್ತದೆ. ಹೀಗೆ ಮದ್ರಾಸಿನಿಂದ ಒಬ್ಬ ಮಹಾಶಯ ಈ ಜಾಗಕ್ಕೆ ಬಂದಿದ್ದಾಗ ಎದುರಿಗೇ ಬಂದ ಕಾಡಂದಿಯನ್ನು ನೋಡಿ, ಡ್ರೈವರ್‌ಗೆ, 'ಹೇ, ಹೇ, ಹಂದಿ ಕಣೋ, ರೈಫಲ್ ತಾ' ಎಂದು ಆದೇಶಿಸಿದರಂತೆ. ತಕ್ಷಣ ಮಾಲಿಕ ಬಂದು ಸಿಕ್ಕಾಪಟ್ಟೆ ರೇಗಾಡಿದರಂತೆ. ಅದಕ್ಕೆ ಆತ 'ಅಯ್ಯಯ್ಯೋ, ಕಣ್ಣ ಮುಂದೆ ಅಷ್ಟೊಂದು ಮಾಂಸ ಕಾಣ್ತಾ ಇದೆ, ಅದನ್ನು ಹೊಡೀಬೇಡ ಅಂತೀಯಲ್ಲಾ ಮಾರಾಯ' ಅಂದ್ರಂತೆ. ಮಾಲಿಕ ಅವತ್ತು ರಾತ್ರಿನೇ ಆ ಮದ್ರಾಸ್ ಮಹಾಶಯನನ್ನು ನಿರ್ದಾಕ್ಷಿಣ್ಯವಾಗಿ ಪ್ಯಾಕ್ ಮಾಡಿ ಕಳಿಸಿದ್ದರಂತೆ.

ಡಾನ್‌ನ ಈ 78ನೇ ವಯಸ್ಸಿನಲ್ಲೂ ಹಾಗೆ ಗಂಟೆಗಟ್ಟಲೆ ಕೂತು ಪ್ರಾಣಿಗಳಿಗಾಗಿ ಕಾಯುವ ಅಪರೂಪದ ಆಸಕ್ತಿ ಸೋಜಿಗ ಎನಿಸುತ್ತದೆ. ಬೆಳಗ್ಗೆ ಸುಮಾರು ನಾಲ್ಕೈದು ಗಂಟೆಗೆ ಚೇರ್ ಹಾಕ್ಕೊಂಡು ಕೂತರೆ ಮಧ್ಯಾಹ್ನ ಎರಡು-ಮೂರು ಗಂಟೆಯವರೆಗೆ ಏಳುತ್ತಿರಲಿಲ್ಲ ಮನುಷ್ಯ. ಕೆಲವೊಮ್ಮೆ ನಾವು ಬಲವಂತ ಮಾಡಿದರೆ, 'ಇಟ್ಸ್ ಓಕೆ, ಐ ಆಮ್ ಫೈನ್ ಹಿಯರ್' ಅಂತ ಕೂತುಬಿಡುತ್ತಿದ್ದರು. ಅಲ್ಲಿ ಜಿಂಕೆ, ಹಂದಿ, ಕರಡಿ ಎಲ್ಲಾ ಓಡಾಡುತ್ತಿದ್ದರೂ ಅವರ ಕಣ್ಣುಗಳು ಹುಡುಕುತ್ತಿದ್ದುದು ಮಾತ್ರ 'ದಿ ಬಿಗ್ ಕ್ಯಾಟ್'ಗೆ!

ನಮಗೆ ಎದುರಾಗಿ ದೂರದಲ್ಲಿ ನದಿಯ ಆಚೆದಡದಲ್ಲಿ ಒಂದು ಪುಟ್ಟ ಮೈದಾನದಂತ ಜಾಗ ಕಾಣಿಸುತ್ತದೆ. ಆ ಜಾಗಕ್ಕೆ ಹುಲಿಗಳು ಬರುತ್ತವೆ ಎಂದು ಡಾನ್ ಕಾಯುತ್ತಿದ್ದರು. ಸಾಮಾನ್ಯವಾಗಿ ರಾತ್ರಿಯ ಹೊತ್ತು ಪ್ರಾಣಿಗಳು ಹೊರಬರುತ್ತವಾದ್ದರಿಂದ ಮಧ್ಯ ರಾತ್ರಿ ಎರಡು ಗಂಟೆಗೋ ಮೂರು ಗಂಟೆಗೋ ಒಮ್ಮೊಮ್ಮೆ ಎದ್ದು ಬರುತ್ತಿದ್ದರು. ಆ ಬೆಳಕಿನಲ್ಲಿ ಅವರಿಬ್ಬರೂ ಆ ದಿನ ರಾತ್ರಿ ಚಂದನ್‌ನ ಎಬ್ಬಿಸಿಕೊಂಡು ಬಂದಿದ್ದರು. ಡಾನ್ ಹತ್ರ ಒಂದು ಪವರ್‌ಫುಲ್ ಟಾರ್ಚ್ ಇದೆ. ಅವರಿಬ್ಬರು ಹುಲಿಗಳನ್ನು ನೋಡಿದರಂತೆ.



ಹುಲಿಗಳ ಜೊತೆ ಡಾನ್ ಮುಖಾಮುಖಿಯಾದುದರ ಲೆಕ್ಕ ಹೇಳಿದರೆ ಎದೆ



ಧಸಕ್ ಅನ್ನುತ್ತೆ. ಡಾನ್ ಈ ಲೆಕ್ಕವನ್ನ ಎಷ್ಟು ಖಚಿತವಾಗಿ ಹೇಳ್ತಾರೆ ಅಂದ್ರೆ ***63 ಹುಲಿಗಳನ್ನು ಮುಖಾಮುಖಿಯಾಗಿದ್ದಾರಂತೆ*** - ತಮ್ಮ ಸ್ನೇಹಿತರ ಬೇಟೆಗೆ ಬಿಟ್ಟುಕೊಟ್ಟಿರುವ ಸಂಖ್ಯೆ ಇದರಲ್ಲಿ ಸೇರಿಲ್ಲ! ಒಂದು ಸಾರಿ ಡಾನ್ ಶಿಕಾರಿಗೆ ಅಂತ ಕಾಡಿಗೆ ಹೋಗಿದ್ದರು. ಆಗ ಕಾಡಿನ ನೀತಿಗಳು ಸ್ವಲ್ಪ ಬಿಗಿಯಾಗಲಾರಂಭಿಸಿದ್ದ ದಿನಗಳು. ಕೆಲವು ಪ್ರಾಣಿಗಳನ್ನು ಮಾತ್ರ ಶಿಕಾರಿ ಮಾಡಲು ಅನುಮತಿ ಇತ್ತು, ಹಾಗಾಗಿ ಶಿಕಾರಿ ಮಾಡಲು ಹೋಗುವವರ ಜೊತೆ ಯಾರಾದರು ಒಬ್ಬ ಬುಡಕಟ್ಟಿನ ವ್ಯಕ್ತಿಯನ್ನು ಇವರ ಮೇಲೆ ಕಣ್ಣಿಡಲು ಕಳಿಸುತ್ತಿದ್ದರಂತೆ. ಹೀಗೆ ಹೋಗುವಾಗ ಒಂದು ಕಡೆ ಒಂದು ಹಿಂಡಿನ ಜಿಂಕೆಗಳು ಹಿಂದೆ ನೋಡುತ್ತಾ ನಿಂತಿದ್ದವು. ಇದ್ದಕ್ಕಿದ್ದಂತೆ ಅಷ್ಟು ಜಿಂಕೆಗಳು ತಲೆ ಮುಂದೆ ಮಾಡಿ ಓಡಲಾರಂಭಿಸಿದವು. ತಮ್ಮ ಕಡೆಯೇ ಚಾರ್ಜ್ ಆಗಿಬರುತ್ತಿದ್ದ ಈ ಜಿಂಕೆಗಳು ಏಕೆ ಓಡುತ್ತಿವೆ ಎಂದು ಗ್ರಹಿಸುವಷ್ಟರಲ್ಲಿ ಅದರ ಹಿಂದೆಯೇ ಹುಲಿಯೊಂದು ಎಗರಿ ಬಂತು. ಆ ಕ್ಷಣಕ್ಕೆ ಯಾರಾದರೂ ಏನು ಮಾಡಬಹುದು? ಕೈಯಲ್ಲಿರುವ ಬಂದೂಕದಿಂದ ಗುಂಡು ಹಾರಿಸುವಂತಿಲ್ಲ, ಕಾಲಿಗೆ ಬುದ್ಧಿ ಹೇಳುವುದೊಂದೇ ಇರುವ ದಾರಿ. ಆದರೆ ಈ ಮನುಷ್ಯ ಕೈಲಿದ್ದ ಬಂದೂಕವನ್ನು ಹಿಡಿದು ಹುಲಿಯನ್ನು ಹೆದರಿಸಲು ಅದು ಬರುತ್ತಿದ್ದ ಕಡೆಗೆ ಎದುರಾಗಿ ನುಗ್ಗುವುದೇ? ಅದೃಷ್ಟಕ್ಕೆ ಆ ಹುಲಿ ಇವರನ್ನು ನೋಡಿ, 'ಇನ್ನೊಂದು ದಿನ ಬರ್ತೀನಿ' ಅಂತ ಹೇಳಿ ಹೋಗಿರಬೇಕು. ಸದ್ಯ ಆ ಇನ್ನೊಂದು ದಿನ ಬಂದಿಲ್ಲ, ಇತ್ತ ಜೊತೆಗೆ ಬಂದಿದ್ದವ ಆಗಲೇ ಅದೆಲ್ಲೋ ಮರ ಹತ್ತಿ ಕುಳಿತಿದ್ದನಂತೆ. ಕೈ ಮುಗಿದು, 'ಬುದ್ಧಿ ಇನ್ನೊಂದು ಸಾರಿ ನಿಮ್ಮ ಜೊತೆ ನನ್ನ ಕಾಡಿಗೆ ಕರೀಬೇಡಿ' ಅಂತ ಬೇಡಿಕೊಂಡನಂತೆ.

ಎರಡು ದಿನ ಆ ಕಾಡಲ್ಲಿ ಕಳೆದಿದ್ದಕ್ಕೆ ನೀರು ನಾಯಿಗಳು, ಆನೆಗಳು, ಕಾಡೆಮ್ಮೆಗಳು, ಕಾಡಂದಿಗಳು, ಕರಡಿಗಳು, ಸಾಕಷ್ಟು ಜಿಂಕೆಗಳನ್ನು ನೋಡಲು ಸಿಕ್ಕವು. ನಾವು ಕೂತಿದ್ದ ಎಡಕ್ಕೆ ಎರಡು ಕರಡಿಗಳು ಅದೆಲ್ಲಿಂದಲೋ ಇದ್ದಕ್ಕಿದ್ದಂತೆ ಕಾಣಿಸಿಕೊಂಡವು. ಈಗಾಗಲೇ ನನ್ನ ಕ್ಯಾಮೆರಾದಲ್ಲಿ ಕಪ್ಪು ಚುಕ್ಕೆಯಂತೆ ದಾಖಲಾಗಿದ್ದ ಒಂದು ಕರಡಿ ಸ್ವಲ್ಪಮಟ್ಟಿನ ನಿರಾಶೆ ತರಿಸಿದ್ದರಿಂದ ಈ ಎರಡು ಕರಡಿಗಳನ್ನು ಚೆನ್ನಾಗಿ ಹಿಡಿಬೇಕು ಅಂತ ಹಠದಲ್ಲಿ ಸಜ್ಜಾಗಿ ನಿಂತವಳಿಗೆ ಸಖತ್ ಪೋಸ್‌ಗಳನ್ನು ಕೊಟ್ಟವು ಆ ಕರಡಿಗಳು. ಅವುಗಳನ್ನು ನೋಡುವಾಗ ಅವು ಯಾವುದೋ ಭಯಂಕರವಾದವು ಅನಿಸಲಿಲ್ಲ, ಅವನ್ನು ಮುಟ್ಟುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನಿಸುತ್ತಿತ್ತು. ಅವುಗಳ ಒಂದೊಂದು ಹೆಜ್ಜೆ ಗುರುತನ್ನು ನನ್ನದಾಗಿಸಿಕೊಳ್ಳಬೇಕೆಂಬ ಧಾವಂತದಲ್ಲಿ ಅದೆಷ್ಟು ಫೋಟೋಗಳನ್ನು ಕ್ಲಿಕ್ಕಿಸಿದೆನೋ! ಈ ಎರಡು ಕರಡಿಗಳ ಫೋಟೋ ತೆಗೆಯುವಾಗಲೇ ಅದರ ಹಿಂದೆ ಏನೋ ಇದೆ ಎಂದಷ್ಟೇ ಗೊತ್ತಾಗುವಷ್ಟು ಅಸ್ಪಷ್ಟವಾದ ಆಕೃತಿ. ಬೈನಾಕುಲರ್ಸ್ ಹಿಡಿದು ನೋಡಿದರೆ ನಿಮ್ಮ ಮುಂದೆಯೇ ಬಂದಂತೆ ಕಾಣುವ ಕಾಡುಕೋಣ. ಈ ಕಾಡುಕೋಣಗಳು ನೋಡಲು ಒಂಥರಾ ಕ್ರೂರ ಮತ್ತು ಸೌಂದರ್ಯದ ಮಿಶ್ರಣ. ಅಪರೂಪದ್ದು ಎನ್ನುವಂತ ಕಂದು ಬಣ್ಣದ ಕುತ್ತಿಗೆ, ದೇಹ, ಬಿಳಿ ಕಾಲು, ಅಗಲವಾದ ಮುಖದ ಮೇಲೆ ಎರಡು ಜೋಡಿಸಿಟ್ಟ ಕೊಂಬುಗಳು ಅದೇನೋ ಗಾಂಭೀರ್ಯ! ಆನೆಕಟ್ಟೆ ಕಾಡಿನಲ್ಲಿ ಇವುಗಳ ಹಿಂಡನ್ನೇ ನೋಡಲು ಸಿಕ್ಕಿತು. ಊರಕೋಣಗಳಿಗಿಂತ ಇವು ಚುರುಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಊರ ಕೋಣಗಳು ಎಲ್ಲ ಪಳಗಿರೋದ್ರಿಂದ ಅವು ಯಾವುದಕ್ಕೂ ಹೆದರೊಲ್ಲ. ಆ[illegible] ಕಾಡುಕೋಣ ಹಾಗಲ್ಲ, ನಾವು ನೋಡಿದ ಹಿಂದಿನ ಕಾಡುಕೋಣಗಳು ಚುರುಕಾಗಿ ಚಂಗನೆ ಜಿಗಿಯುವುದ[illegible] ನೋಡುವುದೇ ಚೆನ್ನ. ಸುತ್ತಮುತ್ತಲ ಎಸ್ಟೇಟ್ ಅಥ[illegible] ಹೊಲ ಗದ್ದೆಗಳಲ್ಲಿ ಆನೆ, ಹುಲಿ, ಚಿರತೆ ಇವು[illegible] ಉಪಟಳಕ್ಕಿಂತ ಕಾಡುಕೋಣಗಳ ಉಪಟಳವೇ ಜಾಸ್ತಿಯ[illegible]

ಆ ಪೊದೆಗಳ ನಡುವೆ ದೂರದಲ್ಲಿ ಮೇಯು[illegible] ಕಾಡುಕೋಣ ಸದ್ಯಕ್ಕೆ ಅಲ್ಲಿಂದ ಕದಲುವ ಸೂಚನೆ ಇ[illegible] ರಿಂದ ನನಗೆ ಬಹಳ ಹತ್ತಿರದಲ್ಲಿದ್ದ ಕರಡಿಗಳನ್ನು ನೋಡು[illegible] ಅವುಗಳ ಫೋಟೋಗಾಗಿ ಕ್ಯಾಮೆರಾ ಲೆನ್ಸ್‌ನಿ[illegible] ನೋಡುವಾಗ ಬಲಗಡೆಯಿಂದ ಒಂದು ಜಿಂಕೆ ಕುಂಟ[illegible] ಬಂತು. ಆ ಕಾಡಲ್ಲಿ ಅದು ಬಂದು ಒಂಟಿಯ[illegible] ನಿಂತುಕೊಂಡದ್ದು ನೋಡಿದರೆ, ಯಾರಾದರೂ ನ[illegible] ಸಹಾಯ ಮಾಡಿ ಎಂದು ಕೇಳುತ್ತಿರುವಂತೆ ಕಾಣಿಸುತ್ತಿ[illegible] ಅದರ ತೊಡೆಯ ಭಾಗದಿಂದ ಯಾವುದೋ ಪ್ರಾ[illegible] ಹಿಡಿಯಲು ಯತ್ನಿಸಿ ದ್ದಿರಬೇಕು. ಹಸಿಹಸಿ ಗಾ[illegible] ಹೋಗಿಬಿಡಲೇ ಎನ್ನುತ್ತಿತ್ತು ಮನಸ್ಸು. ಅ[illegible] ಪುಕಗುಟ್ಟುತ್ತಿತ್ತು ಹೃದಯ. ಯಾಕಂದ್ರೆ ಅ[illegible] ಪಕ್ಕದಲ್ಲಿ ಎರಡು ಕರಡಿಗಳು ಬೇರೆ! 'ನನ್ನ ನೋ[illegible] ಅಂತಾನೆ ಅಲ್ಲಿಗೆ ಬಂದ ಹಾಗಿತ್ತು ಆ ಜಿ[illegible] ಅದು ಒಂದಷ್ಟು ಹೊತ್ತು ಅತ್ತ ಇತ್ತ ಕಣ್ಣಾ[illegible] ಗಾಯವನ್ನು ನೆಕ್ಕುತ್ತಾ, ಕರಡಿಯ[illegible] ಕಂಡಿದ್ದರಿಂದಲೋ ಏನೋ ಹಾಗೆ [illegible] ಹೋಯಿತು. ನಾನು ಕ್ಲಿಕ್ಕಿಸಿದ್ದ ಫೋಟೋ[illegible] ಡಾನ್‌ಗೆ ತೋರಿಸಿದೆ, 'ಇದಕ್ಕೆ ಏನಾಗಿರಬಹುದ[illegible] ಅಂತ ಕೇಳಿದೆ. 'ಯಾವುದೋ ಪ್ರಾಣಿ ಹಿಡಿಯ[illegible] ಯತ್ನಿಸಿರಬೇಕು. ಇಲ್ಲೇ ಎಲ್ಲೋ ಇರಬೇ[illegible] ಅಂದರು. ಅವರು ಇಲ್ಲೇ ಎಲ್ಲೋ ಇರಬ[illegible] ಎಂದದ್ದು ಹುಲಿಯ ಬಗ್ಗೆ.


ನಾವು ಹೋಗಿದ್ದ ಸಂದರ್ಭದಲ್ಲಿ ಮಳೆ. ಕಾ[illegible] ಎಲ್ಲಾ ಕಡೆ ಸಾಕಷ್ಟು ನೀರು, ದಟ್ಟ ಹಸಿರು. ಹಾಗ[illegible] ನಮಗೆ ಕಂಡ ಪ್ರಾಣಿಗಳು ಕಡಿಮೆ. ಇದೇ ಜಾ[illegible] ಬೇಸಿಗೆಯಲ್ಲಿ ಹೋದರೆ ಪ್ರಾಣಿಗಳ ಓಡಾಟ, ಚಿನ[illegible] ಒದ್ದಾಟ ಎಲ್ಲ ನೋಡಲು ಸಿಗುತ್ತದಂತೆ. ಆಗ ನೀ[illegible] ಒಣಗಿ ಪ್ರಾಣಿಗಳೆಲ್ಲ ನೀರನ್ನು ಹುಡುಕುತ್ತಾ ನದಿ ಇರು[illegible] ಈ ಜಾಗಕ್ಕೆ ಬರುತ್ತವೆ. ಅಲ್ಲದೆ ಕಾಡು ಕೂಡ ಸಾಕ[illegible] ಒಣಗಿರುತ್ತದೆ ಆದ್ದರಿಂದ ಪೊದೆಗಳಿಲ್ಲದೆ ಪ್ರಾಣಿಗಳು ಹ[illegible] ಸ್ಪಷ್ಟವಾಗಿ ಗೋಚರಿಸುತ್ತವೆ.

ಕಾಡಿನಲ್ಲಿ ಯಾವ ಪ್ರಾಣಿ ಕಾಣಲು ಸಿಗಲಿ, ಬಿ[illegible] ಹಾವುಗಳು ಒಂದಾದರೂ ಕಾಣುತ್ತದೆ ಅ[illegible] ಅಂದುಕೊಂಡಿದ್ದೆ ಅದರ ಬಗ್ಗೆ ನನಗೆ ಒಂದಷ್ಟು ಕುತೂ[illegible] ಜೊತೆಗೆ ಭಯ. ನಾಲ್ಕೈದು ವರ್ಷಗಳ ಹಿಂದೆ ನ[illegible] ಮನೆ ಕಟ್ಟಿಸುವಾಗ ಹೆಚ್ಚುಕಡಿಮೆ ಮುಗಿದಿತ್ತು, ಗ[illegible] ಕೂರಿಸಬೇಕಿತ್ತು, ಚಪ್ಪಡಿ ಹಾಕಿದ್ದರು. ಸುಮಾರು ಎಂ[illegible] ಉದ್ದದ ಹಾವೊಂದು ಈ ಚಪ್ಪಡಿಯ ಮೇಲೆ ಉದ[illegible] ಚಾಚಿಕೊಂಡು ಮಲಗಿದೆ. ನಾನು ಎಲ್ಲೋ ನೋಡಿಕೊಂ[illegible] ಚಪ್ಪಡಿ ಹತ್ತಿದವಳು, ಏನೋ ಸರಿದಂತಾಗಿ ಸರಕ್ಕನೆ ಹಿಂ[illegible] ಹೋದೆ. ಅದಾದ ಒಂದೆರಡು ದಿನದಲ್ಲಿ ನಮ್ಮ ಪ[illegible] ಸೈಟಿನಲ್ಲೇ ಇಟ್ಟಿಗೆಗಳ ನಡುವೆಯಿಂದ ಬಂದ ನಾಗರಹಾ[illegible] ಕಪ್ಪೆಯೊಂದನ್ನು ನುಂಗುತ್ತಿರುವ ದೃಶ್ಯವನ್ನು ನ್ಯಾಷ[illegible] ಜಿಯಾಗ್ರಫಿಕ್ ಚಾನಲ್‌ನಲ್ಲಿ ನೋಡುವ[illegible] ಸುತ್ತಮುತ್ತಲಿನವರೆಲ್ಲ ನಿಂತು ನೋಡಿದ್ದೆವು. ಈಗಂ[illegible] ಅವುಗಳ ಬಿಲಗಳು ಇಲ್ಲವಾಗುತ್ತಿರುವ ಪರಿಸ್ಥಿತಿಯಲ್ಲಿ ರ[illegible] ಮೇಲೆ ಹರಿದಾಡುತ್ತವೆ. ಅದಕ್ಕೆ ನಮ್ಮ ಸೋದರತ್ತೆ [illegible] ರೂಪಾಯಿ ಕೊಡ್ತೀನಿ ಅಂದರೂ ಕತ್ತಲಾದ ಮೇಲೆ ಮ[illegible] ನಡೆದುಕೊಂಡು ಬರೊಲ್ಲ.

ಡಾನ್ ಮನೆಯ ಗೋಡೆಯ ಮೇಲೆ ಒಂದು ಹೆಬ್[illegible] ಜಿಂಕೆಯನ್ನು ನುಂಗುತ್ತಿರುವ ಫೋಟೋ ತೂಗುಹಾಕಲಾ[illegible] ಅದರ ಬಗ್ಗೆ ಡಾನ್‌ನ ಕೇಳಿದೆ.....

ಕಸಬ್ ಒಮ್ಮೆ ನನ್ನ ಮಗನಂತೆ ಮುಗ್ಧನಾಗಿದ್ದ': ಅಶೀಶ್ ಚೌಧುರಿ

ಮುಂಬೈ ಮೇಲಿನ 26/11ರ ದಾಳಿಯಲ್ಲಿ ತನ್ನ ...ೋದರಿ ಮತ್ತು ಭಾವನನ್ನು ಕಳೆದುಕೊಂಡ ಹಿಂದಿ ... ಆಶಿಷ್ ಚೌಧುರಿ ಅವರು ಇತ್ತೀಚೆಗೆ ಸಂದರ್ಶನ ...ಂದರಲ್ಲಿ ಮನಮುಟ್ಟುವಂತೆ ಮಾತನಾಡಿದ್ದಾರೆ. ತನ್ನ ...ತ್ತಿನವರನ್ನು ಕಳೆದುಕೊಂಡಿದ್ದರೂ ಪಾಕಿಸ್ತಾನಿ ...ಯೋತ್ಪಾದಕ ಕಸಬ್‌ನನ್ನು ಗಲ್ಲಿಗೇರಿಸಿದ್ದನ್ನು ಚೌಧುರಿ ...ಭ್ರಮಿಸಲಿಲ್ಲ, ಬದಲಾಗಿ ಎಲ್ಲರೂ ಹೇಗೆ ಆತ್ಮನಿರೀಕ್ಷಣೆ ...ಡಿಕೊಳ್ಳಬೇಕೆಂದು ತೋರಿಸಿಕೊಟ್ಟಿದ್ದಾರೆ. ಅವರು ...ಡ ಮಾತುಗಳ ಅನುವಾದ ನಮ್ಮ ...ದುಗರಿಗಾಗಿ ಇಲ್ಲಿದೆ.




"ನಾನು ಕಸಬ್‌ನ ಸಾವನ್ನು ...ಭ್ರಮಿಸುವುದಿಲ್ಲ, ಯಾರದೇ ...ವನ್ನು ಆನಂದದಿಂದ ...ಗತಿಸುವುದಕ್ಕೆ ಯಾವ ...ಣವೂ ನನಗೆ ...ಣಿಸುವುದಿಲ್ಲ. ಕಸಬ್ ...ಗೇರಿದ್ದರಿಂದ ಒಂದು ದೊಡ್ಡ ...ಮಸ್ಯೆಗೆ ಚಿಕ್ಕ ಪರಿಹಾರವನ್ನು ...ಡುಕಿಕೊಂಡಂತಾಗಿದೆಯಷ್ಟೇ.

ನಾನೊಬ್ಬ ತಂದೆ. ನನ್ನ ಮಕ್ಕಳಿಗೆ ...ವರ ಸಾವನ್ನು - ಕಸಬ್‌ನ ಸಾವೂ ಸೇರಿದಂತೆ - ಸ್ವಾಗತಿಸುವಂತೆ ಮೇಲ್ಪಂಕ್ತಿಯನ್ನು ನಾನು ಹಾಕಲಾರೆ. ಮಾತ್ರವಲ್ಲ ನನ್ನ ಮಕ್ಕಳು ಯಾವ ಪೂರ್ವಾಗ್ರಹವೂ ಇಲ್ಲದೆ ಎಲ್ಲರನ್ನೂ ಪ್ರೀತಿಸುವಂತೆ ಬೆಳೆಯಬೇಕೆಂಬುದು ನನ್ನ ಆಶೆ.

ನನ್ನ ಪ್ರಕಾರ ದೇವರು ಒಬ್ಬನೇ ಆದರೆ ಮೌಢ್ಯದಿಂದಾಗಿ ಆತನಿಗೆ ಹಲವಾರು ಹೆಸರುಗಳು ಸಿಕ್ಕಿವೆಯಷ್ಟೇ. ಹಾಗೆಯೇ ಧರ್ಮವೂ ಒಂದೇ. ಅದು ಮಾನವೀಯತೆ. ಇದನ್ನು ಯಾರೂ ಕಸಬ್‌ನಿಗೆ ಹೇಳಿಕೊಟ್ಟಿರಲಿಲ್ಲವಾದ್ದರಿಂದ ಆತ ದಾರಿ ತಪ್ಪಿದ.

ಕಸಬ್‌ನ ಸಾವಿಗೆ ಬದಲಾಗಿ ಧರ್ಮ ಮತ್ತು ದೇವರ ಹೆಸರಿನಲ್ಲಿ ಕೊಲೆ ಮಾಡುವುದು ನಿಂತಾಗ ನಾನು ಸಂತೋಷಿಸುತ್ತೇನೆ. ಕಸಬ್ ಕೂಡ ಹಿಂದೊಮ್ಮೆ ನನ್ನ ಮಗನಂತೆ ಮುಗ್ಧನಾಗಿದ್ದ. ದುರದೃಷ್ಟವಶಾತ್, ಆತ ಕೆಟ್ಟ ಜನರ ಮತ್ತು ಕೆಟ್ಟ ಉಪದೇಶಗಳನ್ನು ಕೊಡುವವರ ನಡುವೆ ಹುಟ್ಟಿದ. ಅವರೆಲ್ಲ ಅವನಿಗೆ ದ್ವೇಷಿಸುವುದನ್ನಷ್ಟೇ ಕಲಿಸಿದರು. ಯಾರೂ ಹುಟ್ಟುತ್ತಲೇ ಕೆಟ್ಟವರಾಗಿರುವುದಿಲ್ಲ, ಕಸಬ್ ತನ್ನ ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ ಯೋಚಿಸಲಿಲ್ಲ, ಬದಲಾಗಿ ಜನರನ್ನು ಕೊಂದರೆ ದೇವರಿಗೆ ಸಂತೋಷವಾಗುತ್ತದೆ ಎಂದದ್ದನ್ನೇ ಆತ ನಂಬಿದ. ಅವನ ಬದುಕು ಸುಲಭವಾಗಿರಲಿಲ್ಲ.



ನಾನು ನಾಸ್ತಿಕನಲ್ಲ, ನನ್ನ ಸಹೋದರಿಯ ಜೊತೆ ಸಾಧ್ಯವಾದಾಗಲೆಲ್ಲ ನಾನು ಶಿರಡಿಗೆ ಹೋಗುತ್ತಿದ್ದೆ. ಆದರೆ ದೇವರನ್ನು ಸಂತೋಷಗೊಳಿಸುವ ತಪ್ಪು ಕಲ್ಪನೆಗೆ ಆಕೆ ತನ್ನ ಪ್ರಾಣವನ್ನೇ ಕಳೆದುಕೊಂಡ ನಂತರ ದೇವಸ್ಥಾನಕ್ಕೆ ಹೋಗುವುದು ನನ್ನನ್ನು ಸ್ವಾರ್ಥಿಯನ್ನಾಗಿಸುತ್ತದೆ ಎಂದು ನಾನು ಹೋಗುವುದನ್ನು ನಿಲ್ಲಿಸಿದೆ.

ದೇವರ ಹೆಸರಲ್ಲಿ ಇತರರನ್ನು ಕೊಲ್ಲುವುದನ್ನು ಪ್ರೇರೇಪಿಸುವ ಮತಾಂಧರಿಗೆ ಕಡಿವಾಣ ಹಾಕಬೇಕಿದೆ. ನನ್ನ ಸಹೋದರಿ ಮತ್ತು ಭಾವ ಇವತ್ತು ಬದುಕಿಲ್ಲ. ಅವರ ಸಾವಿಗೆ ಕಾರಣನಾದ ಓರ್ವ ಕಸಬ್‌ನನ್ನು ನಾಲ್ಕು ವರ್ಷಗಳ ಕಾಲ ಗಲ್ಲಿಗೇರಿಸಿದ್ದರೂ ಇದೇ ಅವಧಿಯಲ್ಲಿ ಮತಾಂಧರಿಂದಾಗಿ ಮುಂದೆ ಅವನಂತೆಯೇ ಭಯೋತ್ಪಾದಕರಾಗುವ ನೂರಾರು ಮಕ್ಕಳು ಜನ್ಮ ತಾಳಿದ್ದಾರೆ. ಅಂತಹ ಮಕ್ಕಳ ಬಗ್ಗೆ ನನಗೆ ದುಃಖ ಆಗುತ್ತದೆ.

ನಾನು ಪಾಕಿಸ್ತಾನವನ್ನೂ ದ್ವೇಷಿಸುವುದಿಲ್ಲ, ನಾನು ಆ ದೇಶಕ್ಕೆ ಭೇಟಿ ಕೊಟ್ಟಾಗ ಅದು ಕೂಡ ಇತರೆ ದೇಶಗಳಂತೆಯೇ ಇದೆ ಅನ್ನಿಸಿತು. ಪ್ರತಿ ದೇಶಕ್ಕೆ ಅದರದ್ದೇ ಆದ ಸಮಸ್ಯೆಗಳಿರುತ್ತವೆ. ಆ ಕಾರಣಕ್ಕೇ ಆ ದೇಶದ ಎಲ್ಲಾ ಜನರೂ ದುಷ್ಟರು ಎನ್ನಲಾಗುವುದಿಲ್ಲ.

ಕಸಬ್‌ನ ಸಾವಿನಿಂದ ನನಗೆ ಯಾವ ತರಹದ ಮುಕ್ತಾಯವೂ ಕಾಣಿಸುತ್ತಿಲ್ಲ, ಬದಲಾಗಿ ಜನರೆಲ್ಲ ಒಗ್ಗಟ್ಟಾಗಿ ದೇವರು ಒಬ್ಬನೇ ಎಂದು ಘೋಷಿಸಿದರೆ ಇಂತಹ ದುಷ್ಟತನಕ್ಕೆ ಮುಕ್ತಾಯ ಸಿಕ್ಕಂತಾಗುತ್ತದೆ.

ಕಸಬ್‌ನ ದೇಹವನ್ನು ಪಾಕಿಸ್ತಾನಕ್ಕೆ ಕಳುಹಿಸಿದರೂ, ಕಳುಹಿಸದಿದ್ದರೂ ಯಾವುದೇ ವ್ಯತ್ಯಾಸವಿಲ್ಲ. ಅವನ ದೇಹವನ್ನು ಅವನ ಕುಟುಂಬದವರಿಗೆ ಕೊಟ್ಟರೂ ಸರಿಯೇ. ನಾನು ಆತನನ್ನಾಗಲಿ, ಆತ ಮಾಡಿದ್ದನ್ನಾಗಲಿ ಸಮರ್ಥಿಸುವುದಿಲ್ಲ. ಆದರೆ ಆತನ ಸಾವು ಯಾವ ರೀತಿಯಲ್ಲೂ ಈ ಸಮಸ್ಯೆಗೆ ಮುಕ್ತಾಯವಲ್ಲ.

ಸಾಮರಸ್ಯ ಮತ್ತು ಶಾಂತಿಗಾಗಿ ಪ್ರಯತ್ನಿಸುವುದು ಕಷ್ಟಕರವೆನಿಸಿದರೂ ನಾವು ಅದಕ್ಕಾಗಿ ಶ್ರಮಿಸುವುದನ್ನು ಎಂದೂ ನಿಲ್ಲಿಸಬಾರದು."

ಭೇಷ್ ಅಶೀಶ್ ಚೌಧುರಿ. ನಿಮ್ಮಂತೆ ಯೋಚಿಸುವವರು ಇನ್ನೂ ಹೆಚ್ಚಾಗಲಿ...

ತಮಿಳುನಾಡಿನ ದಲಿತರಿಗೆಲ್ಲಿದೆ ನೆಮ್ಮದಿ?






ತಮಿಳುನಾಡಿನಲ್ಲಿ ಮತ್ತೆ ದಲಿತರ ಮೇಲೆ ಸವರ್ಣೀಯರಿಂದ ದೌರ್ಜನ್ಯವಾಗಿದೆ. ನವೆಂಬರ್ 7 ರಂದು ಧರ್ಮಾಪುರಿ ಜಿಲ್ಲೆಯ ಮೂರು ಹಳ್ಳಿಗಳಾದ ನಾಥಮ್, ಅಣ್ಣಾನಗರ ಮತ್ತು ಕೊಂಡಂಪಟ್ಟಿಯಲ್ಲಿ 140ಕ್ಕೂ ಹೆಚ್ಚು ದಲಿತರ ಮನೆಗಳನ್ನು ವಣ್ಣಿಯಾರ್ ಜನಾಂಗದವರು ಬೆಂಕಿಗಾಹುತಿಯಾಗಿಸಿದ್ದರು. ಅಂತರ್ಜಾತಿ ವಿವಾಹವಾಗಿದ್ದೇ ಇದಕ್ಕೆ ಕಾರಣ. ಈ ಕೃತ್ಯ ಕಳೆದ ಬಾರಿಯ ಕಿಲ್ವೇನ್ಮಣಿ (44 ದಲಿತರನ್ನು ಹತ್ಯೆಗೈಯ್ಯಲಾಗಿತ್ತು) ಮತ್ತು ತಿರುಚಿಯ ಘಟನೆಗಳನ್ನು ಮೀರಿಸುವಂತಿತ್ತು. ಇರಲಿ, ಇನ್ನು ಧರ್ಮಾಪುರಿ ಜಿಲ್ಲೆಯ ದಲಿತರ ಮನೆಗಳಿಗೆ ಹಚ್ಚಿರುವ ಬೆಂಕಿ ಆರಿದೆಯೋ ಇಲ್ಲವೋ ಆಗಲೆ ಪಕ್ಕದ ಜಿಲ್ಲೆಯಾದ ಕಡಲೂರಿನಲ್ಲಿ ಎಂಟು ದಲಿತರ ಮನೆಗೆ ಸವರ್ಣೀಯರು ನವೆಂಬರ್ 27 ರಂದು ಬೆಂಕಿ ಹಚ್ಚಿದ್ದಾರೆ, ಜೊತೆಗೆ ಆಸ್ತಿ ಹಾನಿ ಮಾಡಿದ್ದಾರೆ. ವಿಷಯ ಇಷ್ಟೆ, ಅಲ್ಲಿನ ದಲಿತ ಯುವಕರು ಸವರ್ಣೀಯ ಯುವತಿಯನ್ನು ರೇಗಿಸಿದ್ದಾರೆ. ಆ ವಿಷಯ ತಿಳಿದ ಪೋಷಕರು ದಲಿತರನ್ನು ಥಳಿಸಿ ಅದಕ್ಕೆ ಸಮಾಧಾನರಾಗದೆ ಅಲ್ಲಿನ ಎಂಟು ಮನೆಗಳನ್ನು ಸಹ ಬೆಂಕಿಗಾಹುತಿಯಾಗಿಸಿದ್ದಾರೆ. ಚುಡಾಯಿಸಿದವರಿಗೆ ಎಚ್ಚರಿಕೆ ನೀಡಬಹುದಿತ್ತು, ಇಲ್ಲವೇ ಅಷ್ಟು ದ್ವೇಷವಿದ್ದರೆ ಪೊಲೀಸರಿಗೆ ದೂರು ನೀಡಬಹುದಾಗಿತ್ತು. ಆದರೆ ಯುವಕರು ಮಾಡಿದ ತಪ್ಪಿಗೆ ಇಡೀ ದಲಿತ ಕುಟುಂಬಗಳಿಗೆ ಹಾನಿ ಮಾಡುವುದು ಮಾನವೀಯತೆಯೆ?

ಈ ಕಡಲೂರಿನ ದಲಿತರಿಗೆ ಇದೇನು ಹೊಸತಲ್ಲ. ಈ ಮೊದಲೆ 2007ರಲ್ಲಿ ತನ್ನ ಮನೆಯ ಹತ್ತಿರ ಜೂಜಾಡುತ್ತಿದ್ದ ಸವರ್ಣೀಯರನ್ನು ಪ್ರಶ್ನಿಸಿ ಅವರನ್ನು ತಡೆದಿದ್ದಕ್ಕೆ ದಲಿತ ಸುಬ್ರಮಣಿಯನ್ ಎಂಬುವನನ್ನು ಕೊಲೆ ಮಾಡಿದ್ದರು. ಇದೇ ಜಿಲ್ಲೆಯ ಪುಲಿಯೂರಿನಲ್ಲಿ ಮೂವರು ದಲಿತ ಯುವಕರ ಕತ್ತು ಕೊಯ್ದು ಕ್ಷುಲ್ಲಕ ಕಾರಣಕ್ಕೆ ಕೊಲೆ ಮಾಡಲಾಗಿತ್ತು. ಅಲ್ಲೇ ಚಿದಂಬರಂ-ವೃದ್ಧಾಚಲಂ ವಲಯದಲ್ಲಿ ಕಳೆದ ಎರಡು ವರ್ಷದಲ್ಲಿ 19 ದಲಿತರ ಕೊಲೆಯಾಗಿದೆ. ಅದರಲ್ಲಿ ಏಳು ಹೆಂಗಸರ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ ಎಂದು ಅಲ್ಲಿನ ದಲಿತ ಮುಖಂಡರು ಹೇಳುತ್ತಾರೆ. ಅಂದರೆ ಈ ಪ್ರದೇಶ ದಲಿತರಿಗೆ ಅಷ್ಟು ಒಳ್ಳೆಯದಲ್ಲವೆಂದು ತಿಳಿದಿದ್ದರೂ ಅಲ್ಲಿನ ಕಾನೂನು ಮತ್ತು ಪೊಲೀಸ್ ವ್ಯವಸ್ಥೆ ದಲಿತರ ಮಾನ ಪ್ರಾಣವನ್ನು ರಕ್ಷಿಸುವಲ್ಲಿ ವಿಫಲವಾಗಿದೆ. ಇತ್ತೀಚಿನ ದಿನಗಳಲ್ಲಂತೂ ಶೂದ್ರ ಜನಾಂಗ ದಲಿತರ ಮೇಲೆ ಎಗ್ಗಿಲ್ಲದೆ ತನ್ನ ಅಮಾನವೀಯ ಪ್ರತಾಪ ಮೆರೆಯುತ್ತಿದೆ. ದಿನಕ್ಕೊಂದು ಪ್ರಕರಣಗಳು ತಮಿಳುಮನಾಡಿನಲ್ಲಿ ಬೆಳಕಿಗೆ ಬರುತ್ತಿವೆ. ಇದು ಅಲ್ಲಿನ ಸರ್ಕಾರದ ಧೋರಣೆಯನ್ನು ತೋರಿಸುತ್ತಿದೆ. ಪೆರಿಯಾರರ ಹಿಂದುಳಿದ ವರ್ಗದ ಜನರ ಚಳವಳಿ ದಲಿತರನ್ನು ಮರೆತಿದೆ ಎಂಬುದನ್ನು ಹೇಳುತ್ತಿದೆ. ಪೆರಿಯಾರರ ಮೇಲೆ ಅಲ್ಲಿನ ಜನಕ್ಕೆ ಗೌರವವಿಲ್ಲವೇನೋ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ. ಅದಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ವಿಫಲತೆಯನ್ನು ಸೂಚಿಸುತ್ತದೆ. ಅದರ ಬದಲಿಗೆ ದಲಿತರಿಗೆ ಉತ್ತಮವಾದ ರಕ್ಷಣೆಯನ್ನು ಕಲ್ಪಿಸುವ ಮತ್ತೊಂದು ಸಮರ್ಪಕವಾದ ಕಾಯ್ದೆಯ ಅವಶ್ಯಕತೆಯನ್ನು ಸಾರಿ ಸಾರಿ ಹೇಳುತ್ತಿದೆ. ಅದಕ್ಕೂ ಮಿಗಿಲಾಗಿ ದಲಿತ ಚಳವಳಿಗಳ ಸಾವನ್ನು ಈ ಪ್ರಕರಣಗಳು ಸಾರಿ ಸಾರಿ ಹೇಳುತ್ತಿವೆ.

● ವಿಕಾಸ ಆರ್ ಮೌರ್ಯ, ಬೆಂಗಳೂರು

ಒಂದು ಸಾವ ಜಾನಿಸಿ



ನನಗಿಂತ ತುಸು ಕಿರಿಯ
ಆ ಹುಡುಗ ತುಡುಗು ಬುದ್ಧಿಯವ
ಮತ್ತು ಕುರುಡ
ಅಮ್ಮಿಯ ತುಸು ನೆನೆದು
ನೇಣಿಗೆ ಕೊರಳೊಡ್ಡಿ ಕೊಲೆಯಾಗುತ್ತಾನೆ;
ಅವನಿಗೇಕೆ ನ್ಯಾಯ
ಮತ್ತು ಅನ್ಯಾಯದ ಮಾತು?

ಹುಟ್ಟಿದ್ದು ಅವ ನನ್ನಂತೆಯೇ
ಮಗುವಾಗಿ. ಅತ್ತ
ಅವ ಕಂಡ ಲೋಕದ ಬಡವಿಗೆ.
ಹುಟ್ಟುತ್ತಲೇ ಹಸಿದಿದ್ದ
ಹಸಿ ಹಸಿದು ಕದ್ದ ಮಿಠಾಯಿ
ಬಂದೂಕನೆತ್ತಿ ಕಂಡುಕೊಂಡಿದ್ದು
ಸ್ವರ್ಗದತ್ತ ದಾರಿ!!

ಬಡವನ ಹಾದಿಗೆ
ಯಾರೋ ಇಟ್ಟ ಕಲ್ಲುಮುಳ್ಳುಗಳು
ಹೊಟ್ಟೆಗೆ ಚುಚ್ಚುವುದಿಲ್ಲ;
ತೊಗಲಿಗಷ್ಟೇ ತೂತು;
ಬಡತನ ಸಾಯುವುದಿಲ್ಲ.

ಮಿಠಾಯಿ ಕದ್ದವನೀಗ ಮುಗಿಲ ತಟ್ಟಿ
ಕಪ್ಪುಚುಕ್ಕೆಯಾಗಿ
ಕಿವಿಕಿಪಿದು ಬೆಚ್ಚಿಸುತ್ತಾನೆ
ಅಮಾವಾಸ್ಯೆಯ ರಾತ್ರಿಗಳಲಿ ರಕ್ತಪಾತದ್ದೇ ಸುದ್ದಿ
ಚಂದ್ರನಿಗೇನು ಮುಟ್ಟೇ
ಯಾರೂ ಬೆಳಕು ಹೊಳೆಯದಲ್ಲ?

ಆ ಹುಡುಗ ಕುರುಡ
ಹೆಗಲ ಮೇಲೆ ಕಂಟಕ
ಹಸಿದ ಹೊಟ್ಟೆ
ಕಯ್ಯ ಹಿಡಿದು ದಡ ಸೇರಿಸಿದ್ದು
ನೇಣುಗಂಬ.


ಹುಡುಗಾ,
ಬಡವನ ಲೋಕಕೆ ಕಾವಲು
ಬೆಂಕಿಯ ಕೋಟೆ: ಅನ್ನ ದೇವರ ದಂಡೂ
ನುಗ್ಗಲಾರದು. ಅಭೇದ್ಯ
ಇನ್ನು ನಿನಗೆಲ್ಲಿ ಸ್ವರ್ಗದ ಬಾಗಿಲು?

ಕಸಬ್
ನೀನು ಹಸಿವಿನಿಂದಾದರೂ
ಸಾಯಬಾರದಿತ್ತೇ?
ಅಮ್ಮಿ ಜಾನಿಸುತ್ತಾಳೆ
ಬಡವಾ,
ಬಡತನ ಸಾಯುವುದಿಲ್ಲ;
[illegible]

■ ಸಂತೋಷ ಗುಡ್ಡಿಯಂಗಡಿ

ಕಿಟ್ಟಪ್ಪ ಮಾಸ್ಟರ್ ಎಂಬ ಜನನಾಯಕ

ನಾನು ತೀರ್ಥಹಳ್ಳಿಗೆ ಹೋದಾಗಲೆಲ್ಲಾ ಕಿಟ್ಟಪ್ಪ ಮಾಸ್ಟರನ್ನು ಮಾತಾಡಿಸಿಕೊಂಡು ಬರುವುದು ರೂಢಿ. ರೈತ ಹೋರಾಟದ ದಿನಗಳಲ್ಲಿ ಕಿಟ್ಟಪ್ಪ ಮಾಸ್ಟರ ಮನೆಯೇ ರೈತಸಂಘದ ಕಚೇರಿ ಆಗಿತ್ತು. ಅವರ ಪತ್ನಿ ರುಕ್ಮಣಿಯಮ್ಮ ನನಗೆ ಒಂದು ರೀತಿಯಲ್ಲಿ ತಾಯಿ ಇದ್ದಂತೆ. ಅವರ ಮನೆಗೆ ಅಪರಾತ್ರಿಯಲ್ಲಿ ಹೋದರೂ ರುಕ್ಮಣಿಯಮ್ಮ ಎದ್ದು ಊಟ ತಿಂಡಿ ನೀಡಿ ಉಪಚರಿಸುತ್ತಿದ್ದರು. ಈ ಎಲ್ಲ ಕಾರಣಕ್ಕೆ ಕಿಟ್ಟಪ್ಪ ಮಾಸ್ಟರ ಮನೆ ತೀರ್ಥಹಳ್ಳಿಯಲ್ಲಿ ನನಗೆ ಮನೆ ಇದ್ದಂತೆ.



1979-80 ರೈತ ಚಳವಳಿಯ ಆರಂಭದ ದಿನಗಳು. ನರಗುಂದ, ನವಲುಗುಂದ ಬಂಡಾಯದ ನಂತರ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್.ಎಸ್.ರುದ್ರಪ್ಪ ಮತ್ತು ಎನ್.ಡಿ.ಸುಂದರೇಶ್ ನೇತೃತ್ವದಲ್ಲಿ ಹೋರಾಟ ಆರಂಭವಾದಾಗ ತೀರ್ಥಹಳ್ಳಿಯಲ್ಲೂ ವೈ.ಎಸ್.ಪುಟ್ಟಣ್ಣನವರ ನೇತೃತ್ವದಲ್ಲಿ 'ರೈತ ಸಮನ್ವಯ ಸಮಿತಿ' ರೂಪಗೊಂಡಿತು. ಮಾತ್ರವಲ್ಲ ತೀರ್ಥಹಳ್ಳಿಯ ಇತಿಹಾಸದಲ್ಲಿ ಅತ್ಯಂತ ದೊಡ್ಡ ರೈತ ಹೋರಾಟ ಆರಂಭವಾಯಿತು. ತಾಲ್ಲೂಕು ಕಚೇರಿ ಎದುರು ದಿನವೂ ಸರದಿ ಪ್ರಕಾರ ಪ್ರತಿ ಹಳ್ಳಿಯಿಂದ ಸತ್ಯಾಗ್ರಹ, ಧರಣಿ ನಡೆಯುತ್ತಿದ್ದವು. ಧರಣಿ ನಿರತ ರೈತರ ಯೋಗಕ್ಷೇಮ, ದಿನಚರಿ, ಕಾರ್ಯಕ್ರಮಗಳ ಉಸ್ತುವಾರಿಯನ್ನೆಲ್ಲಾ ಕಿಟ್ಟಪ್ಪ ಮಾಸ್ಟರೇ ನೋಡಿಕೊಳ್ಳುತ್ತಿದ್ದರು. ಆಗಷ್ಟೇ ಅವರ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾಗಿದ್ದರು.

ನಂತರದ ದಿನಗಳಲ್ಲಿ ರೈತಹೋರಾಟ ರಾಜ್ಯಾದ್ಯಂತ ಪಸರಿಸಿ 'ರಾಜ್ಯ ರೈತ ಸಂಘ' ಹುಟ್ಟಿಕೊಂಡಿತು. ತೀರ್ಥಹಳ್ಳಿ ತಾಲ್ಲೂಕು ರೈತಸಂಘದ ಶಾಖೆಗೆ ಅಧ್ಯಕ್ಷರಾಗುವ ಕಡಿದಾಳು ಶಾಮಣ್ಣ ಉಪಾಧ್ಯಕ್ಷರಾಗಿ ಕಿಟ್ಟಪ್ಪ ಮಾಸ್ಟರು ಮತ್ತು ಕಾರ್ಯದರ್ಶಿಯಾಗಿ ನಾನು ಆಯ್ಕೆಯಾದೆವು. ಅಲ್ಲಿಂದ ಪ್ರತಿ ಗ್ರಾಮಗಳಲ್ಲಿ ರೈತ ಸಂಘ ರಚಿಸಿ ಹಳ್ಳಿಹಳ್ಳಿಗಳಲ್ಲಿ ಸಭೆಗಳನ್ನು ನಡೆಸಿ ತಾಲ್ಲೂಕಿನಾದ್ಯಂತ ಅನೇಕ ಹೋರಾಟಗಳನ್ನು ನಡೆಸಿಕೊಂಡು ಬಂದೆವು. **1983** ರಲ್ಲಿ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ರೈತರ ಆಕ್ರೋಶ ಭುಗಿಲೆದ್ದಿತು. ಆಗ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತಾದಳ, ಕ್ರಾಂತಿರಂಗ ಮುಂತಾದ ರಾಜಕೀಯ ಗುಂಪುಗಳು ಒಕ್ಕೂಟ ಮಾಡಿಕೊಂಡು ರೈತರನ್ನು ಓಲೈಸಿ, ರೈತರ ಮತಗಳನ್ನು ಪಡೆಯಲು ಪ್ರಯತ್ನಿಸಿದವು. ಆದರೆ ರೈತಸಂಘ ಮಾತ್ರ ಯಾವ ರಾಜಕೀಯ ಗುಂಪಿನೊಂದಿಗೂ ಗುರುತಿಸಿಕೊಳ್ಳದೆ ಕಾಂಗ್ರೆಸ್ ವಿರೋಧಿ ನಿಲುವನ್ನ ತಾಳಿ ಗುಂಡೂರಾವ್ ನೇತೃತ್ವದ ಸರ್ಕಾರವನ್ನು ಕಿತ್ತೊಗೆಯಲು ಪಣತೊಟ್ಟಿತು. ಆಗ ಕಾಂಗ್ರೆಸ್ ವಿರುದ್ಧ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಡಿ.ಬಿ.ಚಂದ್ರೇಗೌಡರು ಸ್ಪರ್ಧಿಸಿದ್ದರು.

ಆ ಸಂದರ್ಭದಲ್ಲಿ ಕಿಟ್ಟಪ್ಪ ಮಾಸ್ಟರು ಚಂದ್ರೇಗೌಡರ ಪರವಾಗಿ ಗುರುತಿಸಿಕೊಂಡು ಓಡಾಡತೊಡಗಿದರು. ಅಷ್ಟೇ ಅಲ್ಲದೆ ಚಂದ್ರೇಗೌಡರ ಪರ ರೈತಸಂಘದ ನಾವೆಲ್ಲ ಚುನಾವಣೆ ಪ್ರಚಾರ ಕಾರ್ಯಕ್ಕೆ ಧುಮುಕಬೇಕೆಂದು ಒತ್ತಾಯಿಸಿದರು. ಅದಕ್ಕೆ ನಾವು ಒಪ್ಪದಿದ್ದಾಗ ಹಟ ಮಾಡಿದ ಕಿಟ್ಟಪ್ಪ ಮಾಸ್ಟರ್ ರೈತಸಂಘದಿಂದ ಹೊರನಡೆದೇ ಬಿಟ್ಟರು.

ಮಾಸ್ಟರು ಸಂಘವನ್ನು ತೊರೆದಿದ್ದರೂ ರೈತಸಂಘದ ಕಚೇರಿ ಮತ್ತು ಚಟುವಟಿಕೆಗಳೆಲ್ಲಾ ಅವರ ಮನೆಯಲ್ಲಿಯೇ ನಡೆಯುತ್ತಿದ್ದವು. ಆಗಾಗ ಪ್ರೀತಿಯಿಂದ ನಮ್ಮೊಂದಿಗೆ ಜಗಳ ಮಾಡುತ್ತಲೇ ನಮ್ಮನ್ನೆಲ್ಲ ರೈತಸಂಘದ ಚಟುವಟಿಕೆಗಳಲ್ಲಿ ನಿರಂತರ ಸಾಗಲು ಪ್ರೇರೇಪಿಸುತ್ತಿದ್ದರು.

ಕಿಟ್ಟಪ್ಪ ಮಾಸ್ಟರು ತಮ್ಮ ವಿದ್ಯಾರ್ಥಿ ದಿನಗಳಿಂದಲೂ ವ್ಯವಸ್ಥೆ ವಿರೋಧಿಗಳಾಗಿ ಹೋರಾಡುತ್ತಲೇ ಬಂದವರು. ಅತ್ಯಂತ ಬಡ ಕುಟುಂಬದಿಂದ ಬಂದ ಅವರು ಓದಿನಲ್ಲಿ ತುಂಬಾ ಚುರುಕಾಗಿದ್ದರು. ಅವರ ಊರಾದ ಮೇಗರವಳ್ಳಿಯಲ್ಲಿ ಮಿಡ್ಲ್‌ಸ್ಕೂಲ್‌ವರೆಗೆ ಮಾತ್ರ ಶಾಲೆಯಿತ್ತು. ಮಿಡ್ಲ್‌ಸ್ಕೂಲ್ ಮುಗಿದನಂತರ ಮುಂದಿನ ಓದಿಗಾಗಿ ಅವರು ದೂರದ ತೀರ್ಥಹಳ್ಳಿಗೆ ಹೋಗಬೇಕಿತ್ತು. ಆ ಕಾಲದಲ್ಲಿ ಇಡೀ ತೀರ್ಥಹಳ್ಳಿ ತಾಲ್ಲೂಕಿಗೆ ತೀರ್ಥಹಳ್ಳಿ ಪಟ್ಟಣದಲ್ಲಿ ಮಾತ್ರ ಪ್ರೌಢಶಾಲೆಯಿದ್ದುದು. ಅವರ ಅಪ್ಪ ತೀರ್ಥಹಳ್ಳಿಯಲ್ಲಿ ಓದಲು ಕಿಟ್ಟಪ್ಪನನ್ನು ಕಳುಹಿಸಲು ಬಿಲ್‌ಕುಲ್ ಒಪ್ಪಲಿಲ್ಲ. ಆಗ ಅಪ್ಪನ ವಿರುದ್ಧವೇ ತಿರುಗಿ ಬಿದ್ದ ಕಿಟ್ಟಪ್ಪನವರು ಕ್ಷೌರಿಕನ ಬಳಿ ಹೋಗಿ ತಲೆ ಬೋಳಿಸಿಕೊಂಡು ಬಂದರಂತೆ. ತಲೆ ಯಾಕೆ ಬೋಳಿಸಿಕೊಂಡಿದ್ದೀಯ ಎಂದು ಕೇಳಿದವರಿಗೆಲ್ಲಾ "ನನ್ನ ಅಪ್ಪ ಸತ್ತು ಹೋದ ಅದಕ್ಕೆ ತಲೆ ಬೋಳಿಸಿಕೊಂಡಿದ್ದೇನೆ" ಎಂದು ಹೇಳುತ್ತಾ ಓಡಾಡತೊಡಗಿದರಂತೆ!

ಪಟ್ಟುಬಿಡದ ಕಿಟ್ಟಪ್ಪ ಒಕ್ಕಲಿಗರ ಸಂಸ್ಥೆಯಿಂದ ದೂರದ ಹಳ್ಳಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತೀರ್ಥಹಳ್ಳಿಯಲ್ಲಿ ಒಂದು ವಿದ್ಯಾರ್ಥಿನಿಲಯ ಇರುವುದನ್ನು ಪತ್ತೆ ಮಾಡಿ ಅವರಿವರನ್ನು ಕಾಡಿಬೇಡಿದರು. ಕೊನೆಗೆ ಒಕ್ಕಲಿಗರ ಸಂಸ್ಥೆಯಲ್ಲಿ ಲೆಕ್ಕಪತ್ರ ಬರೆಯುವ ಕೆಲಸವನ್ನು ಪಡೆಯುವ ಮೂಲಕ ತಮ್ಮ ಊಟವಸತಿಗೆ ವ್ಯವಸ್ಥೆ ಮಾಡಿಕೊಂಡು ಪ್ರೌಢಶಿಕ್ಷಣವನ್ನು ಮುಂದುವರಿಸಿದರು. ಓದಿನಲ್ಲಿ ತುಂಬಾ ಚೂಟಿಯಾಗಿದ್ದ ಅವರು ತಾಲ್ಲೂಕಿನ ಸ್ಥಿತಿವಂತ ಒಕ್ಕಲಿಗರ ಗಮನ ಸೆಳೆದರು.

ಭಾರತದ ಸ್ವಾತಂತ್ರಕ್ಕೆ ಹೋರಾಟ ನಡೆಯುತ್ತಿದ್ದ ದಿನಗಳವು. ಶಾಲೆಯಲ್ಲಿ ಶಾಂತವೇರಿ ಗೋಪಾಲಗೌಡ ಮುಂತಾದವರೆಲ್ಲಾ ಕಿಟ್ಟಪ್ಪನವರ ಸಹಪಾಠಿಗಳಾಗಿದ್ದರು. ಇವರೆಲ್ಲರಲ್ಲೂ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚತೊಡಗಿತು. **1942** ರ ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾಯಿತು. ಆಗ ಮಹಾತ್ಮ ಗಾಂಧೀಜಿಯವರ ಬಂಧನವಾಯಿತು. ಇದು ತಿಳಿಯುತ್ತಿದ್ದಂತೆ ಕಿಟ್ಟಪ್ಪನವರು ತಮ್ಮ ಸಹಪಾಠಿಗಳನ್ನು ಕಟ್ಟಿಕೊಂಡು ಘೋಷಣೆ ಕೂಗುತ್ತಾ ಶಾಲೆಯಿಂದ ಕಾಲುತೆಗೆದು ಬೀದಿಗಿಳಿದೇ ಬಿಟ್ಟರು. ಎಲ್ಲೆಡೆ ಚಳವಳಿ ನಿರತದ ಬಂಧನಗಳು ಶುರುವಾದವು. ಆಗ ಹಿರಿಯ ನಾಯಕರ ಆದೇಶದಂತೆ ಕಿಟ್ಟಪ್ಪನವರು ತಲೆತಪ್ಪಿಸಿಕೊಂಡು ಭೂಗತರಾದರು. ವೇಷ ಮರೆಸಿಕೊಂಡು ಹಳ್ಳಿಹಳ್ಳಿಗಳಲ್ಲಿ ಸ್ವಾತಂತ್ರ ಚಳವಳಿಯ ಕಿಚ್ಚು ಹಬ್ಬಿಸತೊಡಗಿದರು. ಹಗಲ ಹೊತ್ತು ಮಲೆನಾಡಿನ ಕಬ್ಬಿನಗದ್ದೆ ಮತ್ತು ಅಡಿಕೆ ತೋಟಗಳಲ್ಲಿ ಅಡಗಿ ಕುಳಿತು ರಾತ್ರಿ ಆಗುತ್ತಿದ್ದಂತೆ ಸುತ್ತಮುತ್ತಲ ಊರುಗಳಿಗೆ ಹೋಗಿ ಸ್ವಾತಂತ್ರ್ಯ ಹೋರಾಟವನ್ನು ಉಗ್ರಗೊಳಿಸತೊಡಗಿದರು.

ಕಿಟ್ಟಪ್ಪನವರನ್ನು ಬಂಧಿಸಲು ಬ್ರಿಟಿಷ್ ಪೊಲೀಸರು ಹರಸಾಹಸಪಟ್ಟರು. ಆದರೆ ಕಿಟ್ಟಪ್ಪನವರು ಪ್ರತಿಬಾರಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದರು. ಇದರಿಂದ ರೋಸಿಹೋದ ಬ್ರಿಟಿಷ್ ಸರ್ಕಾರ ಇವರ ತಲೆಗೆ ಬಹುಮಾನ ಘೋಷಿಸಿ ಗುಂಡಿಕ್ಕುವ ಆದೇಶವನ್ನೂ ಹೊರಡಿಸಿತು. ಕೊನೆಗೊಂದು ದಿನ ಮಾಹಿತಿದಾರರ ಸಹಾಯದಿಂದ ಇವರು ಎಲ್ಲಿದ್ದಾರೆಂದು ಸುಳಿವು ಸಿಕ್ಕಿ ಕಬ್ಬಿನಗದ್ದೆಯಲ್ಲಿ ಹರಕು ಕಚ್ಚೆ ಮತ್ತು ಜುಬ್ಬ ತೊಟ್ಟಿದ್ದ, ತಲೆ ಮೇಲೆ ಹಳೇ ಟೋಪಿ ಧರಿಸಿ ಅಡಗಿ ಕುಳಿತಿದ್ದ ಕಿಟ್ಟಪ್ಪನವರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು.


ತೀರ್ಥಹಳ್ಳಿಯಲ್ಲಿ ಪ್ರೌಢಶಿಕ್ಷಣ ಮುಗಿಸಿದನಂ... ಇಂಟರ್ ಓದಲು ಕಿಟ್ಟಪ್ಪ ಶಿವಮೊಗ್ಗಕ್ಕೆ ಹೋಗಬೇಕಿ... ಅಷ್ಟುಹೊತ್ತಿಗೆ ಒಕ್ಕಲಿಗ ಸಮುದಾಯದ ಹಿರಿಯರಾ... ಕೆಳನರಸೆ ದೇವಪ್ಪ ಗೌಡರ ಗಮನವನ್ನು ಕಿಟ್ಟಪ್ಪನ... ಸೆಳೆದಿದ್ದರು. ದೇವಪ್ಪ ಗೌಡರು ಮಂಡಗದ್ದೆ ಭಾ... ಶ್ರೀಮಂತ ಜಮೀನುದಾರರು ಮಾತ್ರವಲ್ಲ ಶಿವಮೊಗ್ಗದ... ಅಡಿಕೆಮಂಡಿ ಇಟ್ಟುಕೊಂಡಿದ್ದರು. ಕಿಟ್ಟಪ್ಪನವರ ಪ್ರತಿಭೆಯ... ಗುರುತಿಸಿದ್ದ ದೇವಪ್ಪಗೌಡರು ಇವರನ್ನು ಶಿವಮೊ... ಕರೆಸಿಕೊಂಡು ಅಲ್ಲಿದ್ದ ಒಕ್ಕಲಿಗ ವಿದ್ಯಾರ್ಥಿನಿಲಯ... ಮ್ಯಾನೇಜರ್ ಹುದ್ದೆಯನ್ನು ಕೊಡಿಸಿದರು. ಆ ಮೂ... ಕಿಟ್ಟಪ್ಪನವರ ಊಟ ವಸತಿಗೆ ಏರ್ಪಾಡು ಮಾಡಿದ್ದ... ಅವರ ಮುಂದಿನ ಓದಿನ ಎಲ್ಲಾ ಖರ್ಚುಗಳನ್ನೂ ತಾ... ವಹಿಸಿಕೊಂಡರು. ಇವತ್ತಿಗೂ ಕಿಟ್ಟಪ್ಪ ಮಾಸ್ಟರು ತ... ಮನೆಯಲ್ಲಿ ಕೆಳನರಸೆ ದೇವಪ್ಪಗೌಡರ ದೊಡ್ಡದೊಂ... ಫೋಟೋ ಹಾಕಿಕೊಂಡಿದ್ದು, ಹೋದವರಿಗೆಲ್ಲ "ಇವ... ನನ್ನ ಅನ್ನದಾತ" ಎಂದು ಹೆಮ್ಮೆಯಿಂದ ತ... ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ.

ಕಿಟ್ಟಪ್ಪನವರು ಶಿವಮೊಗ್ಗೆಯಲ್ಲಿದ್ದಾಗ ಅ... ಪ್ರೌಢಶಾಲೆಯ ಸಹಪಾಠಿ ಶಾಂತವೇರಿ ಗೋಪಾಲಗೌಡ... ಕೂಡ ಇಂಟರ್ ಓದಲು ಶಿವಮೊಗ್ಗಕ್ಕೆ ಬಂದರು. ಹ... ಬಂದವರೇ ವಿದ್ಯಾರ್ಥಿನಿಲಯದಲ್ಲಿದ್ದ ಕಿಟ್ಟಪ್ಪನ... ಕೊಠಡಿಯಲ್ಲೇ ಜಾಂಡ ಊರಿದರು. ಅಷ್ಟೇ ಅಲ್ಲ ನಿಧಾ... ವಿದ್ಯಾರ್ಥಿನಿಲಯದಲ್ಲೇ ಊಟ ವಹಾಡ... ಶುರುಹಚ್ಚಿಕೊಂಡರು. ಅದು ಸಾಲದೆಂಬಂತೆ ಸೇದ... ಸಿಗರೇಟ್ ಕೊಡಿಸು ಎಂದೋ, ಹೋಟೆಲಿನಲ್ಲಿ ದೋ... ತಿನ್ನಿಸು ಎಂದೋ ಪೀಡಿಸ ತೊಡಗಿದರಂತೆ. ಇದೆಲ್ಲ ಬ... ದಿನ ನಡೆಯುವಂತಿರಲಿಲ್ಲ. ಊಟದ ಬಗ್ಗೆ ಹಾಸ್ಟೆಲ್... ಮ್ಯಾನೇಜ್‌ಮೆಂಟ್‌ನವರಿಗೆ ಲೆಕ್ಕ ಕೊಡಬೇಕಾಗಿತ್ತು. ಅಕಸ್ಮಾ... ಈ ಕಳ್ಳಾಟದ ಬಗ್ಗೆ ಯಾರಿಗಾದರೂ ಗೊತ್ತಾಗಿ... ಇಬ್ಬರನ್ನೂ ಹಾಸ್ಟೆಲ್‌ನಿಂದ ಹೊರಹಾಕುತ್ತಿದ್ದರು. ಅ... ಹೊತ್ತಿಗೆ ಗೋಪಾಲ ಗೌಡರ ಅಣ್ಣ ಧರ್ಮಯ್ಯ ಗೌಡ... ತೀರ್ಥಹಳ್ಳಿಯಲ್ಲಿ ಶೇಖದಾರರಾಗಿ ಕೆಲಸ ಮಾಡುತ್ತಿದ್ದ... ಕಿಟ್ಟಪ್ಪನವರು ಅವರ ಬಳಿ ಹೋಗಿ "ಗೋಪಾಲ ಕಿ... ಬಂದು ಸೇರಿಕೊಂಡಿದ್ದಾನೆ. ಏನಾದರೂ ಮಾಡಿ" ಅಂದ... ಆಗ ಧರ್ಮಯ್ಯ ಗೌಡರು ಬಂದು ಗೋಪಾಲ ಗೌ... ಊಟ ವಸತಿಯ ವ್ಯವಸ್ಥೆ ಮಾಡಿಹೋದರಂತೆ. ಹೀಗೆ... ಗೌಡರ ಹಾಗೂ ಕಿಟ್ಟಪ್ಪನವರ ಸ್ನೇಹ.

ಗೋಪಾಲ ಗೌಡರ ರಾಜಕೀಯ ಜೀವನ ಶುರುವಾದ... ಕಿಟ್ಟಪ್ಪನವರು ಹೈಸ್ಕೂಲಿನಲ್ಲಿ ಉಪಾಧ್ಯಾಯ ವ...

ಫ್ಯಾಸಿಸ್ಟ್ ಸರ್ವಾಧಿಕಾರಿಯ ಸಾವು ಮತ್ತು ಆತ್ಮವಂಚಕ ಸಂತಾಪಗಳು

ಮೊನ್ನೆ 'ಶನಿವಾರ ಸತ್ತ ಮುಂಬೈ'ಯ ಶನಿ **1967**ರಲ್ಲಿ ತನ್ನ ಪತ್ರಿಕೆ 'ನವಕಾಲ್'ನಲ್ಲಿ "ಭಾರತಕ್ಕೆ ಇಂದು ಒಬ್ಬ ಹಿಟ್ಲರ್‌ನ ಅಗತ್ಯವಿದೆ" ಎಂದು ಬರೆದಿದ್ದ. ಈ ಮಾತಿನ ಒಳಾರ್ಥ ಸ್ಪಷ್ಟ "ನಾನು ಭಾರತದ ಹಿಟ್ಲರ್ ಆಗುವೆ" ಎಂದು ಆತ ಪರೋಕ್ಷವಾಗಿ ಘೋಷಿಸಿದ್ದ. ಬಾಳಾ ಠಾಕ್ರೆ ಭಾರತದ ರಾಜಕಾರಣಕ್ಕೆ ಫ್ಯಾಸಿಸಂನ ಆವೇಗ ನೀಡಿದ. ತನ್ಮೂಲಕ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಈ ಸರ್ವಾಧಿಕಾರಿ ಓರ್ವ ಶನಿಯಂತೆ ತೊಡರಿಕೊಂಡಿದ್ದ. ಒಟ್ಟಿನಲ್ಲಿ ಬಾಳಾ ಠಾಕ್ರೆ ಭಾರತದ ಫ್ಯಾಸಿಸಂನ ಅಧಿಕೃತ ಮುಖ. ಇಂತಹ ವಿಷಜಂತು ಸತ್ತಾಗ ಮುಂಬೈಗೆ ಮುಂಬೈ ಅಘೋಷಿತ ಬಂದ್ ಆಚರಿಸಿದಾಗ ಅಥವಾ ಆಚರಿಸಲ್ಪಡುವಂತೆ ಮರಿವಿಷಜಂತುಗಳ ಭಯ ನಿರ್ಬಂಧಿಸಿದ್ದನ್ನು ವಿರೋಧಿಸಿ ತಮ್ಮ ಫೇಸ್‌ಬುಕ್‌ನಲ್ಲಿ ವಿರೋಧಾಭಿಪ್ರಾಯ ವ್ಯಕ್ತಪಡಿಸಿದ ಇಬ್ಬರು ತರುಣಿಯರನ್ನು ಬಿ.ಜೆ.ಪಿ ಅಥವಾ ಶಿವಸೇನೆಯ ಬಿ-ಟೀಮ್‌ನಂತಿರುವ ಕಾಂಗ್ರೆಸ್ ಸರಕಾರ ತಡಮಾಡದೇ ಬಂಧಿಸಿತು. ತನ್ಮೂಲಕ ಠಾಕ್ರೆ ಹುಟ್ಟು ಹಾಕಿದ ಭಯದ, ವಿದ್ವೇಷದ ವಾತಾವರಣವನ್ನು ಮುಂದುವರಿಸಲು ಠಾಕ್ರೆಯ ಶನಿಸಂತಾನಕ್ಕೆ ಪರೋಕ್ಷ ಬೆಂಬಲ ನೀಡಿತು.



ಅಷ್ಟಕ್ಕೂ ಠಾಕ್ರೆ ಮಾಡಿದ ಘನಂದಾರಿ ಕೆಲಸಗಳೇನು? ಮುಸ್ಲಿಮರ ಮಾರಣಹೋಮ, ಮುಸ್ಲಿಮರ ಬದುಕನ್ನು ನರಕಸದೃಶ ರೂಪಕ್ಕೆ ತಳ್ಳಿದ್ದು, ಮಹಾರಾಷ್ಟ್ರೇತರ ಪ್ರದೇಶಗಳ ದುಡಿಯುವ ವರ್ಗದ ಕೊಲೆ, ಸುಲಿಗೆ, ನಿರಂತರ ಶೋಷಣೆ, ಹೊಟ್ಟೆಪಾಡಿಗಾಗಿ ಬೀದಿ ವ್ಯಾಪಾರ ಮಾಡಿಕೊಂಡಿದ್ದ, ಜೋಪಡಿ ಅಂಗಡಿಗಳನ್ನಿಟ್ಟುಕೊಂಡು ದಿನದ ಪಡಿ ದುಡಿಯುವ ಮಂದಿಗಳನ್ನೂ ಬಿಡದೇ ಹಫ್ತಾ ವಸೂಲಿ, ಶೋಷಣೆ, ಅವಮಾನ, ಅವರ ಅನ್ನದ ಪಾತ್ರೆಗೆ ಕಲ್ಲು ಹಾಕಿದ್ದು, ಉತ್ತರ ಭಾರತದ ಬಡ ಟ್ಯಾಕ್ಸಿ ಡ್ರೈವರ್‌ಗಳನ್ನು ಹೊಡೆದು ಬಡಿದು ಅವರ ಜೀವನಾಧಾರವನ್ನು ಕಸಿದುಕೊಂಡಿದ್ದು, ನಮ್ಮ ಮಂಗಳೂರು, ಉಡುಪಿಯ ಉದ್ಯಮಿಗಳಿಗೆ, ಕೂಲಿಗಳಿಗೆ ನಿರಂತರ ಕಿರುಕುಳ ಕೊಟ್ಟಿದ್ದು ಅವರ ಮೇಲೆ ಅಸೀಮ ದ್ವೇಷ ಸಾಧಿಸಿದ್ದು, ನಮ್ಮ ರಾಜ್ಯದ ಅವಿಭಾಜ್ಯ ಅಂಗವಾಗಿರುವ ಬೆಳಗಾವಿಯನ್ನು ನಿತ್ಯ ಬೇಯುವ ಕುಲುಮೆ ಮಾಡಿದ್ದು. . . ಹೀಗೆ ಪಟ್ಟಿ ಮಾಡುತ್ತಾ ಹೋದರೆ ಆತ ಮಾಡಿದ ಅನ್ಯಾಯ, ಅಕ್ರಮಗಳಿಗೆ ಕೊನೆಯಿಲ್ಲದಷ್ಟು ನಿದರ್ಶನಗಳು ಸಿಗುತ್ತವೆ.

ಇದೆಲ್ಲದಕ್ಕೂ ಆತ ಬಳಸಿದ್ದು ಮರಾಠಿ ಸಂಕುಚಿತ ಪ್ರಾದೇಶಿಕವಾದದ ಭಾವನಾತ್ಮಕ ಅಸ್ತ್ರ. ಅದೇ 'ಮರಾಠಿ ಮಣ್ಣಿನ ಮಕ್ಕಳಲ್ಲ'ದವರಿಗೆ ಅರ್ಥಾತ್ ಮಹಾರಾಷ್ಟ್ರೇತರ ಪ್ರದೇಶದ ಜನಗಳಿಗೆ ಮಹಾರಾಷ್ಟ್ರದಲ್ಲಿ ಜಾಗವಿಲ್ಲ. ಅಷ್ಟಕ್ಕೂ ಆತನೇನೂ ಮೂಲ ಮಹಾರಾಷ್ಟ್ರಿಗ ಸಮುದಾಯದವನಲ್ಲ. ಆತನ 'ಭೂಮಿ ಪುತ್ರ' ಎಂಬ ಫ್ಯಾಸಿಸಂನ ಸಿದ್ಧಾಂತದ ಆಧಾರದಲ್ಲಿಯೇ ಹೇಳುವುದಾದರೆ 92-93% ಮಹಾರಾಷ್ಟ್ರಿಯರಿಗೇ ಮಹಾರಾಷ್ಟ್ರದಲ್ಲಿ ಬದುಕುವ ಹಕ್ಕಿಲ್ಲ. ಸ್ವತಃ ಠಾಕ್ರೆ ಮತ್ತು ಆತನ ಕುಟುಂಬಸ್ಥರಿಗೂ... ಹಾಗೆ ನೋಡಹೋದರೆ ಮಹಾರಾಷ್ಟ್ರದ ನೈಜ ಭೂಮಿಪುತ್ರರ ಪ್ರಮಾಣ 7-8% ಮೀರುವುದಿಲ್ಲ. ಮಹಾರಾಷ್ಟ್ರದ ಭಿಲ್ ಮತ್ತು ಕೆಲವು ಇತರ ಆದಿವಾಸಿ ಪಂಗಡದವರು ಮಾತ್ರ ಮಹಾರಾಷ್ಟ್ರದ ನೈಜ ಭೂಮಿಪುತ್ರರು. ಈ ಭೂಮಿ ಪುತ್ರ ಸಿದ್ಧಾಂತ ಠಾಕ್ರೆಯ ಮಾನಸಗುರು ಹಿಟ್ಲರ್‌ನ ನಾಝಿ ಸಿದ್ಧಾಂತಕ್ಕಿಂತ ವ್ಯತಸ್ಥವಾದುದೇನಲ್ಲ.

ನೂರಾರು ಭಾಷೆ, ಉಪಭಾಷೆಗಳ ನೆಲೆವೀಡಾಗಿರುವ ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಿದ ಮಾತ್ರಕ್ಕೆ ಒಂದು ಭಾಷಿಕರ ಬಾಹುಳ್ಯ ಇರುವೆಡೆ ಇತರ ಭಾಷಿಕರಿಗೆ ಬದುಕಲು ಹಕ್ಕಿಲ್ಲವೆಂದಲ್ಲ. ಒಂದು ವೇಳೆ ಠಾಕ್ರೆಯ ಫ್ಯಾಸಿಸ್ಟ್ ಸಿದ್ಧಾಂತದಂತೆ ಮರಾಠಿಯೇತರರಿಗೆ ಮಹಾರಾಷ್ಟ್ರದಲ್ಲಿ ಬದುಕುವ ಹಕ್ಕಿಲ್ಲದಾಗಿದಿದ್ದರೆ ಇಂದು ಭಾರತದ ಭೂಪಟದಲ್ಲಿ ಮುಂಬೈಗೆ ವಿಶೇಷ ಸ್ಥಾನವೇನೂ ಇರುತ್ತಿರಲಿಲ್ಲ. ಆಧುನಿಕ ಮುಂಬೈಯನ್ನು ಕಟ್ಟಿ ಬೆಳೆಸುವಲ್ಲಿ 'ಭೂಮಿಪುತ್ರ'ರ ಪಾತ್ರ ನಗಣ್ಯ. ಇಂದು ಮುಂಬೈ ಭಾರತದ ಆರ್ಥಿಕ ರಾಜಧಾನಿಯಾಗಿದ್ದರೆ ಅದರ ಹಿಂದೆ ಭಾರತದಾದ್ಯಂತದ ಎಲ್ಲಾ ಸಮುದಾಯದ ಜನರ ಕೊಡುಗೆ ಇದೆ. ಇದೇ ಕಾರಣಕ್ಕೆ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ "ಮುಂಬೈ ಎಲ್ಲರಿಗೂ ಸೇರಿದ್ದು" ಎಂದು ಭೂಮಿಪುತ್ರರಿಗೆ ಎದುರೇಟು ನೀಡಿದ್ದು.

ಭಾರತದ ಯಾವುದೇ ಭಾಗದಲ್ಲಿ ಬೇಕಾದರೂ ವಾಸಿಸುವುದು ಭಾರತೀಯರ ಮೂಲಭೂತ ಹಕ್ಕು ಎಂ... ನಮ್ಮ ಸಂವಿಧಾನ ಘೋಷಿಸಿದೆ. (ಕೆಲವು ಚಾರಿ... ಕಾರಣಗಳಿಗಾಗಿ ಜಮ್ಮು ಕಾಶ್ಮೀರ ಮತ್ತು ಈಶ... ರಾಜ್ಯಗಳಲ್ಲಿ ನಿರ್ಬಂಧವಿದೆ). ಮುಂಬ... ಮಹಾರಾಷ್ಟ್ರದಲ್ಲಿದೆಯೆಂದಮಾತ್ರಕ್ಕೆ ಅದು ಕೇವ... ಮರಾಠಿಗರ ಸ್ವತ್ತಾಗುವುದಾದರೆ ಉದ್ಯಾನನಗರಿ ಬೆಂಗಳೂ... ಕೇವಲ ಕನ್ನಡಿಗರದ್ದು, ದೇವಾಲಯಗಳ ನಗರ ಮಧು... ತಮಿಳರದ್ದು ತಿರುವನಂತಪುರಂ ಮಲಯಾಳಿಗಳದ್ದು ಎಂ... ವಾದಿಸುತ್ತಾ ಹೋಗಬೇಕಾದೀತು. ಈ ಪರಿಕಲ್ಪನೆ ಭಾರ... ರಾಷ್ಟ್ರೀಯ ಪರಿಕಲ್ಪನೆಗೆ ವಿರುದ್ಧವಾದುದು. ಭಾರತ... ವಿವಿಧ ಭಾಷೆಗಳನ್ನಾಡುವ ಜನರು ವಿವಿಧ ಪ್ರದೇಶಗಳ... ಮಾತ್ರಕ್ಕೆ ಭಾರತ ಎಂಬುದು ಹಲವು ರಾಷ್ಟ್ರಗಳ ಒಕ್ಕೂಟವ... ಬದಲಾಗಿ ಭಾರತ ಹಲವು ರಾಜ್ಯಗಳ ಒಕ್ಕೂಟ. ಠಾಕ್ರೆ... ವಾದ ದೇಶದ ಐಕ್ಯತೆಗೆ ಮತ್ತು ಸಾರ್ವಭೌಮ... ಮಾರಕವಾದುದು. ಆತ ತನ್ನ ವಾದವನ್ನು ಹೇರುವ ನಿಟ್ಟ... ಮಾಡಿಸಿದ ಕೊಲೆ, ಸುಲಿಗೆ, ದೊಂಬಿಗಳಿಗೆ ಲೆಕ್ಕವೇ ... ಈ ನಿಟ್ಟಿನಲ್ಲಿ ಆತ ಭಾರತ ಕಂಡ ನಂಬರ್ ... ದೇಶದ್ರೋಹಿ.

ಇಂತಹ ಸಂಕುಚಿತ ಪ್ರಾದೇಶಿಕವಾದದ ದುರಾ... ದೇಶದ್ರೋಹಿಯ ಸಾವಿಗೆ ನಮ್ಮ ರಾಷ್ಟ್ರಪತಿ ಪ್ರಣ... ಮುಖರ್ಜಿ ನೀಡಿದ ಸಂತಾಪಸೂಚಕ ... **'IRREPAIRABLE LOSS'** ಸರಿಪಡಿಸಲಾ... ಅಥವಾ ದುರಸ್ತಿಗೊಳಿಸಲಾಗದ ನಷ್ಟ. ನಮ್ಮ ಇ... ಪಾಕಿಸ್ತಾನಿ ಕ್ರಿಕೆಟಿಗ ಒಳ್ಳೆಯ ಪರ್ಫಾಮೆನ್ಸ್ ತೋರಿಸಿದ... ಚಪ್ಪಾಳೆ ಹೊಡೆಯುವುದೇ ದೇಶದ್ರೋಹವೆನ್ನುವ ... ದೇಶದಲ್ಲಿ, ಆಳುವ ವರ್ಗದ ಜನವಿರೋಧೀ ನೀತಿ... ವಿರುದ್ಧ ಬಂಡಾಯವೇಳುವುದನ್ನೇ ದೇಶದ್ರೋಹ ಎಂ... ಪರಿಗಣಿಸಲಾಗುವ ಈ ರಾಷ್ಟ್ರದಲ್ಲಿ ನಮ್ಮ ರಾಷ್ಟ್ರಪತಿ ಠಾಕ್ರೆ... ಸಾವಿಗೆ ಸೂಚಿಸಿದ ಸಂತಾಪಸೂಚಕ ಪದಗಳ ಆಧಾರ...

ಿದ್ದರು. ಹಾಗಾಗಿ ಗೋಪಾಲ ಗೌಡರ ಸಮಾಜವಾದಿ ಚಳವಳಿಗಳಿಗೆ ಮಾಸ್ತರು ಅಷ್ಟೋ ಇಷ್ಟೋ ತಾಂಕಾಸಿನ ನೆರವನ್ನು ಆಗಾಗ ನೀಡುತ್ತಿದ್ದರೇ ು ಅವುಗಳಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳಲಾಗಲಿಲ್ಲ, ನಿವೃತ್ತಿಯ ದ ದಿನಗಳಲ್ಲೇ ಅವರು ನೇರವಾಗಿ ರೈತ ಚಳವಳಿಯೊಂದಿಗೆ ಸಿಕೊಂಡಿದ್ದು.

ನಡುವೆ ತೀರ್ಥಹಳ್ಳಿ ಒಕ್ಕಲಿಗರ ಸಂಘದಲ್ಲಿ ಸಾಕಷ್ಟು ಅಭಿವೃದ್ಧಿ ನ್ನು ಕೈಗೆತ್ತಿಕೊಂಡರು. ಕಿಟ್ಟಪ್ಪ ಮಾಸ್ತರ್ ಸಂಘದ ಕಾರ್ಯದರ್ಶಿ ವರೆಗೆ ತೀರ್ಥಹಳ್ಳಿಯಲ್ಲಿ ಒಕ್ಕಲಿಗರ ಸಂಘದ ಆಸ್ತಿ ಎಂದರೆ ಪಟ್ಟಣದಲ್ಲಿದ್ದ ಗಳ ವಿದ್ಯಾರ್ಥಿನಿಲಯ ಮಾತ್ರ. ಆದರೆ ಮಾಸ್ತರು ಸಂಘದ ದರ್ಶಿಯಾದ ನಂತರ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ನಿಲಯವನ್ನು ಬಹಳ ಅಚ್ಚುಕಟ್ಟಾಗಿ ನಿಭಾಯಿಸಿದರಲ್ಲದೆ ಹಾಸ್ಟಲ್‌ಗೆ ರಲ್ಲದ ಇತರೆ ಜಾತಿಯ ವಿದ್ಯಾರ್ಥಿಗಳಿಗೆ ಮತ್ತು ತೀರ್ಥಹಳ್ಳಿ ನೌಕರರಾಗಿ ಬಂದ ಇತರೆ ಜಾತಿಯವರಿಗೂ ಊಟ ವಸತಿ ಲ್ಪಿಸಿದರು. ಕಿಟ್ಟಪ್ಪನವರ ದೂರದೃಷ್ಟಿಯ ಫಲವಾಗಿ ಅವರ ಅವಧಿಯಲ್ಲಿ ನಿಲಯದ ಸುತ್ತಮುತ್ತ ಖಾಲಿಯಿದ್ದ ಜಾಗವನ್ನು ಬಳಸಿಕೊಂಡು ದ್ಧಿಪಡಿಸಿದರು.

ಕಾಲದಲ್ಲಿ ತೀರ್ಥಹಳ್ಳಿ ಹಾಗೂ ಸುತ್ತಮುತ್ತಲಿನವರಿಗೆ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಗತ್ಯವಾದ ಸವಲತ್ತುಗಳು ಇರಲಿಲ್ಲ. ಮನಗಂಡು ಒಂದು ಸಮುದಾಯ ಮಂದಿರವನ್ನು ಕಟ್ಟಲು ಕಿಟ್ಟಪ್ಪ ು ಯೋಚಿಸಿದರಲ್ಲದೆ ಅದಕ್ಕೆ ಬೇಕಾದ ಬಂಡವಾಳವನ್ನೂ ಹರಿಸಲು ಮುಂದಾದರು. ಒಕ್ಕಲಿಗ ಸಮುದಾಯದ ಸ್ಥಿತಿವಂತರ ನ್ನು ಗಳಿಸಿದ್ದ ಮಾಸ್ತರು ದೊಡ್ಡ ಇಡಿಗಂಟನ್ನೇ ಸಂಸ್ಥೆಗೆ ಸಂಗ್ರಹಿಸಿದರು. ದರ ಪರಿಣಾಮವಾಗಿ ತೀರ್ಥಹಳ್ಳಿ ಪಟ್ಟಣದಲ್ಲಿ ಹೆಸರುವಾಸಿಯಾದ ನಿಕ ಸೌಲಭ್ಯದ ಕಲ್ಯಾಣಮಂದಿರ ಹಾಗು ಸಮುದಾಯ ಭವನಗಳು ನಿಂತಿವೆ. ಜೊತೆಗೆ ಒಕ್ಕಲಿಗರ ಸಂಸ್ಥೆ ಆರ್ಥಿಕವಾಗಿ ಚೇತರಿಸಿಕೊಂಡು ರ್ಸರಿ, ಶಿಕ್ಷಕ ತರಬೇತಿ ಕೇಂದ್ರಗಳೂ ನಿರ್ಮಾಣವಾಗಿ ಇಡೀ ಲ್ಲಿಯೇ ಹೆಮ್ಮೆಯ ಸಂಸ್ಥೆಯಾಗಿ ಬೆಳೆದುನಿಂತಿದೆ.

ಪರ್ಯಾಸವೆಂದರೆ, ಈಗ ಸಶಕ್ತವಾಗಿರುವ ಸಂಸ್ಥೆಯಲ್ಲಿ ಪಟ್ಟಭದ್ರರು ಕೊಂಡು ಈ ಸಂಸ್ಥೆಯಿಂದಲೇ ಕಿಟ್ಟಪ್ಪ ಮಾಸ್ತರ್ ಅವರನ್ನು ಬಿಡಲಾಗಿದೆ. ಕಾಸುಕಾಸಿಗೂ ಲೆಕ್ಕವಿಡುವ ಹದ್ದಿನ ಕಣ್ಣಿನ ಕಿಟ್ಟಪ್ಪ ್ ಇದ್ದರೆ ಅವ್ಯವಹಾರಗಳಿಗೆ ಆಪತ್ತಾದಿತು ಎಂಬ ಉದ್ದೇಶವೇ ಕಾರಣವಾಗಿದೆ.

ಗ ಇಳಿವಯಸ್ಸಿನಲ್ಲಿರುವ ಕಿಟ್ಟಪ್ಪ ಮಾಸ್ತರು ತಾವು ತುಂಬಾ ಪ್ರೀತಿಸುತ್ತಿದ್ದ ರುಕ್ಮಣಿಯಮ್ಮನವರನ್ನು ಎರಡು ವರ್ಷಗಳ ಹಿಂದೆ ಕಳೆದುಕೊಂಡರು. ಬ್ಬರು ಮಕ್ಕಳಲ್ಲಿ ಒಬ್ಬರಾದ ರಮೇಶ್ ಅವರು ಹೈಕೋರ್ಟಿನಲ್ಲಿ ವಕೀಲರಾಗಿದ್ದಾರೆ; ಇಂಜಿನಿಯರ್ ಆಗಿರುವ ಮತ್ತೊಬ್ಬ ಮಗ ಹರೀಶ್ ಚೆನ್ನೈನಲ್ಲಿ ವಾಸಿಸುತ್ತಿದ್ದಾರೆ.

ಮ್ಮ ಮಕ್ಕಳು ಅದೆಷ್ಟೇ ಪ್ರೀತಿಯಿಂದ ಕರೆದರೂ ಅವರಿರುವಲ್ಲಿಗೆ ಲು ನಿರಾಕರಿಸಿರುವ ಕಿಟ್ಟಪ್ಪ ಮಾಸ್ತರ್ ತೀರ್ಥಹಳ್ಳಿಯ ತಮ್ಮ ುಲ್ಲಿಯೇ ಇರುವುದಾಗಿ ಹಠ ಹಿಡಿದು ಕುಳಿತಿದ್ದಾರೆ. "ಈ ಊರು, ನಶನ್ನ ಬಿಟ್ಟು ಪರಸ್ಥಳದಲ್ಲಿ ಅಪರಿಚಿತನಂತೆ ಬದುಕುವುದು ನನ್ನಿಂದ ಲ್ಲ ಮಾರಾಯ" ಎಂದು ಹೇಳುತ್ತಲೇ ತಮ್ಮ ದಿನನಿತ್ಯದ ಕೆಲಸಗಳನ್ನು ಕೊಳ್ಳಲಾಗದಿದ್ದರೂ ಹಠವಾದಿಯಂತೆ ಊರಲ್ಲೇ ಉಳಿದಿದ್ದಾರೆ.

■ ಕೋಡ್ಲು ವೆಂಕಟೇಶ್

ದ್ರೋಹ ಮತ್ತು ದೇಶಪ್ರೇಮದ ವ್ಯಾಖ್ಯೆಯನ್ನೇ ಅದಲುಬದಲು ಬೇಕಾಗುತ್ತದೆ. ನನಗನ್ನಿಸುತ್ತದೆ ಬಹುಶಃ ರಾಷ್ಟ್ರಪತಿಗೆ ಸ್ವಲ್ಪ ಕನ್‌ಫ್ಯೂಶನ್ ಬೇಕು. ವಾಸ್ತವದಲ್ಲಿ ಆತ ಮುಂಬೈಗೆ, ಮಹಾರಾಷ್ಟ್ರಕ್ಕೆ ಮಾಡಿದ್ದು REPAIRABLE LOSS".

ಹಿಂದೀ ಸಂಗೀತ ಜಗತ್ತಿನ ಅನಭಿಷಿಕ್ತ ಸಾಮ್ರಾಜ್ಞಿ ಎಂದು ದೇಶಕ್ಕೆದೇಶವೇ ಮಾನಪಡುವ ಲತಾ ಮಂಗೇಶ್ಕರ್‌ಗೆ "ಠಾಕ್ರೆಯ ಸಾವಿನಿಂದ ಅನಾಥಭಾವ ಡುತ್ತಿದೆ"ಯಂತೆ. 93ರ ಮುಂಬೈ ಗಲಭೆಯಲ್ಲಿ ಸಾವಿರಾರು ಮುಸ್ಲಿಂ ಮಕ್ಕಳನ್ನು ಅನಾಥರನ್ನಾಗಿ ಮಾಡಿದ, ಸಾವಿರಾರು ಮಹಿಳೆಯರನ್ನು ವಿಧವೆಯರನ್ನಾಗಿ ದ ಠಾಕ್ರೆಯ ಸಾವು "ಲತಾ"ಗೆ ಅನಾಥ ಭಾವ ಕಾಡಿಸುತ್ತದೆಯೆಂದಾದರೆ ಮಧುರ ಕಂಠದೊಳಗೆ ಎಂತಹ ವಿಕಟತೆ ಅಡಗಿರಬಹುದು....?

ಖ್ಯಾತ ಚಿತ್ರ ನಿರ್ದೇಶಕ ರಾಂಗೋಪಾಲ್ ವರ್ಮಾನ ಪಾಲಿಗೆ ಠಾಕ್ರೆ ಭಾರದ ನಿಜವಾದ ಸಾರರೂಪವಂತೆ" ಹೌದು, ಮರಾಠಿ ಸಂಕುಚಿತ ಶಿಕವಾದದ ಹೆಸರಲ್ಲಿ ಬಡ ಯುವಕರನ್ನು ಭಾವನಾತ್ಮಕವಾಗಿ ಬಳಸಿ, ನ್ನು ಗೂಂಡಾಗಳನ್ನಾಗಿ ಮಾಡಿ, ಅಧಿಕಾರವನ್ನು ತನ್ನ ಕುಟುಂಬಸ್ಥರ ಆಜ್ಞಾಪಾಲಕರ ಕಪಿಮುಷ್ಠಿಯಲ್ಲಿಟ್ಟು ಮರಾಠಿಗರಲ್ಲದವರ ಮೇಲೆ ದರ್ಪ ಳ ನಡೆಸಿದ ಠಾಕ್ರೆ "ಫ್ಯಾಸಿಸ್ಟ್ ಸರ್ವಾಧಿಕಾರದ ಸಾರರೂಪ ಮತ್ತು ೋಗಿಕ ರೂಪ."

ನ್ನು ಭಾರತೀಯ ಚಿತ್ರರಂಗದ ದಂತಕತೆಯೆಂದೇ ದೇಶ ಗೌರವಿಸುವ, ಮಾನಪಡುವ ಅಮಿತಾಬ್ ಬಚ್ಚನ್ ಪ್ರಕಾರ ಠಾಕ್ರೆ "ಪ್ರಶಂಸಾರ್ಹ ೀರ"ನಂತೆ. ಯಾವ ಸಂಶಯವೂ ಬೇಡ. ಮುದುಕ ಅಮಿತಾಬ್ ಗೆ ಅರುಳುಮರುಳಾಗಿದೆಯಷ್ಟೆ ಅಥವಾ ಉತ್ತರ ಭಾರತ ಮೂಲದ ಾಬ್ ಬಚ್ಚನ್‌ನನ್ನು ಮುಂಬೈಯಲ್ಲಿ ಮಿಂಚಲು ಬಿಟ್ಟದ್ದಕ್ಕೆ ಸೂಚಿಸಿದ ಇದಾಗಿರಬಹುದು. ಅಮಿತಾಬ್ ಬಚ್ಚನ್‌ನಂತಹ ಸಹಸ್ರಕೋಟಿಯ ಗೆ ಉತ್ತರ ಪ್ರದೇಶದ ದುಡಿವವರ್ಗದ ಬೆವರಿನ ಸಂಪಾದನೆಯ ದ ಬೆಲೆಯೇನು ಗೊತ್ತು?

ಸತ್ತವರ ಬಗ್ಗೆ ಕೆಟ್ಟ ಮಾತು ಆಡಬಾರದಂತೆ.... ಆದರೆ ಠಾಕ್ರೆಯ ಬಗ್ಗೆ ಒಳ್ಳೆಯ ಮಾತುಗಳನ್ನು ಎಲ್ಲಿಂದ ಹುಡುಕಲಿ? ಅಷ್ಟಕ್ಕೂ ನಾನು ಸಹದ ಆತ್ಮವಂಚಕ ಗಣ್ಯ ವ್ಯಕ್ತಿಯೇನಲ್ಲವಲ್ಲ, ಆದುದರಿಂದ ಠಾಕ್ರೆ ದ್ದ ಗೆಳೆಯರಿಗೆ ನಾನು ನಿರ್ಭಯವಾಗಿ "ಶನಿವಾರ ಶನಿ ಸತ್ತ" ಎಂಬ [illegible].

■ ಇಸ್ಮತ್ ಫಜೀರ್

ಮುಸ್ಲಿಂ ಮಹಿಳಾ ಲೋಕದ ಒಳಬಂಡಾಯದ ಶೋಧ

ಪುಸ್ತಕ ವಿಮರ್ಶೆ

■ ಡಾ. ಅರುಣ್ ಜೋಳದಕೂಡ್ಲಿಗಿ

ಆಧುನಿಕ ಆಲೋಚನಾ ಕ್ರಮಗಳು ಕನ್ನಡ ಸಾಹಿತ್ಯವನ್ನು ಹಲವು ಮಗ್ಗಲುಗಳಿಂದ ಪ್ರವೇಶಿಸುತ್ತಿವೆ. ಪ್ರತಿ ಮಗ್ಗಲೂ ಒಂದೊಂದು ತರಹದ ನೋಟವನ್ನು ಒದಗಿಸುತ್ತದೆ. ಇದು ಸಾಹಿತ್ಯದ ಬಗೆಗಿನ ಈತನಕದ ತಿಳಿವಳಿಕೆಯನ್ನು ಮತ್ತಷ್ಟು ಮುಂದೆ ಒಯ್ಯಲು ಮತ್ತು ಹಿಗ್ಗಿಸಲು ಸಹಕಾರಿಯಾಗಿದೆ. ಕನ್ನಡ ಸಾಹಿತ್ಯದ ಮೂಲಕ ಸಮಾಜವನ್ನೂ, ಜನಬದುಕಿನ ತಳಮಳಗಳ ಮೂಲಕ ಸಾಹಿತ್ಯವನ್ನೂ ಎದುರುಬದುರಾಗಿ ನೋಡಲಾಗುತ್ತಿದೆ. ಹಾಗಾಗಿ ಇಂದು ಸಾಂಸ್ಕೃತಿಕ ಅಧ್ಯಯನದ ಮಾದರಿ ಹೊಸ ತಿಳಿವಿನಿಂದ ಗರಿಗಟ್ಟುತ್ತಿದೆ. ಇಂತಹ ಬಹುಮುಖಿ ಅಧ್ಯಯನಗಳು ಕನ್ನಡ ಸಾಹಿತ್ಯದ ಕಣ್ಣಿಂದ ತಳಸಮುದಾಯಗಳನ್ನೂ, ದಲಿತ ವರ್ಗಗಳನ್ನೂ, ಅಲ್ಪಸಂಖ್ಯಾತರನ್ನೂ, ಮಹಿಳೆಯರನ್ನೂ ಬೇರೆಯದೇ ಆದ ದಿಕ್ಕಿನಿಂದ ಪರಿಶೀಲಿಸುವ ಒತ್ತಡವನ್ನು ಉಂಟು ಮಾಡಿವೆ. ಕೆ.ಶರೀಫಾ ಅವರ 'ಮುಸ್ಲಿಂ ಮಹಿಳಾ ಸಂವೇದನೆ' ಕೃತಿ ಇಂತಹ ಒತ್ತಡದ ಹುಡುಕಾಟ.

ಇದು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಡಿಲಿಟ್ ಮಹಾಪ್ರಬಂಧ. ಎರಡುನೂರು ಪುಟಗಳಿರುವ ಈ ಕೃತಿ, ಆರು ಅಧ್ಯಾಯಗಳನ್ನು ಹೊಂದಿದೆ. ಎಂಬತ್ತು ಪುಟಗಳಷ್ಟಿರುವ ಮೂರನೆ ಅಧ್ಯಾಯ 'ಮುಸ್ಲಿಂ ಮಹಿಳಾ ಸಂವೇದನೆ ದಮನಕಾರಿ ನೆಲೆಗಳು' ಒಟ್ಟು ಸಂಶೋಧನೆಯ ಹುಡುಕಾಟದ ನೆಲೆಗಳನ್ನು ಗಟ್ಟಿಯಾಗಿ ಕಟ್ಟಿಕೊಟ್ಟಿದೆ. ಉಳಿದ ಅಧ್ಯಾಯಗಳು ಬೇರೆ ಬೇರೆ ನೆಲೆಗಳಿಂದ ಹುಡುಕಾಟದ ಆಶಯವನ್ನು ವಿಸ್ತರಿಸಿದಂತಿದೆ. ಮುಸ್ಲಿಂ ಮಹಿಳೆಯ ದಮನಕಾರಿ ನೆಲೆ, ನಿಯಂತ್ರಕ ನೆಲೆ, ಪ್ರತಿಭಟನಾ ನೆಲೆ ಎಂಬ ಮೂರು ಮುಖ್ಯ ಆಯಾಮಗಳಲ್ಲಿ ಒಟ್ಟಂದದ ಆಲೋಚನಾ ಕ್ರಮ ನಿರೂಪಿತವಾಗಿದೆ.



ಮುಸ್ಲಿಂ ಮಹಿಳಾ ಸಂವೇದನೆ
ಡಾ.ಕೆ.ಶರೀಫಾ
2011, ಬೆಲೆ: 150.00, ಪು: 200
ಅಂಕಿತ ಪುಸ್ತಕ, ಬೆಂಗಳೂರು

ಇಲ್ಲಿ ಮುಸ್ಲಿಂ ಮಹಿಳಾ ಸಂವೇದನೆಯನ್ನು ಗುರುತಿಸಲು ಬೊಳುವಾರು ಮಹಮದ್ ಕುಂಞ, ಫಕೀರ್ ಮಹಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಅಬ್ಬಾಸ್ ಮೇಲಿನಮನಿ ಅವರ 1970 ರಿಂದ 2008 ರ ವರೆಗೆ ಬಂದಿರುವ ಕಥನ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ಸಂಶೋಧಕರು ಈ ಅಧ್ಯಯನದ ಚೌಕಟ್ಟನ್ನು ವಿವರಿಸುತ್ತಾ 'ಶಬಾನುವಿನಿಂದ ತಸ್ಲೀಮಾ ನಸ್ರಿನ್'ವರೆಗೆ ಎಂದಿದ್ದಾರೆ. ಇದು ರೂಪಕವಾಗಿಯೂ ಇದೆ. ಶಬಾನು ಪ್ರಕರಣವು ಭಾರತೀಯ ಮುಸ್ಲಿಂ ಮಹಿಳೆಯರ ನೋವುಗಳನ್ನು ಸಾರ್ವತ್ರಿಕ ಚರ್ಚೆಗೆ ಒಳಪಡಿಸಿದರೆ, ತಸ್ಲೀಮಾ ಪ್ರಕರಣವು ಈ ಚರ್ಚೆಯನ್ನು ಈಗಲೂ ಜೀವಂತವಾಗಿಟ್ಟಿದೆ.

ಶರೀಫಾ ಅವರು ಸ್ವತಃ ಮುಸ್ಲಿಂ ಸಮುದಾಯದೊಳಗಿಂದ ಬಂದವರು. ಒಬ್ಬ ಸಾಮಾನ್ಯವರ್ಗದ ಮುಸ್ಲಿಂ ಮಹಿಳೆಯ ಕಷ್ಟಗಳಿಗೆ ಎದುರಾದವರು. ಬಂಡಾಯದ ನಡೆಯಿಂದ ಸನಾತನವಾದಿ ಕಟ್ಟುಗಳ ವಿರುದ್ಧ ಜಗಳ ಕಾಯ್ದವರು. ಈ ಕಾರಣದಿಂದಾಗಿ ಮುಸ್ಲಿಂ ಮಹಿಳಾ ಸಂವೇದನೆಯನ್ನು ರೂಪಿಸುವಾಗ, ತನಗರಿವಿಲ್ಲದೆ ತನ್ನ ಬದುಕಿನ ಗಾಯದ ನೆನಪುಗಳಿಗೂ ಇಲ್ಲಿ ಬಾಯಿ ಬಂದುಬಿಟ್ಟಿದೆ. ನಿರೂಪಣೆಯಲ್ಲಿ ಮುಸ್ಲಿಂ ಮಹಿಳೆಯ ಸಂಕಷ್ಟಗಳ ಬಗ್ಗೆ ಮಾತನಾಡುತ್ತಾ ಇದು ತನ್ನದೆನ್ನುವ ಧ್ವನಿಯೂ ಸೇರಿದೆ. ಅದು ವೈಯಕ್ತಿಕ ನೆಲೆಯ ಕೂಗಾಗದಂತೆ ಸಾಮೂಹಿಕ ಧ್ವನಿಯಾಗಿ ಹೊಮ್ಮಿರುವುದು ಹೆಚ್ಚುಗಾರಿಕೆ. ಹಾಗಾಗಿ ಮುಸ್ಲಿಂ ಮಹಿಳಾ ಸಂವೇದನೆ ಕೃತಿ, ಕನ್ನಡದ ಆಲೋಚನಾ ವಿನ್ಯಾಸಕ್ಕೆ ಭಿನ್ನವಾದ ಎಳೆಯನ್ನು ಸೇರಿಸುವ ಕಾರಣಕ್ಕೆ ಮುಖ್ಯವಾಗಿದೆ.

ಇಡೀ ಸಂಶೋಧನೆಯಲ್ಲಿ ಮೂರು ಮಾದರಿಯನ್ನು ಅನುಸರಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಮುಸ್ಲಿಂ ಲೇಖಕರಲ್ಲಿ ಮುಸ್ಲಿಂ ಮಹಿಳಾ ಬದುಕು ಹೇಗೆ ಬಿಚ್ಚಿಕೊಂಡಿದೆ ಎಂದು ನೋಡುವ ವಿಧಾನ, ಮತ್ತೊಂದು ಈ ಸಂಗತಿಗಳಿಗೆ ಪೂರಕವಾಗಿ ಜಾಗತಿಕ ಸುದ್ದಿ ಮಾಧ್ಯಮ ಬಿತ್ತರಿಸಿದ ಪ್ರಕರಣಗಳನ್ನು ತರುವುದು, ಈ ನಡುವೆ ಮುಸ್ಲಿಂ ಧಾರ್ಮಿಕ ಗ್ರಂಥ ಖುರಾನಿನಲ್ಲಿ ಈ ಬಗ್ಗೆ ಏನನ್ನು ಹೇಳಲಾಗಿದೆ ಮತ್ತು ಅದನ್ನು ಧಾರ್ಮಿಕ ಮೂಲಭೂತವಾದಿ ಪುರುಷ ಜಗತ್ತು ಹೇಗೆ ಬಳಸಿಕೊಳ್ಳುತ್ತಿದೆ ಎಂದು ಪರಿಶೀಲಿಸುವುದು. ಈ ಮೂರು ಮಗ್ಗಲಿನಿಂದ ಮುಸ್ಲಿಂ ಮಹಿಳಾ ಸಂವೇದನೆಯನ್ನು ಕಟ್ಟಲು ಶರೀಫಾ ಅವರು ಪ್ರಯತ್ನಿಸಿದ್ದಾರೆ. ಇಲ್ಲಿ ಸಾಹಿತ್ಯ ಕೃತಿಗಳಲ್ಲಿನ ಉಲ್ಲೇಖ, ಅದೇ ಸಂಗತಿಯ ವರ್ತಮಾನದ ಮುಖ ಮತ್ತು ಅದಕ್ಕಿರುವ ಧಾರ್ಮಿಕ ವ್ಯವಸ್ಥೆಯ ಆವರಣ ಈ ಮೂರನ್ನು ಎದುರುಬದುರಾಗಿಸಿ ಮುಸ್ಲಿಂ ಮಹಿಳೆಯ ಚಹರೆಯನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

ಧರ್ಮವೊಂದರ ಪಾಲನೆಯ ನೈಜಮುಖಗಳನ್ನು ಈ ಸಂಶೋಧನೆಯಲ್ಲಿ ಶೋಧಿಸಲಾಗಿದೆ. ಮುಸ್ಲಿಂ ಸಮುದಾಯದ ಮಹಿಳೆಗೆ ಧರ್ಮವೇ ಕಲ್ಪಿಸಿದ ಸ್ವತಂತ್ರ ಮತ್ತು ಅದೇ ಧರ್ಮವನ್ನು ದಾಳವಾಗಿಸಿಕೊಂಡು ಅವಳ ಸ್ವತಂತ್ರವನ್ನು ಹರಣಮಾಡುವ ವೈರುಧ್ಯವನ್ನು ಎಳೆಎಳೆಯಾಗಿ ಹಿಡಿದಿದ್ದಾರೆ. ಮುಸ್ಲಿಂನಲ್ಲಿ ತೀರಾ ಅಮಾನುಷವಾದ ಫತ್ವಾಗಳಿರುವಂತೆ, ಮಾನವೀಯವಾದ ಫತ್ವಾಗಳೂ ಇರುವ ಬಗ್ಗೆ, ಪುರುಷನ ಅಧಿಕಾರ ಚಲಾವಣೆ ಮಾಡುವ ಧರ್ಮ ಸಂಹಿತೆಯನ್ನು ಮಾತ್ರ ಪಾಲನೆ ಮಾಡುತ್ತಾ, ಮಹಿಳೆಯ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಮುಸ್ಲಿಂ ಧಾರ್ಮಿಕ ನೀತಿಸಂಹಿತೆಗಳು ಗೌಣವಾಗುವ ಬಗ್ಗೆ ಸಂಶೋಧಕರು ತುಂಬಾ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ.

ಮುಸ್ಲಿಂ ಮಹಿಳೆ ಎನ್ನುವ ದುಂಡು ನಿರೂಪಣೆಗಳನ್ನು ಈ ಸಂಶೋಧನೆ ನಿರಾಕರಿಸಿದೆ. ಮುಸ್ಲಿಂ ಮಹಿಳೆಯೆಂದರೂ ಹಲವಾರು ಪದರುಗಳಿವೆ. ವರ್ಗದ ನೆಲೆಯಲ್ಲಿ ಮುಸ್ಲಿಂ ಮಹಿಳೆಗೆ ಹಲವು ಸ್ತರಗಳಿವೆ. ನಗರ, ಹಳ್ಳಿಗಳ ಮಹಿಳೆಯ ಭಿನ್ನ ರೂಪಗಳಿವೆ. ಅಕ್ಷರಸ್ಥ ಅನಕ್ಷರಸ್ಥ ಮಹಿಳೆಯರ ಭಿನ್ನತೆಗಳಿವೆ. ಶ್ರೀಮಂತ ಕುಟುಂಬದ ಮಹಿಳೆ, ಬಡಕುಟುಂಬದ ಮಹಿಳೆ, ಕರಾವಳಿಯ ಮಹಿಳೆ, ಉತ್ತರ ಕರ್ನಾಟಕದ ಮಹಿಳೆ ಹೀಗೆ ಮುಸ್ಲಿಂ ಧರ್ಮದ ಮಹಿಳೆಗಿರುವ ನಾನಾರೂಪದ ವ್ಯಕ್ತಿತ್ವವನ್ನು ಆಧರಿಸಿಯೇ ಇಲ್ಲಿ ಅವಳ ದಮನಕಾರಿ ನೆಲೆಯನ್ನೂ, ನಿಯಂತ್ರಕ ನೆಲೆಯನ್ನೂ, ಒಳಬಂಡಾಯದ ನೆಲೆಯನ್ನೂ ದಾಖಲಿಸಿದ್ದಾರೆ.


ಇಂದು ಜಾಗತಿಕ ಮುಸ್ಲಿಂ ಸಮುದಾಯ ಎದುರಿಸುತ್ತಿರುವ ತಲ್ಲಣಗಳು, ಭಾರತ ಮತ್ತು ಕರ್ನಾಟಕದ ಮುಸ್ಲಿಮರ ಸದ್ಯದ ಬಿಕ್ಕಟ್ಟುಗಳ ಹಿಂದಿನ ಆತಂಕ ಈ ಸಂಶೋಧನೆಯ ಬೆನ್ನಿಗಿದೆ. ಹಾಗಾಗಿ ಇಲ್ಲಿ ಮುಸ್ಲಿಂ ಮಹಿಳೆ ಎಂದಾಗಲೂ, ಈ ಸಂಶೋಧನೆ ಇದನ್ನು ಮೀರಿ ಜಾಗತಿಕ ಮುಸ್ಲಿಂ ಸಮುದಾಯದ ಸಂವೇದನೆ ಎನ್ನುವ ಹಂತಕ್ಕೆ ಜಿಗಿಯುತ್ತದೆ. ಇದು ಮುಸ್ಲಿಂ ಲೇಖಕರೊಬ್ಬರ ಚಿಂತನೆಯ ಅನಿವಾರ್ಯ ಜಿಗಿತವೂ ಆಗಿದೆ. ಇಲ್ಲಿ ಸಂಶೋಧಕರು ಧರ್ಮವನ್ನು ವಿರೋಧಿಸದೆ, ಈ ಧರ್ಮವನ್ನು ಅಂಧಾಭಿಮಾನದಿಂದ ಅಪಮೌಲ್ಯೀಕರಣ ಮಾಡುವ ಸನಾತನವಾದಿಗಳನ್ನು ಕಟುವಾಗಿ ವಿರೋಧಿಸುತ್ತಾರೆ. ಆ ಮೂಲಕ ಕೋಮುವಾದ, ಮೂಲಭೂತವಾದ ಉಂಟುಮಾಡುವ ಕೇಡುಗಳಿಗೆ ಮುಸ್ಲಿಂ ಮಹಿಳೆ ಹೇಗೆ ಬಲಿಪಶುವಾಗಿದ್ದಾಳೆ ಎನ್ನುವುದನ್ನು ತುಂಬಾ ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಡ್ಡಿದ್ದಾರೆ.

ಸಂಶೋಧನೆಯು ತೀರಾ ಅಕಾಡೆಮಿಕ್ ಆಗದೆ ಇರುವುದು ಇದರ ಶಕ್ತಿಯೂ ಆಗಿದೆ. ಕಾರಣ ಅಧ್ಯಯನಕ್ಕೆ ಆಯ್ದುಕೊಂಡ ಲೇಖಕರ ಹೆಣ್ಣು ಪಾತ್ರಗಳನ್ನು ತುಂಡುತುಂಡಾಗಿ ಕತ್ತರಿಸಿಟ್ಟು ಹೀಗಿದೆ ನೋಡಿ ಎಂದು ಹೇಳುವ ಜಾಳು ಜಾಳಾದ ಮಾದರಿಗಿಂತ, ಅವುಗಳ ಜತೆ ಜಾಗತಿಕ ಸಂಗತಿಗಳ ಅನುಸಂಧಾನವನ್ನೂ, ಸೃಜನಶೀಲ ಒಡನಾಟವನ್ನೂ ಸಂಶೋಧಕರು ಮಾಡಿದ್ದಾರೆ. ಇದರಿಂದಾಗಿ ಇದನ್ನೊಂದು ಸೃಜನಶೀಲ ಕಥನವನ್ನಾಗಿಯೂ ಓದಲು ಸಾಧ್ಯವಿದೆ. ಸಂಶೋಧಕರು ಸ್ವತಃ ಕವಿಯೂ, ಲೇಖಕಿಯೂ ಆಗಿದ್ದರಿಂದ ಇದು ಸಾಧ್ಯವಾಗಿರಬಹುದು.

ಮುಸ್ಲಿಮರ ಬಗೆಗಿದ್ದ ಅನೇಕ ಪೂರ್ವಾಗ್ರಹಗಳನ್ನು ಈ ಸಂಶೋಧನೆ ಎದುರುಗೊಂಡು ಕಟುವಾಸ್ತವದ ಮುಖವನ್ನು ಬಯಲುಗೊಳಿಸಿದೆ. ಈ ಸಂಶೋಧನೆಯು ಮುಸ್ಲಿಂ ಸಮುದಾಯದ ಬಗ್ಗೆ ಬಹುಪಾಲು ಜನ ಕಟ್ಟಿಕೊಂಡ ಏಕಮುಖಿ ಚಿತ್ರವನ್ನು ಒಡೆಯಲು ಶಕ್ತವಾಗಿದೆ. ಕನ್ನಡದ ಸ್ತ್ರೀವಾದಿ ಚಿಂತನೆಗೆ ಮುಸ್ಲಿಂ ಮಹಿಳೆಯ ನೆಲೆಯಿಂದ ಮತ್ತೊಂದು ಮಗ್ಗಲನ್ನು ಸೇರಿಸಿದೆ. ಈ ಕಾರಣಗಳಿಗಾಗಿ ಕೆ.ಶರೀಫಾ ಅವರ 'ಮುಸ್ಲಿಂ ಮಹಿಳಾ ಸಂವೇದನೆ' ಕೃತಿ ಮುಖ್ಯವಾಗುತ್ತದೆ. ಹೀಗಾಗಿ ಶರೀಫಾ ಅವರು ಅಭಿನಂದನಾರ್ಹರು.

ಈ ಅಧ್ಯಯನ ಕೆಲವು ಮಿತಿಗಳನ್ನು ಮೀರಬಹುದಿತ್ತು. ಮುಖ್ಯವಾಗಿ ಪುನರಾವರ್ತನೆಯ ಅಪಾಯ ಢಾಳಾಗಿ ಕಣ್ಣಿಗೆ ರಾಚುತ್ತದೆ. ಅಂತೆಯೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪುರುಷ ಲೇಖಕರಾದ ಬೊಳುವಾರು, ಕಟ್ಪಾಡಿ, ಅಬ್ಬಾಸ್ ಮೇಲಿನಮನಿ ಚಿತ್ರಿಸುವ ಮುಸ್ಲಿಂ ಮಹಿಳಾ ಲೋಕಕ್ಕೂ, ಸಾರಾ, ಬಾನುರವರು ತಮ್ಮ ಸೃಜನಶೀಲ ಕೃತಿಗಳಲ್ಲಿ ದಾಖಲಿಸುವ ಮಹಿಳಾ ಲೋಕಕ್ಕೂ ಇರುವ ಫರಕುಗಳನ್ನು ದಾಖಲಿಸುವ ಅಗತ್ಯವಿತ್ತು. ಆದರೆ ಈ ನಾಲ್ವರೂ ಲೇಖಕರು ದಾಖಲಿಸುವ ಹೆಣ್ಣಿನ ಚಿತ್ರವನ್ನು ದುಂಡಾಗಿ ಗ್ರಹಿಸಿದ್ದಾರೆ. ಇಂತಹ ಕೆಲವು ಮಿತಿಗಳಾಚೆ ಈ ಕೃತಿ ತನ್ನದೇ ಆದ ಮಹತ್ವವನ್ನು ಪಡೆದಿದೆ. ●

ಕರ್ಬಲಾದಲ್ಲಿ ಮಹಿಳೆಯರ ಪಾತ್ರ



ಇತ್ತೀಚೆಗೆ ಮಹಿಳೆಯರ ಮೇಲೆ ಹಲವಾರು ನಿರ್ಬಂಧಗಳನ್ನು ವಿಧಿಸುವುದನ್ನು ನಾವು ಕಾಣುತ್ತಿದ್ದೇವೆ. ಕೆಲ ಸಂದರ್ಭಗಳಲ್ಲಿ ಅವರು ಮನೆಯಿಂದ ಹೊರ ಬೀಳುವಂತಿಲ್ಲ. ಅವರು ತಮ್ಮನ್ನು ಮನೆಗೆಲಸಕ್ಕೆ ಸೀಮಿತಗೊಳಿಸಿಕೊಳ್ಳಬೇಕಾಗುತ್ತದೆ. ಕೆಲವೇ ಮಹಿಳೆಯರಿಗೆ ಸಾರ್ವಜನಿಕ ಪಾತ್ರವಿದೆ. ಬದುಕಿನ ತಲ್ಲಣಗಳಲ್ಲಿ ಪಾಲ್ಗೊಳ್ಳುವವರು ತೀರ ಕಡಿಮೆ. ಇದೆಲ್ಲ ಇಸ್ಲಾಮಿ ಹೆಸರಿನಲ್ಲಿ ನಡೆಯುತ್ತಿದೆ. ಇಸ್ಲಾಮಿನ ಆರಂಭಿಕ ಇತಿಹಾಸದ ಮೇಲೆ ದೃಷ್ಟಿ ಹರಿಸಿದರೆ ಮಹಿಳೆಯರು ಪುರುಷರೊಂದಿಗೆ ಹಲವಾರು ಘಟನೆಗಳಲ್ಲಿ ಪಾಲ್ಗೊಂಡಿದ್ದನ್ನು ಕಾಣಬಹುದು. ಪ್ರವಾದಿ ಖದೀಜಾರಿಂದ ನಾಲ್ಕು ಹೆಣ್ಣುಮಕ್ಕಳನ್ನು ಪಡೆದಿದ್ದರು. ಅವರನ್ನು ಇಸ್ಲಾಮೀ ಕ್ರಾಂತಿಯಲ್ಲಿ ಪಾಲ್ಗೊಳ್ಳುವ ಆದರ್ಶ ಮಹಿಳೆಯರಂತೆ ಬೆಳೆಸಿದರು.



ಇಸ್ಲಾಂ ಕೇವಲ ಆಧ್ಯಾತ್ಮಿಕ ಕ್ರಾಂತಿಯಾಗಿರದೆ ಸಾಮಾಜಿಕ ಕ್ರಾಂತಿಯೂ ಆಗಿತ್ತು. ಅದು ಮಹಿಳೆಯರನ್ನು ಸಬಲೀಕರಿಸಿತ್ತು, ಅವರಿಗೆ ಸಮಾನ ಹಕ್ಕುಗಳನ್ನು ನೀಡಿತ್ತು, ಅಂದಿನ ದಿನಗಳಲ್ಲಿ ಅದು ಕಲ್ಪನಾತೀತವಾಗಿತ್ತು. ಮಹಿಳೆಯರು ಯಾವುದೇ ನಾಗರಿಕತೆಯಲ್ಲಿ ಹೆಚ್ಚೆಂದರೆ ಎರಡನೆಯ ದರ್ಜೆಯ ಪಾತ್ರ ನಿರ್ವಹಿಸಬಲ್ಲವರಾಗಿದ್ದರು. ಆದರೆ ಇಸ್ಲಾಂ ಅವರ ಮನುಷ್ಯ ಘನತೆಯನ್ನು ಎತ್ತಿ ಹಿಡಿಯಿತು. ಅವರಿಗೆ ಲೌಕಿಕ ಬದುಕಿನ ಎಲ್ಲ ವ್ಯವಹಾರಗಳಲ್ಲಿ ಪುರುಷರಿಗೆ ಸಮಾನವಾದ ಪಾತ್ರವನ್ನು ನೀಡಿತ್ತು, ಉಮ್ಮೆ ಅಮ್ಮಾರಂತಹ ಮಹಿಳೆಯರು ಪ್ರವಾದಿ ಅನಿವಾರ್ಯವಾಗಿ ಮಾಡಿದ್ದ ಅನೇಕ ಯುದ್ಧಗಳಲ್ಲಿ ಪಾಲ್ಗೊಂಡಿದ್ದರು. ಉಹೂದ್ ಯುದ್ಧದಲ್ಲಿ ಖಡ್ಗದ ಏಟನ್ನು ತನ್ನ ತೋಳಿನಿಂದ ಎದುರಿಸಿ ಪ್ರವಾದಿಯನ್ನು ರಕ್ಷಿಸಿದ್ದಳು.

ಎಲ್ಲ ಮುಸ್ಲಿಮರು ಸಮ್ಮತಿಸುವಂತೆ ಅತ್ಯಂತ ಗೌರವದಿಂದ ಕಾಣುವ ಪಂಚಮಹಿಳಾಮಣಿ (ಪಂಜತನ್) ಯರಲ್ಲಿ ಫಾತಿಮಾ (ಪ್ರವಾದಿಯ ಪುತ್ರಿ) ಒಬ್ಬರಾಗಿದ್ದರು. ಪ್ರವಾದಿ ಅವರನ್ನು ಇಸ್ಲಾಮಿನ ಅತ್ಯುತ್ಕಲ ಮೌಲ್ಯಗಳಲ್ಲಿ ಬೆಳೆಸಿದ್ದರು. ಫಾತಿಮಾ ಜೈನಬ್ ಅಲ್ಲದೆ ಇಮಾಮ್ ಹಸನ್ ಮತ್ತು ಇಮಾಮ್ ಹುಸೇನ್‌ರಿಗೆ ಜನ್ಮ ನೀಡಿದರು. ಜೈನಬ್ ಕರ್ಬಲಾ ನಂತರದ ಪ್ರಸಂಗದಲ್ಲಿ ಮುಖ್ಯ ಪಾತ್ರ ನಿರ್ವಹಿಸಿದರು. ಬಹುತೇಕ ಮುಸ್ಲಿಮರ ನಂಬಿಕೆಯಂತೆ ಇರಾನ್‌ನ ದೊರೆ ಕಿಸ್ರಾ ಮುಸ್ಲಿಮರಿಂದ ಪರಾಜಿತಗೊಂಡ. ಅಲಿ ಕಿಸ್ರಾನ ಪುತ್ರಿ ಸಹರ್‌ಬಾನುಳನ್ನು ತಮ್ಮ ಪುತ್ರ ಹುಸೇನ್ ಜೊತೆ ಮದುವೆ ಮಾಡಿದರು.

ಬಾನು ಸಹ ಕರ್ಬಲಾದ ಘೋರ ಪ್ರಸಂಗಗಳನ್ನು ತುಂಬ ಧೈರ್ಯದಿಂದ ಎದುರಿಸಿದಳು. ತನ್ನ ಇಬ್ಬರು ಪುತ್ರರಾದ ಅಲಿ ಅಕಬರ್ ಮತ್ತು ಅಲಿ ಅಸ್ಗರ್‌ರನ್ನು ಅಲ್ಲಾಹ್‌ನ ಮಾರ್ಗದಲ್ಲಿ ಸಂತೋಷದಿಂದ ಬಲಿದಾನ ಮಾಡಿದಳು. ಎಜಿದ್‌ನ ವಿರುದ್ಧದ ಹೋರಾಟದಲ್ಲಿ ತಮ್ಮ ನೇತೃತ್ವ ವಹಿಸಿಕೊಳ್ಳಬೇಕೆಂದು ಕೂಫಾ(ಇರಾಕ್‌ನ ಒಂದು ಪಟ್ಟಣ)ದ ಪ್ರಮುಖ ವ್ಯಕ್ತಿಗಳಿಂದ ಮನವಿಪತ್ರಗಳನ್ನು ಪಡೆದಿದ್ದ ಹುಸೇನ್ ಮಕ್ಕಾದಿಂದ ಕೂಫಾಕ್ಕೆ ಹೊರಟು ನಿಂತರು. ಮಾವೈಯನಿಗೆ ಅಧಿಕಾರ ಹಸ್ತಾಂತರಿಸುವಾಗ ಇಮಾಮ್ ಹಸನ್‌ರೊಂದಿಗೆ ಮಾಡಿಕೊಂಡಿದ್ದ ಕರಾರನ್ನು ಉಲ್ಲಂಘಿಸಿ ಎಜಿದ್ ಖಿಲಾಫತ್‌ಅನ್ನು ಕಬಳಿಸಿದ್ದನು. ಕೂಫಾದ ಜನ ತಿರುಗಿ ಬೀಳಬಹುದು ಮತ್ತು ಆಡಳಿತಗಾರರೊಂದಿಗೆ ಶಾಮೀಲಾಗಬಹುದು ಎಂದು ಆತಂಕಗೊಂಡಿದ್ದ ಹುಸೇನ್‌ರ ಅನೇಕ ಹಿತೈಷಿಗಳು ಅವರು ತಮ್ಮ ಪರಿವಾರದವರನ್ನು ತಮ್ಮ ಜೊತೆ ಕರೆದೊಯ್ಯದೆ ಅವರೊಬ್ಬರೇ ಹೋಗಲು ಮನವಿ ಮಾಡಿಕೊಂಡರು.

ಆದರೆ ಅಪಾಯವನ್ನು ಲೆಕ್ಕಿಸದೆ ಇಮಾಮ್ ಹುಸೇನ್ ಅವರ ಸಲಹೆಯನ್ನು ತಳ್ಳಿ ಹಾಕಿದರು. ಮಹಿಳೆಯರೂ ಸೇರಿದಂತೆ ತಮ್ಮ ಪರಿವಾರದ ಸದಸ್ಯರನ್ನೆಲ್ಲ ತಮ್ಮ ಜೊತೆಗೆ ಕರೆದೊಯ್ದರು. ತಮ್ಮ ಹಿತೈಷಿಗಳಿಗಿಂತ ಅವರು ತಮ್ಮ ಮಡದಿ, ಸೋದರಿ, ಪುತ್ರಿಯರೂ ಸೇರಿದಂತೆ ಆ ಮಹಿಳೆಯರು ಮಹತ್ವಪೂರ್ಣ ಪಾತ್ರ ನಿರ್ವಹಿಸಲಿದ್ದಾರೆ- ಕೂಫಾದಲ್ಲಿ ಇಲ್ಲವೆ ಅದರ ಸಮೀಪ ಎಜಿದ್‌ನ ಸೈನ್ಯದೊಂದಿಗೆ ಹೋರಾಡುವ ಪ್ರಸಂಗ ಬಂದರೂ- ಎನ್ನುವುದು ಚೆನ್ನಾಗಿ ಗೊತ್ತಿತ್ತು. ಕೂಫಾದ ಜನ ಕಡೆಗೂ ತಿರುಗಿ ಬಿದ್ದರು. ಎಜಿದ್ ಹಾಗೂ ಅವನ ಪ್ರತಿಕ್ರಾಂತಿಯ ವಿರುದ್ಧ ಹೋರಾಡಲು ತಮ್ಮ ನೇತೃತ್ವ ವಹಿಸಿಕೊಳ್ಳಲು ಆಹ್ವಾನಿಸಿದ್ದ ಜನರೇ ತಿರುಗಿ ಬಿದ್ದರು.

ಇಸ್ಲಾಮಿಗೆ ವಿರುದ್ಧವಾಗಿದ್ದುದಕ್ಕೆಲ್ಲ ಎಜಿದ್ ಸಂಕೇತವಾಗಿದ್ದ. ಅವನ ಜೀವನ ಶೈಲಿ ಪ್ರವಾದಿ ಮತ್ತು ಅವರ ಸಂಗಾತಿಯರ ಜೀವನಶೈಲಿಗೆ ವಿರುದ್ಧವಾಗಿತ್ತು. ಅಷ್ಟೇ ಅಲ್ಲ ಅವನು ಖಿಲಾಫತ್ (ಇಸ್ಲಾಮೀ ಆಡಳಿತ ವ್ಯವಸ್ಥೆ) ಮತ್ತು ಇಮಾಮತ್ (ಮಾರ್ಗದರ್ಶಕನ ಸ್ಥಾನ) ಅನ್ನು ರದ್ದುಗೊಳಿಸಿ ಅರಸೊತ್ತಿಗೆಯನ್ನು ಚಾಲ್ತಿಗೆ ತಂದಿದ್ದ. ಅರಸೊತ್ತಿಗೆಯು ಇಸ್ಲಾಂ ಹುಟ್ಟುಹಾಕಿದ್ದ ಕ್ರಾಂತಿಕಾರಕ ರಾಜಕೀಯ ವ್ಯವಸ್ಥೆಗೆ ವಿರುದ್ಧವಾಗಿತ್ತು. ಕೂಫಾಕ್ಕೆ ಹೊರಟುನಿಂತಾಗ ಹುಸೇನ್‌ರಿಗೆ ಮುಂದೆ ಏನು ಕಾದಿದೆ ಎನ್ನುವುದು ಗೊತ್ತಿತ್ತು. ಇಸ್ಲಾಮೀ ಕ್ರಾಂತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಮಹಿಳೆಯರು ಸಹ ತುಂಬ ಮಹತ್ವಪೂರ್ಣ ಪಾತ್ರ ನಿರ್ವಹಿಸಬಲ್ಲರು ಎನ್ನುವುದನ್ನು ಜಗತ್ತಿಗೆ ತೋರಿಸಿಕೊಡುವುದಕ್ಕಾಗಿ ಅವರು ಉದ್ದೇಶಪೂರ್ವಕವಾಗಿ ಮಹಿಳೆಯರನ್ನು ತಮ್ಮ ಜೊತೆ ಕರೆದೊಯ್ದರು.

ಈ ಮಹಿಳೆಯರು ವಾಸ್ತವದಲ್ಲಿ ಅತ್ಯಂತ ಮಹತ್ವಪೂರ್ಣ ಪಾತ್ರ ನಿರ್ವಹಿಸಿಯೇ ಬಿಟ್ಟರು. ಅವರ ಪಾತ್ರ ಇಮಾಮ್‌ರ ಪುರುಷ ಸಂಗಾತಿಗಳ ಪಾತ್ರಕ್ಕಿಂತ ಕಡಿಮೆಯದಾಗಿರಲಿಲ್ಲ. ಇಮಾಮ್ ಸರಿ ಎಂದು ಸಾಬೀತಾಯಿತು. ಈ ಮಹಿಳೆಯರು, ಅದರಲ್ಲೂ ವಿಶೇಷವಾಗಿ ಇಮಾಮ್‌ರ ಸೋದರಿ ಜೈನಬ್ ತುಂಬ ಮಹತ್ವದ ಪಾತ್ರ ನಿರ್ವಹಿಸಿದರು. ಇಮಾಮ್ ಮತ್ತು ಅವರ ಸಂಗಾತಿಗಳ ಬಲಿದಾನದ ನಂತರ ಇಮಾಮ್ ಜೈನುಲ್ ಆಬದೀನ್ (ಇಮಾಮ್‌ರ ಪುತ್ರ) ಮತ್ತು ಮಹಿಳೆಯರು ಮತ್ತು ಮಕ್ಕಳು ಬಂಧಿಸಲ್ಪಟ್ಟರು. ಅವರನ್ನು ಒಂಟೆಯ ಬೆತ್ತಲೆ ಬೆನ್ನಿನ ಮೇಲೆ ಕೂಡ್ರಿಸಿ ಕೂಫಾ ಮೂಲಕ ದಮಾಸ್ಕಸ್‌ಗೆ ಕರೆದೊಯ್ಯಲಾಯಿತು. ಶೂರ ಹಾಗೂ ದಿಟ್ಟ ಸೈದಾ ಜೈನಬ್ ದಾರಿಯುದ್ದಕ್ಕೂ ಎಲ್ಲೆಡೆ ಮುಸ್ಲಿಮರನ್ನುದ್ದೇಶಿಸಿ ಮಾತನಾಡುತ್ತ ಎಜಿದ್‌ನನ್ನು, ಅವನ ದುಷ್ಕೃತ್ಯಗಳನ್ನು, ಇಸ್ಲಾಂ ವಿರೋಧಿಯಾದ ಅವನ ಪ್ರತಿಕ್ರಾಂತಿಯ ಸಂಚನ್ನು ಬಯಲಿಗೆಳೆದರು.

ಸೈದಾ ಜೈನಬ್ ಮತ್ತು ಇಮಾಮ್‌ರ ಇಡೀ ಪರಿವಾರವನ್ನು ದಮಾಸ್ಕಸ್‌ನ ಜೈಲಿನಲ್ಲಿಡಲಾಯಿತು. ಅವರನ್ನು ಎಜಿದ್‌ನ ಆಸ್ಥಾನಕ್ಕೆ ಕರೆ ತಂದಮೇಲೆ ಜೈನಬ್ ಎಜಿದ್‌ನ ಆಸ್ಥಾನಿಕರೆದುರು ಗರ್ಜಿಸಿದರು. ಎಜಿದ್‌ನ ನಿಜಸ್ವರೂಪವನ್ನು ಸಮರ್ಥಕವಾಗಿ ಬಹಿರಂಗಗೊಳಿಸಿದರು. ಅವನ ನಿಜರೂಪವನ್ನು ತೆರೆದಿಡುವಲ್ಲಿ ಅವರು ಎಳ್ಳಷ್ಟೂ ಹಿಂಜರಿಯಲಿಲ್ಲ. ಅದೂ ಯಾವ ಮಟ್ಟಿಗೆ ಎಂದರೆ ಎಜಿದ್ ಜೈನಬ್ ಮತ್ತು ಇಮಾಮ್‌ರ ಇಡೀ ಪರಿವಾರವನ್ನು ಬಿಡುಗಡೆ ಮಾಡಿ ಅವರನ್ನು ಸುರಕ್ಷಿತವಾಗಿ ಮದೀನಾಕ್ಕೆ ಕಳಿಸಿಕೊಡಬೇಕಾಯಿತು.

ಸೈದಾ ಜೈನಬ್‌ರ ಪಾತ್ರ ಆದರ್ಶಪ್ರಾಯವಾ... ಅದು ಮುಸ್ಲಿಂ ಮಹಿಳೆಯರು ಎಷ್ಟು ಧೀರರಾ... ಮತ್ತು ಇಸ್ಲಾಮೀ ಕ್ರಾಂತಿಯನ್ನು ಸಂಘಟಿಸುವಲ್ಲಿ ... ಮಹತ್ವಪೂರ್ಣ ಪಾತ್ರ ನಿರ್ವಹಿಸಿದರು ಎನ್ನು... ತೋರಿಸಿಕೊಡುತ್ತದೆ. ಇಂದು ಅಪಾರ ಪ್ರಗತಿ ... ಶಿಕ್ಷಣದ ಪ್ರಸಾರದ ನಂತರವೂ ಮುಸ್ಲಿಂ ಮಹಿಳೆ... ದಮನಿಸಲ್ಪಟ್ಟಿದ್ದಾರೆ. ಸೌದಿ ಅರೇಬಿಯಾದಂತಹ ದೇಶಗಳಲ್ಲಿ ಅವರ ದನಿಯನ್ನು 'ಅವ್ರಾಹ್' (... ಅವರ ದನಿ ಸಾರ್ವಜನಿಕ ಕೇಳಿಸಿಕೊಳ್ಳಕೂಡದು) ... ಪರಿಗಣಿಸಲಾಗುತ್ತದೆ. ಇಲ್ಲಿ ಜೈನಬ್ ಮತ್ತು ಇಮಾ... ಪರಿವಾರದ ಇತರ ಮಹಿಳೆಯರೇ ಸಾರ್ವಜನಿಕವಾಗಿ ... ವಕ್ತಾರರಾದರು.

ಆ ಮಹಿಳೆಯರ ಪೈಕಿ ಜೈನಬ್ ಎ... ಹಿರಿಯರಾಗಿದ್ದರು. ಅವರೇ ಇಡೀ ಪರಿವಾರದ ... ವಹಿಸಿಕೊಳ್ಳಬೇಕಾಯಿತು. ಇಮಾಮ್ ಜೈನುಲ್ ಆಬ... ತೀವ್ರವಾಗಿ ಅಸ್ವಸ್ಥನಾಗಿದ್ದುದರಿಂದ ಸಕ್ರಿಯ ... ನಿರ್ವಹಿಸುವುದು ಅವನಿಗೆ ಸಾಧ್ಯವಾಗಲಿಲ್ಲ. ಹಿ... ಅವರೇ ನಾಯಕತ್ವದ ಹೊಣೆ ವಹಿಸಿಕೊಳ್ಳಬೇಕಾ... ತಮ್ಮಿಂದ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನದನ್ನು ಅ... ಮಾಡಿತೋರಿಸಿದ್ದರು. ಇಂದು ಮಹಿಳೆಯರು ಜೈ... ಮತ್ತು ಅವರ ನಾಯಕತ್ವದಿಂದ ಸಾಕಷ್ಟು ಕಲಿಯಬೇಕಿ... ಅವರ ಸಾರ್ವಜನಿಕ ಪಾತ್ರ ಮತ್ತು ವಾಕ್‌ಪಟುತ್ವ... ಸಾಕಷ್ಟು ಕಲಿಯಬಹುದು.

ಅನೇಕ ಮುಸ್ಲಿಮರು ಭಾವಿಸುವಂತೆ ಮಹಿಳೆ... ದುರ್ಬಲ ವರ್ಗಕ್ಕೆ ಸೇರಿದವರು ಹಾಗೂ ಸಾರ್ವಜನಿ... ಹೆಚ್ಚಿನದೇನನ್ನೂ ಸಾಧಿಸಲಾರರು ಎಂದು ಯೋಚಿಸು... ಸರಿಯಲ್ಲ. ಇಂದಿನ ಮುಸ್ಲಿಂ ಮಹಿಳೆಯರಿಗೆ ಜೈ... ಸಾರ್ವಜನಿಕ ಪಾತ್ರ ತುಂಬ ಸ್ಫೂರ್ತಿದಾಯಕವಾಗಿದೆ. ... ಮನೆಗೆಲಸಗಳಿಗೇ ಸೂಕ್ತವೆಂದು ಭಾವಿಸುವ ಮಹಿಳೆ... ಅವರು ಒಂದು ಮಾದರಿಯಾಗಿದ್ದಾರೆ.

ಇಂಗ್ಲಿಷ್ ಮೂಲ: ಡಾ. ಅಸ್ಗರ್ ಅಲಿ ಎಂಜಿನಿ...
ಕನ್ನಡಕ್ಕೆ: ಹಸನ್ ನಯೀಂ ಸುರಕೋ...


ಮೂಢನಂಬಿಕೆಗಳೆಂದು ಜರೆಯುವ ಮುನ್ನ...: ಒಂದು ಪ್ರತಿಕ್ರಿಯೆ

ನವೆಂಬರ್ 25, 2012ರ 'ವಿಜಯವಾಣಿ'ಯಲ್ಲಿ ಕುವೆಂಪು ವಿಶ್ವ ವಿದ್ಯಾಲಯದ ರಾಜಾರಾಮ ಹೆಗಡೆಯವರು ಅಂತಾರಾಷ್ಟ್ರೀಯ ವಿದ್ವಾಂಸರಾದ ಎಸ್.ಎನ್. ಬಾಲಗಂಗಾಧರರ ವಸಾಹತು ಪ್ರಜ್ಞೆಯ ವಿಚಾರಗಳನ್ನು ಕನ್ನಡದಲ್ಲಿ ನಿರೂಪಿಸಿದ್ದಾರೆ. ನಿರೂಪಿಸಲ್ಪಟ್ಟಿರುವ ವಿಚಾರಗಳು ರಾಜಾರಾಮರು ಅವಕ್ಕೆ ತೋರಿಸಿರುವ ಮನ್ನಣೆ, ಪ್ರಶಂಸೆ ನಿಷ್ಠೆ ಮತ್ತು ಭಕ್ತಿಯನ್ನು ಸೂಚಿಸುತ್ತವೆ. ಅದೇನೇ ಇರಲಿ ಈಗ ನೇರವಾಗಿ ವಿಷಯಕ್ಕೆ ಬರೋಣ. ಈ ನಿರೂಪಣೆಯಲ್ಲಿ ಬಾಲಗಂಗಾಧರರು ಪ್ರಸ್ತುತ ಭಾರತೀಯ ಸಮಾಜ ವಿಜ್ಞಾನಗಳಲ್ಲಿ ರೂಢಿಗತವಾಗಿರುವ ಮೂಢನಂಬಿಕೆ, ಅಂಧಶ್ರದ್ಧೆ ಇತ್ಯಾದಿ ಪದಗಳನ್ನು ಅಥವಾ ಪರಿಭಾಷೆಯನ್ನು ನಾವು ಯಾವುದೇ ಐತಿಹಾಸಿಕ ಪರಿಜ್ಞಾನವಿಲ್ಲದೆ ಸ್ವೀಕರಿಸಿರುವುದು ಸಮಸ್ಯಾತ್ಮಕವೆಂದು ನಂಬಿದ್ದಾರೆ. ಜೊತೆಗೆ ಅವುಗಳು ಹಾಕಿರುವ ಪರಿಧಿಯೊಳಗೆ ಭಾರತೀಯ ಸಮಾಜ ವಿಜ್ಞಾನಗಳು ಧರ್ಮ ಮತ್ತು ಸಮಾಜವನ್ನು ಅರ್ಥ ಮಾಡಿಕೊಳ್ಳುತ್ತಿವೆಯೆಂದು, ಹೀಗೆ ಮಾಡುವುದು ಅನೇಕ ಚರ್ಚಾಸ್ಪದ ವಿಷಯಗಳನ್ನು ಮರೆಮಾಚಿದಂತಾಗುತ್ತದೆ ಮತ್ತು ಅದು ಅರ್ಥಹೀನವೆಂದು ಅವರು ವಾದಿಸುತ್ತಾರೆ. ಹಾಗಾದರೆ ಈ ಶಬ್ದಗಳು/ಪರಿಭಾಷೆಗೆ ಮೂಲ ಕಾರಣಕರ್ತರು ಯಾರು? ಇವುಗಳ ಉಗಮ ಸ್ಥಾನಗಳಾವುವು? ಯಾವ ಐತಿಹಾಸಿಕ ಸಂದರ್ಭದಲ್ಲಿ ಈ ಶಬ್ದಕೋಶಗಳು ಪ್ರಚಲಿತಕ್ಕೆ ಬಂದವು?

ಬಾಲಗಂಗಾಧರರ ಪ್ರಕಾರ ಈ ಪದಗಳು ಪಾಶ್ಚಾತ್ಯ ಕ್ರಿಶ್ಚಿಯಾನಿಟಿಯ ಮೂಲದಿಂದ ಉದ್ಭವಿಸಿರುವಂತದ್ದು. ವಸಾಹತುಶಾಹಿ ಸಂದರ್ಭದಲ್ಲಿ ಪಾಶ್ಚಾತ್ಯ ಮಿಷನರಿಗಳು ಸ್ಥಳೀಯ ಸಂಸ್ಕೃತಿ ಮತ್ತು ಸಮಾಜವನ್ನು ಹಳಿಯಲು ಈ ಪದಪುಂಜಗಳನ್ನು ಧಾರಾಳವಾಗಿ ಬಳಸಿಕೊಂಡರು. ಪಾಶ್ಚಾತ್ಯ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಪದಕೋಶಗಳು ಇಲ್ಲಿನ ಸಂಸ್ಕೃತಿ, ಧರ್ಮ ಮತ್ತು ಸಮಾಜವನ್ನು ಅರ್ಥಮಾಡಿಕೊಳ್ಳಲು ಎಷ್ಟೊಂದು ಸಮಂಜಸ ಎಂದು ಬಾಲಗಂಗಾಧರರು ಪ್ರಶ್ನಿಸುತ್ತಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಮಾಜ ಮತ್ತು ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳಲು, ವಿಶೇಷವಾಗಿ ಇಲ್ಲಿನ ಕೆಲವು ಆಚಾರ-ವಿಚಾರಗಳು, ಈ ಪರಿಭಾಷೆಗಳು ಮತ್ತು ಅದರ ಮೇಲೆ ನಿಂತಿರುವ ಭಾರತೀಯ ಸಮಾಜ ವಿಜ್ಞಾನಗಳು ಮಿತಿಯನ್ನು ಹೊಂದಿವೆ ಎಂಬುದು ಬಾಲಗಂಗಾಧರರ ಒಟ್ಟು ವಿಚಾರ. ಈ ನಿರೂಪಣೆಯ ಅಡಕತ್ತರಿಯಲ್ಲಿ ಸಿಲುಕಿ, ಟೀಕೆಗೊಳಗಾಗಲ್ಪಟ್ಟಿರುವವರ ಪ್ರಮುಖರು ಯಾರೆಂದರೆ ಕ್ರೈಸ್ತ ಮಿಷನರಿಗಳು ಮತ್ತು ಪಾಶ್ಚಾತ್ಯ ಸೆಕ್ಯುಲರ್ ವಿದ್ವಾಂಸರು. ಈ ವಿಷಯಗಳಿಗೆ ಸಂಬಂಧಿಸಿದಂತೆ ನನ್ನ ಕೆಲವು ಅನುಮಾನಗಳನ್ನು ಬಾಲಗಂಗಾಧರರಿಗೆ ಕೇಳಲು ಇಚ್ಛಿಸುತ್ತೇನೆ.

ವಸಾಹತುಪ್ರಜ್ಞೆಯ ವಿಶ್ವರೂಪವನ್ನು ಜರೆಯುವ ಮುನ್ನ...

1. ವಸಾಹತು ಪ್ರಜ್ಞೆಯ ವಿಶ್ವರೂಪದ "ರೂವಾರಿಗಳಾದ" ಮಿಷನರಿಗಳು ಮತ್ತು ಪಾಶ್ಚಾತ್ಯ ಸೆಕ್ಯುಲರ್ ವಿದ್ವಾಂಸರು ನಡೆಸಿದ ಸಾಹಿತ್ಯ ಅಥವಾ ಸಂಸ್ಕೃತಿ ಕೃಷಿಯನ್ನು ನಾವು ಸಾಕಷ್ಟು ಅಧ್ಯಯನ ಮಾಡಿದ್ದೇವೆಯೇ? ಅಂದರೆ ಇಂಗ್ಲಿಷ್‌ನಲ್ಲಿ ನಾವು ಏನು ಆರ್ಕೈವಲ್ ಅಧ್ಯಯನ ಅಂತ ಹೇಳುತ್ತೇವೆಯೋ ಅದನ್ನು ನಾವು ಸಮಾಧಾನಕರ ಪ್ರಮಾಣದಷ್ಟು ಅಧ್ಯಯನ ಮಾಡಿದ್ದೇವೆಯೇ? ಕರ್ನಾಟಕದ ಸಾಹಿತ್ಯ ಸಂಸ್ಕೃತಿ ಮತ್ತು ಧಾರ್ಮಿಕ ವಿಷಯಗಳಲ್ಲಿ 19ನೇ ಶತಮಾನದ ಓರಿಯಂಟ ಲಿಸ್ಟರು ಕೊಟ್ಟಿರುವ ಕಾಣಿಕೆಗಳನ್ನು ನಾವು ಮತ್ತೊಮ್ಮೆ ಅಧ್ಯಯನ ಮಾಡುವ ಐತಿಹಾಸಿಕ ಜರೂರತ್ತು ಈಗ ಇದೆ. ಆಗಬೇಕಾದಷ್ಟು ಆಗಿಲ್ಲವೆಂದು ನನ್ನ ವೈಯಕ್ತಿಕ ಅಭಿಪ್ರಾಯ.



2. ಮಿಷನರಿಗಳು ಮತ್ತು ವಿದ್ವಾಂಸರ ನಡುವೆ ವ್ಯಕ್ತವಾದಂತಹ ಸಾಹಿತ್ಯ ಅಥವಾ ತಾತ್ವಿಕ ವ್ಯತ್ಯಾಸ, ಭಿನ್ನತೆ, ಭಿನ್ನಾಭಿಪ್ರಾಯಗಳನ್ನು ನಾವು ಸೂಕ್ತವಾದ ರೀತಿಯಲ್ಲಿ ಅಭ್ಯಸಿಸಿದ್ದೇವೆಯೇ? ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯಗಳ ಐತಿಹಾಸಿಕ ಅಧ್ಯಯನವನ್ನು ಕರ್ನಾಟಕದ ಸಂದರ್ಭದಲ್ಲಿ ಇನ್ನು ಸರಿಯಾಗಿ ಮಾಡದ ಹಿನ್ನೆಲೆಯಲ್ಲಿ ವಸಾಹತು ಪ್ರಜ್ಞೆಯ ವಿಶ್ವರೂಪವನ್ನು ಸಾರಾಸಗಟು 'ಹೀಗೆಯೇ' ಎಂದು ಹೇಳುವದಕ್ಕೆ ನಮಗೆ ಬೌದ್ಧಿಕ ಸಾಮರ್ಥ್ಯವಿದೆಯೇ? ವಸಾಹತು ವಿಶ್ವರೂಪವನ್ನು ಹೀಗೆ ಏಕಭಾವದಿಂದ ಅಥವಾ ರಿಡಕ್ಷನಿಸ್ಟ್ ಧೋರಣೆಯಿಂದ ನೋಡುವುದರಿಂದ ಅನೇಕ ನಿರ್ದಿಷ್ಟ ಮತ್ತು ಸಂಕೀರ್ಣವಾದ ವಿಷಯಗಳನ್ನು ಒಂದೇ ಏಟಿಗೆ ಗೂಡಿಸಿ, ಪಕ್ಕಕ್ಕಿಟ್ಟಂತೆ ಆಗುವುದಿಲ್ಲವೆ?

3. ಮೇಲ್ನೋಟದಲ್ಲಿ ಸಾಮಾಜಿಕ ಚಳವಳಿಗಳು ಪ್ರೊಟೆಸ್ಟಾಂಟ್ ಮಾದರಿಯಲ್ಲಿ ರೂಪಿತವಾದರೂ, ಅವು ಆ ಮಾದರಿಯನ್ನು ಮೀರಿ ತನ್ನದೇ ಆದ ಸೈದ್ಧಾಂತಿಕ ಅಥವಾ ತಾತ್ವಿಕ ಪರಿಧಿಯನ್ನು ರೂಪಿಸಿದ್ದು ಬಾಲಗಂಗಾಧರರಿಗೆ ತಿಳಿದಿಲ್ಲವೆ? ಉದಾಹರಣೆಗೆ, 20ನೇ ಶತಮಾನದ ಆದಿಯಲ್ಲಿ ಉಂಟಾದ ವಚನ ಅಧ್ಯಯನಗಳು ಪ್ರೊಟೆಸ್ಟಾಂಟ್ ಮಾದರಿಯಂತೆ ಕಂಡರೂ ವಚನಗಳ ಅಧ್ಯಯನ, ವ್ಯಾಖ್ಯಾನ ಮತ್ತು ಪ್ರಕಟನೆಗಳು ಆ ಮಾದರಿಯನ್ನು ಮೀರಿ ಬೆಳೆದವು. ಹಾಗಾಗಿ ಇವುಗಳನ್ನು ಪ್ರೊಟೆಸ್ಟಾಂಟ್ ವ್ಯಾಖ್ಯಾನಗಳಿಗೆ ಅಥವಾ **secular Christian interpretations** ಗೆ ಒಳಗಾಗಿಸುವದಕ್ಕೆ ಆಗದೆ ಪರದಾಡಿದ ರಾಷ್ಟ್ರೀಯ ವಿದ್ವಾಂಸರನ್ನು ಯಾವ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು? ಈಗಲೂ ಸಹ ಅನೇಕ ವಿದ್ವಾಂಸರು ವಚನಗಳನ್ನು ಪ್ರೊಟೆಸ್ಟಾಂಟ್ ಪರಿಧಿಯೊಳಗೆ ಅರ್ಥಮಾಡಿಕೊಳ್ಳುವುದೇ ಇಲ್ಲ. ಅವರ ವ್ಯಾಖ್ಯಾನಗಳು ವಸಾಹತು-ಪೂರ್ವ ವೀರಶೈವ/ಲಿಂಗಾಯತ ಷಟ್‌ಸ್ಥಳ, ಅನುಭಾವ ಅಥವಾ ಶೂನ್ಯ ಇತ್ಯಾದಿಗಳ ಚೌಕಟ್ಟಿನೊಳಗೆ ಇರುತ್ತವೆ.

4. ಬಾಲಗಂಗಾಧರರು ಭಾವಿಸುವ ಪ್ರಕಾರ ಭಾರತೀಯ ರಾಷ್ಟ್ರೀಯ ಚಳವಳಿ ಪ್ರೊಟೆಸ್ಟಾಂಟ್ ಧೋರಣೆಯುಳ್ಳ ಸಮಾಜ ಸುಧಾರಣೆ. ಅಂದರೆ ಸಮಾಜ ಸುಧಾರಣೆ ಚಳವಳಿಗಳು ವಸಾಹತು ಕಾಲದಲ್ಲಿ ಒಂದೇ ತೆರನಾಗಿದ್ದು ಅವು ಪಾಶ್ಚಾತ್ಯ ಮಾದರಿಗಳನ್ನು ಸದಾ ಕಾಲ, ಯಾವುದೇ ಟೀಕೆಯಿಲ್ಲದೆ ಸ್ವೀಕರಿಸಿದವು ಎಂದು ಅರ್ಥವಾಗುತ್ತದೆ ಅಥವಾ ಸ್ವೀಕರಿಸಿದರೂ ಅವುಗಳನ್ನು **derivative** ಎಂದು ತಿಳಿಯುವ ಅಪಾಯವಿರುತ್ತದೆ. ಕರ್ನಾಟಕದ ಸಂದರ್ಭದಲ್ಲಿ ಸಮಾಜ ಚಳವಳಿಯಿಂದ ಉಂಟಾದ ಸಾಮುದಾಯಿಕ ಸಂಘರ್ಷ-ಮಂಥನಗಳನ್ನು ಈ ತರಹದ ಮಾದರಿಯಿಂದ ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ವಸಾಹತು ವಿಶ್ವರೂಪವನ್ನು ನಾವು ಮರು-ಚಿಂತಿಸಬೇಕಾದರೆ ವಸಾಹತು- ರಾಷ್ಟ್ರೀಯತೆ ಎಂಬ ದ್ವಿ-ಚೌಕಟ್ಟನ್ನು ಮೀರಿ ನಾವು ಅಧ್ಯಯನ ಮಾಡಬೇಕಾಗುತ್ತದೆ.

5. ಇನ್ನು ಶಬ್ದ ಅಥವಾ ಪದಪುಂಜಗಳ ವಿಷಯ. ಸಮಾಜ ವಿಜ್ಞಾನಗಳಲ್ಲಿ ಅವುಗಳನ್ನು ಬಳಸಿರುವ ಬಗ್ಗೆ ನನಗೆ ಅಧಿಕೃತವಾಗಿ ಅಥವಾ ಅಧಿಕಾರಯುತವಾಗಿ ಹೇಳಲು ಸಾಧ್ಯವಿಲ್ಲ. ಇಷ್ಟನ್ನು ಮಾತ್ರ ಹೇಳೋದಿಕ್ಕೆ ಸಾಧ್ಯ. ಪದಪ್ರ... ಅಥವಾ ಪರಿಭಾಷೆಗಳ ಐತಿಹಾಸಿಕ ಅಧ್ಯಯನವನ್ನು ... ಕೈಗೊಳ್ಳಬೇಕಾಗುತ್ತದೆ. ಜೊತೆಗೆ ಈ ಪರಿಭಾಷೆಗಳನ್ನು ಸ... ವಿಜ್ಞಾನಗಳನ್ನು ಹೊರತುಪಡಿಸಿ ಯಾರು, ಯಾವ, ... ಕಾರಣಗಳಿಗಾಗಿ ಬಳಸಲಾಯಿತು. ಯಾತಕ್ಕಾಗಿ? ಐತಿಹಾಸಿಕ-ಸಾಮಾಜಿಕ ಸಂದರ್ಭಗಳು ಇವುಗಳ ... ಇಂಬು ನೀಡಿದವು ಎಂದು ಅಧ್ಯಯನ ಮಾಡುವ ಅ... ಇದೆ.

6. ಇವುಗಳ ಜೊತೆ ಮುಖ್ಯವಾಗಿ ಜಾನಪದ ಕ್ಷೇ... ಕ್ರೈಸ್ತ ಮಿಷನರಿಗಳು ಮತ್ತು ವಿದ್ವಾಂಸರು ಕೈಗ... ಅಧ್ಯಯನಗಳು ನಮ್ಮ ವಸಾಹತು ವಿಶ್ವರೂಪದ... ಸಂಕೀರ್ಣವಾದ ಒಳನೋಟಗಳನ್ನು ನೀಡುತ್ತವೆ. ಹಿ... ವಸಾಹತು ವಿಶ್ವರೂಪವನ್ನು ನಾವು ಆಮೂಲಾಗ್ರ... ಅರ್ಥಮಾಡಿಕೊಳ್ಳಬೇಕಾದರೆ ಜಾನಪದ ಕ್ಷೇತ್ರದಲ್ಲಿ... ಅಧ್ಯಯನಗಳ ಮರು-ಓದಿನ ಅತ್ಯವಶ್ಯಕವಿದೆ. ಪಾ... ಮೂಢನಂಬಿಕೆ, ಅಂಧ ಶ್ರದ್ಧೆ ಇತ್ಯಾದಿಗಳು ಜಾನಪದ ಕ್ಷೇ... ಯಾವ ರೀತಿಯಲ್ಲಿ ಮೂಡಿಬಂದವು ಎಂಬುದನ್ನು ಮತ್ತೆ... ಬೆಳಕಿನಲ್ಲಿ ನೋಡುವ ಅವಕಾಶ ನಮಗೆ ಒದಗ... ಈಗಾಗಲೇ ಇಂಗ್ಲಿಷ್‌ನಲ್ಲಿ ಈ ದಿಸೆಯಲ್ಲಿ ಕೆಲಸಗಳಾಗಿರು... ಗಮನಾರ್ಹ.

ನಾನು ನಂಬುವುದೇನೆಂದರೆ ವಸಾಹತೋತ್ತರ ಪರಿ... ಸಮಾಜ, ಧರ್ಮ ಮತ್ತು ಸಂಸ್ಕೃತಿಗಳನ್ನು ನಾವು ಅರ್ಥ... ಕೊಳ್ಳಬೇಕಾದರೆ ಕೇವಲ ವಸಾಹತು ಕ್ರಿಶ್ಚಿಯನ್ ಮಿಷನ... ಅಥವಾ ಪಾಶ್ಚಾತ್ಯ ಸೆಕ್ಯುಲರ್ ವಿದ್ವಾಂಸರನ್ನು ... ಪರಿಗಣಿಸುವದಕ್ಕೆ ಬರುವುದಿಲ್ಲ. ಅವರ ಜೊತೆ ... ಮಾಡಿದ ಅನೇಕ ಸ್ಥಳೀಯ ವಿದ್ವಾಂಸರ ಕೊ... ಕಾಣಿಕೆಗಳನ್ನೂ ಸಹ ನಾವು ಗಮನಿಸಬೇಕಾಗು... ಇವರುಗಳ ನಡುವೆ ಉಂಟಾದ ಬೌದ್ಧಿಕ ಸಹ... ಭಿನ್ನಾಭಿಪ್ರಾಯ, ಸಹಯೋಗ ಅಥವಾ ಸ್ವತಂತ್ರತೆ ... ಗಳನ್ನು ನಾವು ನಮ್ಮ ಅಧ್ಯಯನಕ್ಕೆ ಒಳಗಾಗಿಸ... ಬೇಕಾಗುತ್ತದೆ. ಹೀಗಾಗಿ ವಸಾಹತುಪ್ರಜ್ಞೆಯ ವಿಶ್ವರ... ಹತ್ತಾರು ತಲೆಗಳಿವೆ. ಒಂದು ತಲೆಯನ್ನು ಬೀಳಿ... ಮತ್ತೊಂದು ತಲೆಯ ದರ್ಶನವಾಗುತ್ತದೆ. ನಿರಂತರ...

● ಡಾ. ವಿಜಯಕುಮಾರ್ ಎಂ.ಬೋ...
ಮೈ...

ಮೂಗಿರಗಂಟ ನೆಗಡಿ ತರ ಕಂಡ್ಯ ಕಾವೇರಿ ಸಮಸ್ಯೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಆ ಜಯಲಲ್ತ ಬಂದಿದ್ಲಂತಲ್ಲಾ ಯಾಕ್ಲ?" ಎಂದ ...ಮಾವ ಬರಬಾರದ ನಂಟತಿ ಬಂದು ಹೋದಂತೆ ...ವ.

"ನೀರ ಕೇಳಕ್ಕೆ ಬಂದಿದ್ಲು ಕಣಮಾವ."

"ಅವುಳು ಇನ್ನಾತುಕ್ಕೆ ಬಂದಳ್ಳ" ಎಂದ ಸೀರ.

"ನೀರೇ ಇಲ್ಲದ ಕಾಲ್ದಲ್ಲಿ ನೀರ ಕೇಳಕ್ಕೆ ಬಂದಿದ್ಲು. ...ಯಂಗೆ ಬಂದಿದ್ಲು ಗೊತ್ತೆ, ಮೆಟ್ಟೂರ ಡ್ಯಾಂ ನೀರನ್ನೆಲ್ಲ ...ಮಾಡಿಕಂಡು ಬಂದಿದ್ಲು."

"ಮೆಟ್ಟೂರು ಡ್ಯಾಮು ಎಲ್ಲೈತ್ಲ?"

"ಅದು ಸೇಲಂ ಅತ್ರ ಅದೆ ಕಣಮಾವ. ನಮ್ಮ ...ಬಾಡಿ ನೀರನ್ನೆಲ್ಲ ಸಂಗ್ರಹ ಮಾಡಿಕಂಡು, ಬತ್ತ ಬ್ಯಳಿಯಕ್ಕೆ ...ಮಾಡಿಕೊಂಡಿರೊ ಡ್ಯಾಮು. ಅದಂತೂ ಅವುಳ ...ತರನೇ ಅದೆ. ಏಟು ನೀರು ಬುಟ್ರೂ ತುಂಬದಿಲ್ಲ."

"ಭಿಕ್ಷ ಮಾಡೋರ ಹಸುವೆ ಚೀಲಿದ್ದಂಗೆ ಅನ್ನು."

"ಊ ಕಣಮಾವ. ಆಗಿನ ಕಾಲ್ದಲ್ಲಿ ಅವುರವ್ವ ನಮ್ಮ ...ಮನೆಗೆ ಸಮಸ್ಯೆ ಆಗಿದ್ಲು, ಇವುಳೀಗ ನಮ್ಮ ಕರ್ನಾಟಕಕ್ಕೇ ...ಸ್ಯೆ ಆಗ್ಯವುಳೆ."

"ಅವುರವ್ವ ಯಾರ್ಲ?" ಎಂದಳು ಜುಮ್ಮಿ.

"ಅವುರವ್ವನೆಸರು ಸಂಧ್ಯ ಕಣೆ. ಮ್ಯಾಲುಕ್ವಾಟೆ ...ಂಗಾರೊಳು. ಎಸ್ಟು ಚೆನ್ನಾಗಿದ್ಲು ಅಂತೀ. ಸಾಮಾನ್ಯವಾಗಿ ...ಕಾಲ್ದಲ್ಲಿ ಚೆನ್ನಾಗಿದ್ದ ಹೆಣ್ಣುಮಕ್ಕಳ ಕರಕಂಡೋಗಿ ರಾಜನಿಗೆ ...ಸೋರು. ಆ ತರ ಈ ಸಂಧ್ಯಾ ಅರಮನೆ ಸೇರಿದ್ಲು. ...ಮಾರಾಣಿರು ಅನ್ನಂಗಿಲ್ಲ ಆಡಂಗಿಲ್ಲ, ಬಾಳ ...ಸಿಗಂಡ್ರು. ಇವುಳು ಅರಮನೆಲಿದ್ದ ಚಿನ್ನಾಭರಣನ್ನೆಲ್ಲ ...ರಾಜರಿಂದ ಈಸಗಂಡು ಮದ್ರಾಸ್ ಸೇರಿಕಂಡ್ಲು. ...ಗ ಜಯಲಲ್ತ ಅಲ್ಲಿಂದ ಬಂದು ನೀರು ಕೇಳತಾ ...ವುಳೆ. ನಮ್ಮ ಕಣ್ಣೆದುರಿಗೇ ನ್ಯಡಿತಾಯಿರೊ ಅನ್ಯಾಯ ...."

"ಜಯಲಲ್ತಾರವುನ್ನ ನಾನು ನೋಡಿದ್ದಿನಿ ಕಂಡ್ಯ" ...ದ ಸೀರ.

"ಆ ಕಾಲ್ದಲ್ಲಿ ಮೈಸೂರು ದಸರಾ ನೋಡಕ್ಕೆ ...ಗಿದ್ದಾಗ ನೋಡಿದ್ಯಾ?"

"ಮಯಿಸಾಸುರ ಮರ್ದಿನಿ ಸಿನುಮದಲ್ಲಿ ಚಾಮುಂಡಿ ...ರ್ಟ್ ಮಾಡಿದ್ದೋಳು ಅವುಳೆ ಅಂತಲ್ಲಾ."

"ಅಂಗನ್ನು ಮತ್ತೆ. ನಾನೇನೊ ನಿಜವಾಗೇ ನೋಡಿದೆ ...ಕಂಡಿದ್ದೆ."

"ಸಿನುಮದಲ್ಲಿ ಮಾಡೋರು ನಿಜವಾದೊರೆ ಅಲವೆ. ...ರು ಮಾಡಕ್ಯಾಯ್ತದ್ಲ, ನಮಿಗೇನು ಗೊತ್ತಿಲ್ಲ ಅನ್ನಂಗೆ ...ಡ್ತಿ ನೀನು."

"ಪರವಾಗಿಲವಪ್ಪ, ನೀನೂ ತಿಳಕಂಡಿದ್ದಿ."


"ತಿಳಕಳದಲ್ಲ ಕಂಡ್ಯ. ನನ್ನ ಜ್ವತೆ ಸಿನುಮಾ ನೋಡಕ್ಕೆ ...ದ್ದ ತಿಮ್ಮಪ್ಪನ ಮಗ ಚಿನ್ನ ಅಂಗಂದ. ಜಯಲಲ್ತಾರವ್ವ ...ರಾಣಿಯಂಗಿದ್ಲು ಕಂಡ್ಯ."

"ಅವುಳು ಬ್ಯಾಡ್ರ ಕಣ್ಣಪ್ಪ, ರಣಧೀರ ಕಂಠೀರವ ...ಮಾದಲ್ಲೂ ಮಾಡವುಳೆ ಕಣೊ. ಮಾತ್ರ ವಳ್ಳೆ ಹೆಂಗುಸು. ...ವುಳಂಗಲ್ಲ."

"ಇವುಳ್ಯಾಕಿಂಗಾದ್ಲು?" ಎಂದಳು ಜುಮ್ಮಿ.

"ಅಧಿಕಾರ ಸಿಕ್ಕಿದಾಗ ಯಲ್ಲಾ ಹೆಂಗುಸ್ರು ಅಂಗೆ ಕಣಕ್ಕ" ಎನ್ನುತ್ತಾ ವಾಟಿಸ್ಸೆ ಬಂದು ಕೂರುತ್ತಾ

"ಇಂದ್ರಾ ಗಾಂಧಿ ಎಷ್ಟು ವಳ್ಳೆ ಹೆಂಗಸಾಗಿದ್ಲು, ಅವುಳ ವಳ್ಳೆತನ ನೋಡಿ ಲಾಲ್‌ಬಾದ್ದೂರ್ ಶಾಸ್ತ್ರೀನೇ ಕರದು ಮಂತ್ರಿ ಮಾಡಿದ್ರು. ಅಮ್ಯಾಲ್ಯಂಗಾದ್ಲೂ ಅಂಗೆ ಹಿಟ್ಲರ್ ತರ ಆಗಿ, ದೇಶದ ಮುದುಕರನ್ನೆಲ್ಲ ಜೈಲಿಗಾಕಿದ್ಲು. ಆ ಬುಟ್ಟೊ ಮಗಳು ಬೆನಜೀರಿ ಅಧಿಕಾರ ಸಿಕ್ಕಿದೇಟಿಗೆ ನಮ್ಮ ಯಂಗೆ ಬೈಯತಿದ್ಲು ಗೊತ್ತೇನಕ್ಕ? ಇನ್ನು ನಮ್ಮ ಮಾಯಾವತಿ ಬಡುವುರಿಗೆ ಮನೆ ಕಟ್ಟದು ಬುಟ್ಟು, ಅವುಳ ಪ್ರತಿಮೆ ಮಾಡಿ ನಿಲ್ಲಿಸಿದ್ಲು, ಇನ್ನು ಬಂಗಾಳದ ಮಮತಕ್ಕ ಥೇಟ್ ನಿನ್ನಂಗೆ ಇದ್ಲು. ಯಾವಾಗ ಬಂಗಾಳದ ಮುಖ್ಯಮಂತ್ರಿಯಾದ್ಲೊ, ಅವುತ್ತಿಂದ ಎಡೂರಪ್ಪನ ತಂಗಿತರ ಆಗ್ಯವುಳೆ."



"ಆ ತರ ಆಗಿದಳೇ?"

"ಆ ತರ ಅಂದ್ರೆ ಭ್ರಷ್ಟ ಕ್ಯಲಸ ಮಾಡಿಲ್ಲ. ಆಡಳಿತ ಮಾಡದ ಬುಟ್ಟು ಇನ್ನು ಯಲ್ಲಾನು ಮಾಡ್ತ ಅವುಳೆ. ಪೇಪರ್‌ನೋರು ಸರಿಯಾಗಿ ಬರಿಬೇಕು ಅಂತಳೆ. ಆ ಪೇಪರ್‌ನವು ತಮಿಗೆ ತಿಳದದ್ದ ಬರಿತವೇ ವರತು ನೀನೇಳಿದಂಗೆ ಬರದವೇನಕ್ಕ. ಅದ್ನೆ ತಿಳಕಂಡಿಲ್ಲ ಇವುಳು."

"ಯಲ್ಲ ಹೆಂಗುಸ್ರು ಅಂಗಿಲ್ಲ ಕಣೊ. ಡೆಲ್ಲಿ ಮುಖ್ಯಮಂತ್ರಿಯಾಗಿರೋಳು ಯಂಗವುಳೆ ಅಂಗೆ ನಮ್ಮ ಸಿದ್ದಮ್ಮನಂಗವುಳಪ್ಪ."

"ನಿಜ ಕಣೊ ಉಗ್ರಿ. ಥೇಟ್ ಸಿದ್ದಮ್ಮನ ತರನೆ ಅವುಳೆ. ಯಾಕೆ ಅಂದ್ರೆ ಸ್ವಲುಪ ವಿಜಾಗ್ಯದೆ. ಆದ್ರೆ ಈ ಪ್ರಾಯದ ಹೆಂಗಸರೇ ಸಮಸ್ಯೆ."

"ಈ ಜಯಲಲ್ತನ್ನ ನೋಡಿದ್ರೆ ಮುದುಕಿಯಾದ್ರು ಬುದ್ಧಿ ಬರದಿಲ್ಲ ಬುಡು."

"ಕಾವೇರಿ ನೀರಿಗೋಸ್ಕರ ಅವುಳಂಗವುಳೆ ಕಂಡ್ಯ. ಇಲ್ದಿದ್ರೆ ಅವುಳಿಗೂ ನಮಿಗೂ ಯಾವ ಸಮಂಧ?" ಎಂದ ಕಾಳಮಾವ.

"ಅವುಳ ನಮ್ಮ ಸಮಂಧ ಯಾವತ್ತಿಗೂ ಇರತದೆ ದೊಡಪ್ಪಾ. ಅವುಳು ಬೆಳೆದುದ್ದು ನಮ್ಮ ಮೈಸೂರು ಮಾರಾಜರು ಕೊಟ್ಟ ಬಂಗ್ಲೆಲಿ. ಅವುಳ ಬಟ್ಟೆ ಒಡವೆಯೆಲ್ಲ ಮಾರಾಜುರು ಕೊಟ್ಟಿದ್ದು. ಅಂದ್ರೆ ನಮ್ಮದು. ಆದ್ರಿಂದ ಅವುಳ ನಮ್ಮ ಸಮಂಧ ಇವತ್ತಿಗೇ ಮುಗಿಯದಿಲ್ಲ ಗೊತ್ತೆ."

"ಅವುಳಿರಗಂಟ ಸಮಂಧನೂ ಮುಗಿಯದಿಲ್ಲ, ಸಮಸ್ಯೆನೂ ಮುಗಿಯದಿಲ್ಲ ಕಣೊ ವಾಟಿಸ್ಸೆ."

"ಎಜ್ಜಾಕ್ಟ್ಲಿ ಕರಟ್ ಕಣೊ ಉಗ್ರಿ. ಯಾಕಪ್ಪ ಅಂದ್ರೇ, ಇನ್ನು ಮುಂದೆ ಮಳೆಗಾಲ ಸರಿಯಾಗಿ ನ್ಯಡಿಯದಿಲ್ಲ, ಅಂಗಾಗಿ ಕನ್ನಂಬಾಡಿ ತುಂಬದಿಲ್ಲ, ಆದ್ರಿಂದ ಮೂಗಿರಗಂಟ ನೆಗಡಿ ಅನ್ನಂಗಾಯ್ತದೆ."

"ಪೈರು ವಡಿಗೆ ಬಂದಾಗ ಯಲ್ಲಾ ವಣಗೋಯ್ತಾ ಅದೆ. ಕ್ಯರೇಲಿ ನೀರಿಲ್ಲ, ಬರಗಾಲಾಗ್ಲೆ ಬಲಗಾಲಿಕ್ಯದೆ. ಕುಡಿಯೋ ನೀರಿಗ್ಯಂಗೇ ಅಂತ ಯೋಚನೆ ಮಾಡ್ತಾ ಕುಂತಿರುವಾಗ ಇವುಳು ಬತ್ತಕೆ ನೀರು ಕೊಡಿ ಅಂತಳಲ್ಲಾ ಯಂಗೇ."

"ಕ್ಯಟ್ಟಕಾಲಾಗ್ಲೆ ಬಂದದೆ ದ್ವಡಪ್ಪ, ಸರ್ಕಾರ ಸತ್ತು ಭಾಳ ದಿನಾಗ್ಯದೆ. ಯಲ್ಲಾ ಪಾರ್ಟಿಯೋರು ಯಲಕ್ಷನ್ನಿಗೆ ಅಂತ ಸಮೀಕ್ಷೆ ಮಾಡ್ತ ಅವುರೆ."

"ಅಲ್ಲ, ಬರಗಾಲ ಬಂದ್ರೆ ಏನು ಮಾಡಬೇಕು ಅಂತ ಸಮೀಕ್ಷೆ ಮಾಡದು ಬುಟ್ಟು ಗೆಲ್ತಿವೊ, ಇಲ್ಲವೊ ಅನ್ನೊ ಸಮೀಕ್ಷೆ ಮಾಡಕ್ಕೆ ವಂಟವುರಲ್ಲಾ, ನಿಜವಾಗ್ಲೂ ಇವುರು ಕಷ್ಟ ಕೇಳ್ತರೇನಯ್ಯಾ."

"ಅದೇನೇ ಆದ್ರು ಮುಂದೆ ಬರೊ ಸರ್ಕಾರಕ್ಕೆ ಭಾಳ ಕಷ್ಟ ಕಣೊ ಉಗ್ರಿ. ಈ ಬಿಜೆಪಿ ಬಡ್ಡಿಮಕ್ಳು ಏನೇನು ಹಾಳು ಮಾಡ್ಯವುರೆ ಅಂತೀ. ಇಡೀ ಕರ್ನಾಟಕದ ಆಡಳಿತನೇ ಹಾಳು ಮಾಡಿ ಅದ್ವಾನ ಮಾಡಿ ಬಿಸಾಕ್ಯವುರೆ."

"ಎಲ್ಲಿ ಬಿಸಾಕಿದ್ದರೊ. ಇನ್ನೂ ಹಾಳು ಮಾಡ್ತ ಕುಂತವುರೆ. ಆದ್ರು ಎಡೂರಪ್ಪಂದು ಜೋರಾಗ್ಯದೆ."

"ಅವುನೇನೊ ಕೂಗ್ತ ಇದ್ದನಂತಲ್ಲಾ ಏನ್ಲ ಅದು."

"ಅದಾ, ನೀವೆಲ್ಲಿರತಿರೊ ಅಲ್ಲಿ ನಾವಿರತಿವಿ ಅಂತ ದೊಡಪ್ಪ"

"ಯಾರು?"

"ಯಾರಪ್ಪ, ಅವುನಿಗೇ ಗೊತ್ತು. ಅಂತೂ ನೀವೆಲ್ಲಿರತೀರೋ ನಾನು ಅಲ್ಲಿರತೀನಿ ಅಂತ ಯಲ್ಲಾ ಕಡೆ ಪ್ಲೆಕ್ಸಾಕ್ಯವುನೆ."

"ರಾಜ್‌ಕುಮಾರ್‌ದೊಂದಾಡಿತ್ತು ಕಣೊ."

"ಅದು ಪ್ರೇಮಿಗಳ ಹಾಡು ಕಣೊ ಉಗ್ರಿ. ರಾಜ್‌ಕುಮಾರ್ ಸರಿತಳಿಗೆ ಹೇಳಿದ ಹಾಡದು. ಆದರ ಸಾಲ ತಗಂಡವುರೆ ಅಂದ್ರೆ, ಎಡೂರಪ್ಪನ ಮರ್ಮ ಏನು ಅಂತ ಗೊತ್ತಾಯ್ತಾಯಿಲ್ಲ, ಯಾರಿದ್ದಲ್ಲಿ ಇವುನಿರತನೇ ಇವುನಿದ್ದಲ್ಲಿ ಯಾರಿರತರೇ ಅಂತ ಡಿಸೆಂಬರ್ ತಿಂಗಳಿಗೆ ಗೊತ್ತಾಯ್ತದೆ."

"ಅದ್ಯಂಗೆ ಗೊತ್ತಾದತ್ಲ?"

"ಯಂಗೆ ಅಂದ್ರೆ ಹೊಸ ಪಾರ್ಟಿ ಮಾಡ್ತನೆ ಕಣಕ್ಕ, ಅದೂ ಹಾವೇರಿಲಿ."

"ಹಾವೇರಿಲಿ ಯಾಕೆ ಮಾಡ್ತನೆ? ಇಲ್ಲೆಲ್ಲ್ಯಾರ ಮಾಡಕ್ಯಾಯಿತ್ತರಲಿಲ್ಲವೆ?" ಎಂದ ಸೀರ.

"ಹಾವೇರಿ ತುಂಬಾ ಸಿಂಬಾಲಿಕ್ಯಾಗಿರೊ ಊರು ಚಿಗಪ್ಪ ಆ ಊರು ಬುಟ್ಟು ಹನ್ನೆರಡು ಕಿಲೋಮೀಟರ್ ದೂರದಲ್ಲಿ ಅಂದ್ರೆ ಹುಬ್ಬಳ್ಳಿ ರೋಡಲ್ಲಿರೊ ಗುಡ್ಡದ ಮ್ಯಾಲೆ ಡಿ.ಸಿ. ಆಫೀಸದೆ. ಈ ಕಡೆ ಪಶ್ಚಿಮಕ್ಕೆ ಎಂಟು ಕಿಲೋಮೀಟರ್ ದೂರದಲ್ಲಿ ಎಸ್ಪಿ ಆಫೀಸದೆ. ಆ ಊರಿಗೂ ಸರ್ಕಾರದ ಆಡಳತಕೂ ಯಾವ ಸಮಂಧನೂ ಇಲ್ಲ, ಒಂಥರಾ ಹೇಳೋರು ಕೇಳೋರು ಇಲ್ಲದ ಊರಿನ ತರ ಕಾಣ್ತದೆ. ಅಂತ ಊರಲ್ಲಿ ಕೆಜೆಪಿ ಸ್ಥಾಪಿಸಿದ್ರೆ ಯಂಗೇ ಅಂತ ಎಡೂರಪ್ಪನಿಗೆ ಕಾಣಿಸಿದ್ರೆ ಆಶ್ಚರ್ಯೇನೂ."

"ಆ ರಾಮುಲು ಒಂದು ಪಾರ್ಟಿ ಮಾಡಿದನಲ್ಲ ಏನಾಯಿತ್ಲ?"

"ಅಯ್ಯೋ, ಅವುನಕತೆ ಬ್ಯಾಡ. ಲಂಕೇಶ್ ಪತ್ರಿಕೆಯಿಂದ ಇಬ್ಬರು ಪತ್ರಕರ್ತರು ಅವುನತ್ರಕೋಗಿ ಸೇರಿಕೊಂಡು, ಕೊಡಬಾರದ ಸಲಹೆ ಕೊಟ್ರು. ಅದ ಸೀರಿಯಸ್ಸಾಗಿ ತಗಂಡು, ಆ ಪೋಲಿ ಮುಂಡೆದು, ಇಡೀ ಕರ್ನಾಟಕವ ಗರಗರನೆ ತಿರುಗಿ, ಬರಬರನೆ ಬಂದು ಬಳ್ಳಾರಿ ಜಾಲಿಮರದಡಿ ಕುಂತಗಂಡು ಇನ್ನು ಸುಧಾರಿಸಿಗತ್ತಾ ಅವುನೆ. ಯಾಕಂದ್ರೆ ಅವುನ ಲೀಡ್ರು ಜನಾರ್ದನ ರೆಡ್ಡಿಗೆ ಇನ್ನೂ ಜಾಮೀನು ಸಿಗಲಿಲ್ಲ, ಈ ಕಡೆ ಎಡೂರಪ್ಪ ಸುಂಟ್ರುಗಾಳಿ ತರ ವಂಟವುನೆ. ರಾಮುಲು ಕಡೆ ವಂಟೋರ್ಯಲ್ಲ ಎಡೂರಪ್ಪನ ಕಡಿಕೆ ತಿರಿಕಂಡವುರೆ. ಅಂಗಾಗಿ ರಾಮುಲು ವನವಾಸ ಮುಗಿಸಿಗಂಡು ಊರಿಗೋಗಂಗಾಗ್ಯವನೆ. ಯಾಕಪ್ಪ ಅಂದ್ರೆ ಇದು ಪಾಲಿಟಿಕ್ಸು, ಗಣೆಲೂಟಿ ಅಲ್ಲ. ಆದ್ರು ಲೂಟಿ ಮಾಡಿದ ಹಣ [illegible]ಬೇಕಾದ್ರೆ ಪಾಲಿಟಿಕ್ಸ್ ಮಾಡ್ಲೇಬೇಕು. ಬುಡಂಗಿಲ್ಲ."

"!?"

[illegible] ಇದೆ [illegible] ಇಲ್ಲ

ನನ್ನ ಕರುಳಿಗೆ ತೋಚಿದ್ದನ್ನು ಹೇಳಿಬಿಡಬೇಕು. ನಾನು ಅನುಮಾನದಿಂದಲೇ `gut feeling' ಎನ್ನುವುದನ್ನು 'ಕರುಳಿಗೆ ತೋಚಿದ್ದನ್ನು' ಎಂದು ಬರೆಯುತ್ತಿದ್ದೇನೆ. ಇದು ಹೇಗಿದೆ ನೋಡಿ. ಸಿನಿಮಾ ಹಾಡುಗಳನ್ನು ಕೇಳಲು ಅನೇಕರಿಗೆ ಇಷ್ಟ; ಮನ್ನಾಡೇ, ರಫಿ, ಲತಾ ಮಂಗೇಶ್ಕರ್ ತರಹದವರು ಹಾಡಿದಾಗ ಸಿನಿಮಾ ಹಾಡು ಉತ್ತಮ ...ರಿಯ ಹೊಸತನ, ಮುಗ್ಧತೆ ಮತ್ತು ಇಂಪನ್ನು ತೋರುತ್ತದೆ. ಆದರೆ ಬಹುಪಾಲು ಸಿನಿಮಾ ಹಾಡುಗಳು ಬಹು ...ಟಾದ, ಪಾಲಿಶ್ ಮಾಡಿದ, ಹಣದ ಸದ್ದನ್ನು ಮುಚ್ಚಿಕೊಳ್ಳಲಾರದ ಕೃತಕ ಸದ್ದುಗಳು. ಅವುಗಳ ಹೊಸತನ ...ಲವೇ ದಿನಗಳಲ್ಲಿ ಮಾಸುತ್ತದೆ; ಎಲ್ಲವೂ ಯಾಂತ್ರಿಕವಾಗಿ ...ಳಿಸತೊಡಗುತ್ತವೆ. ಇದನ್ನೇ ಉತ್ತಮ ಬರಹ, ಕೆಟ್ಟ ಬರಹಕ್ಕೆ ಅನ್ವಯಿಸಿ ಹೇಳಬಹುದು. ಒಳ್ಳೆಯ [illegible] ತಿದ್ದಿ, ಗಿಲೀಟ್ ಮಾಡಿ, ರಂಜಿಸಲು ...ಬರೆಯುವುದಿಲ್ಲ; ಆತನ ಬರವಣಿಗೆ ಅವನ ...ಜವಾದ ಸ್ಪಂದನಕ್ಕೆ, ತಳಮಳಕ್ಕೆ ಹತ್ತಿರ ಇರುತ್ತದೆ. ಆಕರ್ಷಕ ...ಮಾತಿಗೆ ಬದಲು ಸಮರ್ಪಕ ಮಾತನ್ನು ಬಳಸಿರುತ್ತಾನೆ; ...ಪ್ರದರ್ಶನಕ್ಕೆ ಮಾತಾಡುವ ಬದಲು ಅನಿವಾರ್ಯವಾಗಿ ...ಬರೆದಿರುತ್ತಾನೆ.



ಬರೆಯುವುದೇ ಒಂದು ರೀತಿಯ ಪ್ರದರ್ಶನ ಎನ್ನುವುದು ನಿಜವಿರಬಹುದಾದರೂ ಬರೆಯುವ ಪ್ರದರ್ಶನ ...ವಿರುದ್ಧ, ಬರೆಯುವ ಕೃತಕತೆಯ ವಿರುದ್ಧ ಪ್ರತಿಯೊಬ್ಬ ಉತ್ತಮ ಲೇಖಕನೂ ಚಡಪಡಿಸುತ್ತಿರುತ್ತಾನೆ; ಬರೆಯುವುದು ...ಸಹಜವಾಗುವಂತೆ, ಓದುಗರಿಗೆ ತಲುಪುವಂತೆ ನೋಡಿಕೊಳ್ಳುತ್ತಾನೆ. ಇರಲಿ.

ಇದೆಲ್ಲ ಹೇಳುತ್ತಿರುವಾಗಲೇ ಇದಕ್ಕಿಂತ ದೊಡ್ಡ ಸಮಸ್ಯೆಯೊಂದು ನನ್ನನ್ನು ಕಾಡುತ್ತಿದೆ. ಸಿಂಗಪುರ ಎನ್ನುವ ...ದೇಶವನ್ನು ನೋಡಿ. ನಮ್ಮ ಬೆಂಗಳೂರಿಗಿಂತ ಚಿಕ್ಕದಾಗಿದ್ದರೂ ಒಂದು ದೇಶ ಎಂದು ಕರೆದುಕೊಳ್ಳುವ, ಮಲೇಶಿಯಾದ ...ಕೋಳಿಗಳನ್ನು ಸಾಕಿ ಸದೆ ಅದರಿಂದ ಬೇರೆಯಾಗಿ ಒಂದು ರೀತಿಯಲ್ಲಿ ಸಮೃದ್ಧಿಯಾಗಿರುವ 'ದೇಶ' ಇದು.



ತೈಲವನ್ನು ಶುದ್ಧೀಕರಿಸುವ ವೃತ್ತಿ, ತಾಂತ್ರಿಕವಾಗಿ ನೆರೆದೇಶಗಳಿಗೆ ಸಹಾಯ ಒದಗಿಸುವ ವೃತ್ತಿ, ವ್ಯಾಪಾರ, ಕೈಗಾರಿಕೆ ಈ ದೇಶದ ಮುಖ್ಯ ಕಾಳಜಿಗಳು. ಹತ್ತು ಸಾವಿರ ಡಾಲರ್‌ಗಳ ಸರಾಸರಿ ಆದಾಯವಿರುವ ಈ ದೇಶ ಇಡೀ ಏಷ್ಯಾದಲ್ಲೇ ಶ್ರೀಮಂತವಾದದ್ದು; ಇಲ್ಲಿಯ ಪಾರ್ಕು, ಬಜಾರ್, ಶಾಲೆ, ಕಾಲೇಜು, ಥಿಯೇಟರ್, ಈಜುಕೊಳ-ಎಲ್ಲವೂ ಸಮರ್ಪಕವಾಗಿವೆ. ಇಲ್ಲಿ ಭ್ರಷ್ಟರಾದವರಿಗೆ, ಗಲೀಜು ಮಾಡುವವರಿಗೆ, ಸರ್ಕಾರವನ್ನು ಖಂಡಿಸುವವರಿಗೆ ಉಗ್ರ ಶಿಕ್ಷೆ ಕೊಡಲಾಗುತ್ತದೆ. ಇಲ್ಲಿಯ ಮರಗಿಡ, ಕೆರೆ, ಸರೋವರ, ಈಜುಕೊಳ, ಪಾರ್ಕು, ಅವೆನ್ಯೂಗಳು-ಎಲ್ಲವೂ ಒಂದು ಸರ್ಕಾರ ಮತ್ತು ಜನತೆ ಮನಸ್ಸು ಮಾಡಿದರೆ ಏನೇನು ರೂಪಿಸಬಹುದು ಎನ್ನುವುದಕ್ಕೆ ನಿದರ್ಶನದಂತಿವೆ.

ಆದರೆ ಇಲ್ಲಿ ಒಬ್ಬ ಕವಿ, ನಾಟಕಕಾರ, ಸಂಗೀತಗಾರ ಇಲ್ಲ. ಇಲ್ಲಿಯ ಸೂಕ್ಷ್ಮಜ್ಞರಾದ ಜನ ಅವಕಾಶ ಸಿಕ್ಕೊಡನೆ ದೇಶಬಿಟ್ಟು ಹೊರಟುಹೋಗುತ್ತಾರೆ. ಸಿಂಗಪುರದ ಗಿಲೀಟು ಪ್ರವಾಸಿಗರನ್ನು ಮುದಗೊಳಿಸುತ್ತದೆ; ಆದರೆ ಅಲ್ಲಿಯೇ ಇರುವವರಿಗೆ ಅಸಹ್ಯವೆನ್ನಿಸುತ್ತಿದೆ.

ಯಾಕೆ? ಏನಾಗಿದೆ? ನೀವು ವರ್ಷಗಟ್ಟಲೆ ಒಂದು ಆಸ್ಪತ್ರೆಯಲ್ಲಿ ಅಥವಾ ಪ್ರವಾಸಿಮಂದಿರದಲ್ಲಿ ವಾಸ ಮಾಡುವ ಕಷ್ಟವನ್ನು ಕಲ್ಪಿಸಿಕೊಳ್ಳಿ. ನಮ್ಮ ಊರು, ಮನೆ, ರಸ್ತೆ, ಗೆಳೆಯರು-ಎಲ್ಲವೂ ಸೇರಿ ನಮ್ಮ ವಾಸಸ್ಥಳವಾಗಿರುತ್ತದೆ. ಇಲ್ಲಿಯ ಕಾಡು, ಗದ್ದೆ, ಕಾಲುದಾರಿ, ಹೆದ್ದಾರಿ ಎಲ್ಲ ಸೇರಿದರೆ ದೇಶ, ಇಲ್ಲದಿದ್ದರೆ ಅದೊಂದು ಕೆಟ್ಟ ಸ್ಥಳ.

ಸಿಂಗಪುರ ಒಂದೆರಡು ದಿನ ನೋಡಲು ಚೆಂದ. ನಮ್ಮ ವಾಸಸ್ಥಳ ನಮ್ಮ ಜೀವಕ್ಕೆ ಹೊಸಹೊಸ ಸ್ಫೂರ್ತಿ ಕೊಡುತ್ತಿರುತ್ತದೆ... ಹೀಗೆನ್ನುವಾಗ ನಾನು ಇಂಗ್ಲೆಂಡಿನ 'ಹಾವಾರ್ಡ್ಸ್ ಎಂಡ್' ಎಂಬ ಕಾದಂಬರಿ ಓದಿದೆ. ಹಾವಾರ್ಡ್ಸ್ ಎಂಡ್ ಎಂಬುದು ಒಂದು ಬೃಹತ್ ಮನೆ-ನೂರಾರು ವರ್ಷದ ಇತಿಹಾಸವುಳ್ಳ ತಾತಮುತ್ತಾತಂದಿರು ಇದ್ದ ಮನೆ...

ನಮ್ಮ ಜೀವಿತಸ್ಥಳದ ವೈಶಿಷ್ಟ್ಯಗಳ ಬಗ್ಗೆ ಯೋಚಿಸಿ. ಇಲ್ಲಿ ನಾವು ಯಾಕೆ ಇದ್ದೇವೆ ಎಂದು ಕೇಳಿಕೊಳ್ಳಿ.

ಹಾಗೆಯೇ ಜಾನಪದ ಹಾಡು; ಸಿನಿಮಾ ಹಾಡು; ಒಳ್ಳೆಯ ಬರವಣಿಗೆ, ಕೆಟ್ಟ ಬರವಣಿಗೆ.

ನಾಳೆ 'ಮಾರ್ಚ್ 8 ನನ್ನ ಹುಟ್ಟುಹಬ್ಬ' ಇದನ್ನು ನಾನು ಹೆಮ್ಮೆಯಿಂದಾಗಲಿ, ನಾನು ಹುಟ್ಟಿದ ಬಹುಮುಖ್ಯ ದಿನವೆಂದಾಗಲಿ ಹೇಳುತ್ತಿಲ್ಲ, ಅದನ್ನು ನೆನೆಸಿಕೊಂಡು ವಿಚಿತ್ರ ಕಂಪನವಾದದ್ದರಿಂದ, ಭಯವಾದದ್ದರಿಂದ ಹೇಳುತ್ತಿದ್ದೇನೆ.

• ಮಾರ್ಚ್ 18, 1998

ಯಂತ್ರಗಳಿಗೂ ಜಾತಿಯ ಸಂಕೋಲೆ

70 ರ ದಶಕದ ಮಾತು. ನಾನು ಒಂದು ವಿಡಂಬನಾ ಲೇಖನ ಬರೆದಿದ್ದೆ. ಅದು ಯಾವ ವ್ಯಕ್ತಿಯನ್ನೂ ಕುರಿತದ್ದಲ್ಲ. ಬರೆಯುವಾಗ ನನ್ನ ಮನಸ್ಸಿನಲ್ಲಿ ಅಂತಹ ಯಾವುದೇ ಭಾವನೆಯೂ ಇರಲಿಲ್ಲ. ಇಂಜಿನಿಯರಿಂಗ್ ಶಿಕ್ಷಣದಲ್ಲಿನ ಅವ್ಯವಸ್ಥೆಯ ಕುರಿತದ್ದು ಅದು. ಖಾಸಗಿ ಕಾಲೇಜುಗಳಲ್ಲಿ ಅಧಿಕಾರ ದುರುಪಯೋಗವಾಗುತ್ತಿರುವುದನ್ನು ವಿಡಂಬಿಸಿದ್ದೆ. ಅದಕ್ಕಾಗಿ ಖಾಸಗಿ ವಿದ್ಯಾಸಂಸ್ಥೆಯ ಸೆಕ್ರೆಟರಿ ಹಾಗೂ ಅವರ ಮಗನನ್ನು ಸಂಕೇತವಾಗಿ ಬಳಸಿಕೊಂಡಿದ್ದೆ. ಈ ಲೇಖನ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟ ಆಯಿತು. ಕಾಕತಾಳೀಯವಾಗಿ ನಮ್ಮ ಸಂಸ್ಥೆಯ ಸೆಕ್ರೆಟರಿಯವರ ಮಗ ನಮ್ಮ ಕಾಲೇಜಿನ ವಿದ್ಯಾರ್ಥಿಯಾಗಿದ್ದ. ಸೆಕ್ರೆಟರಿಯವರೂ ಕೆಟ್ಟವರಲ್ಲ. ಸಂಭಾವಿತರು, ವಿದ್ಯಾವಂತರು. ವಕೀಲಿ ವೃತ್ತಿ ಮಾಡುತ್ತಿದ್ದರು. ಲೇಖನವನ್ನು ಹೇಗೆ ಅರ್ಥೈಸಿದರೋ ಅರಿಯೆ. ನನ್ನ ಬಗೆಗೆ ಅಸಮಾಧಾನಗೊಂಡರು. ಆಡಳಿತ ಮಂಡಳಿಯ ಸಭೆಯಲ್ಲಿ ಈ ವಿಷಯ ತರಲು ತೀರ್ಮಾನಿಸಿಕೊಂಡರು. ನನ್ನ ಮೇಲೆ ಅಶಿಸ್ತಿನ ಆರೋಪ ಹೊರಿಸಿ ಶಿಸ್ತುಕ್ರಮ ಜರುಗಿಸುವ ಪ್ರಸ್ತಾವನೆ ಸಭೆಯ ವಿಷಯ ಸೂಚಿಯಲ್ಲಿ ಇತ್ತು. ಇದರ ಸುಳಿವು ನನಗೆ ಸಿಕ್ಕಿತು. ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಪಿ. ಮಲ್ಲಯ್ಯ ಎಂಬುವವರು ಇದ್ದರು. ಮೃದು ಮಾತಿನ ಸಹೃದಯರಾದ ಅವರು ಕುವೆಂಪು ಅವರ ಸಹಪಾಠಿ. ಅವರಿಗೆ ವಿಷಯದ ವಿವರ ನೀಡಲು ಬಯಸಿದೆ. ಅವರನ್ನು ಕಂಡು ಸಂಪೂರ್ಣ ಮಾಹಿತಿ ನೀಡಿದೆ. ಎಲ್ಲವನ್ನೂ ಸಮಾಧಾನದಿಂದ ಆಲಿಸಿದ ಅವರು ನೋವಿನಿಂದ ಹೇಳಿದರು- "ಕೇಶವಮೂರ್ತಿಯವರೆ ನೀವು ಯಾಕೆ ಸೆಕ್ರೆಟರಿ ಮಗ ಅಂತ ಬರೆಯೋಕೆ ಹೋದ್ರಿ? ಅಧ್ಯಕ್ಷರ ಮಗ ಅಂತ ಬರೀಬಾರದಿತ್ತಾ?"

ಈ ಘಟನೆ ಈಗ ನೆನಪಾಗಲು ಕಾರಣ ಇದೆ.

'ಅಯ್ಯರ್' ಸ್ಪ್ಲೆಂಡರ್ ಬೈಕು ತಮಿಳುನಾಡಿನಲ್ಲಿ ಬಿರುಗಾಳಿ ಎಬ್ಬಿಸಿದೆಯಂತೆ. ಮಾರಾಟದ ಹೆಚ್ಚಳದಲ್ಲಲ್ಲ, 'ಅಯ್ಯರ್' ಹೆಸರಿನಿಂದ!

ಅದು ಏನಾಗಿತ್ತು ಅಂದರೆ ಜಾಹೀರಾತು ಇಲ್ಲದೆ ವ್ಯವಹಾರ ಇಲ್ಲವಲ್ಲ. ಸ್ಪ್ಲೆಂಡರ್ ಬೈಕ್ ಕಂಪನಿಯವರು ಒಂದು ಏಜೆನ್ಸಿಗೆ ಅದನ್ನು ವಹಿಸಿತ್ತಂತೆ.

ಹೇಗಿತ್ತು ಅದರ ಜಾಹೀರಾತು?

ತಂದೆ ಮಗಳು ಒಂದೇ ಬೈಕ್‌ನಲ್ಲಿ ಸಂತೋಷದಿಂದ ಸವಾರಿ ಮಾಡುತ್ತಿರುವ ಚಿತ್ರ.

ತಂದೆಯ ಹೆಸರು: ಶಿವರಾಮ ಅಯ್ಯರ್.

ಮಗಳ ಹೆಸರು: ಸೌಮ್ಯ ಅಯ್ಯರ್.

ಎಲ್ಲಾ ಅಯ್ಯರೆ!

ಅಯ್ಯರ್ ಮೇಲಿದ್ದ ಅಯ್ಯರ್‌ಗಳು!


ಇದು ಕೊಯಮತ್ತೂರಿನ ಬ್ರಾಹ್ಮಣ ಯುವ ಸಂಘಟನೆಯ ಆಕ್ರೋಶಕ್ಕೆ ಗುರಿಯಾಗಿದೆಯಂತೆ!

ಒಂದು ಯಃಕಶ್ಚಿತ್ ಯಂತ್ರಕ್ಕೆ ಪವಿತ್ರವಾದ 'ಅಯ್ಯರ್' ಹೆಸರು ಇಟ್ಟಿರುವುದು ಅದರ ಕೋಪಕ್ಕೆ ಕಾರಣ ಆಗಿದೆಯಂತೆ. 'ಅಯ್ಯರ್' ಎಂಬುದು ಬ್ರಾಹ್ಮಣ ಸಮಾಜದ ಒಂದು ಅಂಗ. ಅವರನ್ನು ಕೀಳಾಗಿ ಕಂಡು ಅವಮಾನ ಮಾಡಲೆಂದೇ ಈ ರೀತಿ ಮಾಡಲಾಗುತ್ತಿದೆ ಎಂದು ಸಂಬಂಧಿಸಿದವರ ಮೇಲೆ ದೂರು ದಾಖಲಿಸಿದ್ದಾರಂತೆ. ಕಂಪನಿಯವರು 'ಯಾರನ್ನೂ ಅವಮಾನಪಡಿಸುವ ಉದ್ದೇಶ ಖಂಡಿತ ನಮಗೆ ಇಲ್ಲ. ಅಯ್ಯರ್ ಎಂಬುದು ತಮಿಳುನಾಡಿನಲ್ಲಿ ಜನಪ್ರಿಯ ಸರ್‌ನೇಮ್ ಆಗಿದೆ. ಅದಕ್ಕಾಗಿ ಇಲ್ಲಿ ಅದನ್ನು ಬಳಸಿದ್ದೇವೆ. ಅದೇ ಕರ್ನಾಟಕದಲ್ಲಿ 'ಪಾಟೀಲ' ಎಂದೂ, ಗುಜರಾತಿನಲ್ಲಿ 'ಪಟೇಲ' ಎಂದೂ ಹೆಸರಿಸಿದ್ದೇವೆ. ಪ್ರಾದೇಶಿಕವಾಗಿ ಜನಪ್ರಿಯವಾಗಿರುವ ಹೆಸರನ್ನು ಇದಕ್ಕೆ ಇಟ್ಟಿದ್ದೇವೆ ಅಷ್ಟೆ' ಎಂದೆಲ್ಲ ಗೋಳಾಡಿದರೂ ಅವರು ಕೇಳುವ ಸ್ಥಿತಿಯಲ್ಲಿ ಇಲ್ಲವಂತೆ.

ನಮ್ಮ ಅಧ್ಯಕ್ಷರಂತೆ 'ಅವರ ಜಾತಿ ಹೆಸರು ಯಾಕ್ರಿ ಇಡುವುದಕ್ಕೆ ಹೋದಿರಿ? ನಮ್ಮ ಜಾತಿಯ ಹೆಸರನ್ನು ಇಡ್ರಿ' ಅನ್ನುವ ಭಾವನೆಯ ಜಾತಿಗಳು ಇರಬಹುದಾ ಎಂದು ಯೋಚಿಸಿದಾಗ... 'ಹೊಲೆಯರ್,' 'ಮಾದಿಗರ್' ಇಂತಹ ಹೆಸರುಗಳನ್ನು ಇಟ್ಟರೆ ಹೇಗೆ... ಸ್ಪ್ಲೆಂಡರ್ ಬೈಕಿನ ಬೇಡಿಕೆ ದಿಢೀರ್ ಕುಸಿತ ಕಾಣಬಹುದಾ... ಯಂತ್ರಗಳಿಗೂ ಜಾತಿಯ ಸಂಕೋಲೆ ಇರುತ್ತೆ!


ಒಂದು ಆಧುನಿಕ (ಅ)ನೀತಿ!

ಮಾಧ್ಯಮದವರಿಗೆ ಇದು ಒಂದು ಚಟವೇ ಇರಬಹುದು; ಹೀಗೆಲ್ಲ ಬರೆದು ವಿಕೃತ ಸಂತೋಷ ಅನುಭವಿಸುವ ಇರಾದೆಯೂ ಇರಬಹುದು. ಯಾಕೆ ಅಂದರೆ 'ಯಡ್ಯೂರಪ್ಪಗೆ ಮತ್ತೊಂದು ಸಂಕಷ್ಟ' ಅನ್ನುವ ಶೀರ್ಷಿಕೆಯಡಿ ಬಾಯಿಗೆ ಬಂದದ್ದನ್ನೆಲ್ಲ ಗೀಚುತ್ತಾ ಬದ್ದವೆ. ಶ್ರೀಯುತರ ಮೇಲೆ ಸಿಬಿಐ ಆರೋಪ ಪಟ್ಟಿ ಸಲ್ಲಿಸಿರುವುದನ್ನೇ 'ಸಂಕಷ್ಟ' ಅಂತೆಲ್ಲ ತಪ್ಪುತಪ್ಪು ಅರ್ಥಮಾಡಿಕೊಂಡಿವೆ ದಡ್ಡ ಮುಂಡೇವು. ಸರಿಯಾಗಿ ನೋಡಿದರೆ ಸಿಬಿಐನವರು ಹಾಗೆ ಮಾಡಿದ್ದೇ ಒಳ್ಳೆಯದಾಯಿತು ಅಂದಿದ್ದಾರೆ ಸ್ವತಃ ಯಡ್ಯೂರಪ್ಪನವರಾದ ಯಡ್ಯೂರಪ್ಪನವರು. ಅವರ ಮನಸ್ಸು ಈಗ ನಿರಾಳವಾಗಿದೆ ಅಂತಾನೂ ಹೇಳಿದ್ದಾರೆ ಶ್ರೀಯುತರು!



ಕೆಲವು ಇರುತ್ತವೆ ಕೊಂಕು ಮನೆದೇವರ ಒಕ್ಕಲಿನವು. ಅಂತೋವು 'ಆರೋಪ ಪಟ್ಟಿ ಸಲ್ಲಿಸಿದ ಮೇಲೆ ಅದು ಹೆಂಗ್ರಿ ನಿರಾಳವಾಗಿರಲು ಸಾಧ್ಯ? ಈ ಸುದ್ದಿ ಕಿವಿ ಮೇಲೆ ಬೀಳುತ್ತಿದ್ದಂಗೆ ಚೇಳು ಮೈಮೇಲೆ ಬಿದ್ದಂತೆ ಆಗೋಲ್ಲವಾ? ಬೆಚ್ಚಿ ಬೆದರಿ ಹೋಗಲ್ಲವಾ' ಅಂತೆಲ್ಲ ಕೇಳ್ತವೆ. ಅವಕ್ಕೆ ಇದರ ಮರ್ಮಾನೇ ಅರ್ಥ ಆಗೋಲ್ಲ. ಯಡ್ಯೂರಪ್ಪ

ಅಣಕ



• ಎಚ್.ಎಲ್.ಕೇಶವಮೂರ್ತಿ


ಮೇಲೆ ಸಿಬಿಐ ತನಿಖೆ ನಡೀತಿದೆ ಅನ್ನೋದು ಸುದ್ದಿಯಾಗಿ ಜನ ಏನು ತಿಳ್ಕೊಂಡಿದ್ದರು. ಇವನೇನೋ ದೇಶಾದ ದೇ... ಕೊಳ್ಳೆ ಹೊಡೆದವನೆ ಅಂದುಕೊಂಡಿದ್ದರು. ಅಂದರೆ ಜನ... ತಪ್ಪು ಸಂದೇಶ ರವಾನೆಯಾಗಿತ್ತು, ಈಗ ಏನಾಗಿದೆ ಎಲ್ಲ... ಸಿಬಿಐನವರೇ ಬಟಾಬಯಲು ಮಾಡಿದ್ದಾರೆ. ಈಗೇನಂತ... ಜನ. 'ಓ ನಾನು ಏನೋ ಆಗೋಗದೆ ಅಂತಿದ್ದೆ. ಇಷ್ಟೇ... ಸಿಎಮ್ಮು ಅಂದ್ಮೇಲೆ ಅಷ್ಟೂ ಮಾಡದಿದ್ದರೆ ಆದಾ... ಅಂತಾರೆ! ಕೊಂಕು ಮಾಸ್ತರುಗಳಿಗೆ ಈ ಲಾಜಿಕ್ಕೇ ತಿಳಿದ... ಈಗ ತಿಳೀತಾ ಯಾಕೆ ನಿರಾಳವಾಗಿದಾರೆ ಅಂತಾವ!

ಇನ್ನೊಂದು ವಿಷಯ ಗೊತ್ತಾ, ಸಿಬಿಐ ಮಾಡಿರ... ಆರೋಪಗಳಲ್ಲಿ ಹುರುಳೇ ಇಲ್ಲವಂತೆ ಕಣ್ರೀ. ಆಡ... ನಡೆಸೋ ರೀತಿ ಅವಕ್ಕೆ ಅರ್ಥಾನೆ ಆಗಿಲ್ಲ ಅನ್ನೋ... ಆರೋಪ ಮಾಡಿರುವುದರಲ್ಲೇ ವ್ಯಕ್ತವಾಗುತ್ತಂತೆ. ಒಂ... ಎಕರೆ ಭೂಮಿಯನ್ನು ಡಿನೋಟಿಫೈ ಮಾಡಿದ... ಅನ್ನೋದೂ ಒಂದು ಆರೋಪ ಅಂತೆ. ಮುಖ್ಯಮ... ಅಂದಮೇಲೆ ಸಾವಿರಾರು ಜನ ಬರುತ್ತಾ ಹೋಗು... ಇರುತ್ತಾರೆ. ಅದರಲ್ಲಿ ಯಾರೋ ಒಬ್ಬ 'ಇದ ಡಿನೋಟಿ... ಮಾಡಿ' ಅಂತ ಬೇಡಿಕೊಂಡಿರಬೇಕು. ಇಷ್ಟೊಂದು ಕೇಳ... ಇದಾನಲ್ಲ, ಏನೋ ಕಷ್ಟಕ್ಕೆ ಸಿಗಾಕಿಕೊಂಡಿರಬೇ... ಅನ್ನಿಸಿರಬೇಕು. ಹೆಂಗೋ ಬಡವ ಬದುಕಿಕೊಳ್ಳಲಿ ಅ... ಮಾಡಿಕೊಟ್ಟಿರಬೇಕು. ಯಾರೋ ಗುಮಾಸ್ತ 'ಇದೆ... ಸ್ಸಾಹಿಂಗೆ ಮಾಡಿರಿ. ನಿಮ್ ಮಗನ ಜಾಮೀನೆ ಡಿನೋಟ... ಮಾಡಿದೀರಲ್ಲ ಸಾ. ತಲೇಗೆ ಸುತ್ತಿಕೊಂಡರೆ ಏನ... ಮಾಡ್ತೀರ' ಅಂತ ಎಚ್ಚರಿಸಿರಲೂಬಹುದ... ಯಡ್ಯೂರಪ್ಪನವರು ಆಗ ಮತ್ತೆ ಅದ ನೋಟಿಫೈ ಮಾಡಿ... ಹೆಂಗೆ ಅಂತ ಯೋಚಿಸಿರಲೂಬಹುದು. ಹಂಗೆ ಮಾಡಿ... ನಾನು ಮಹಮ್ಮದ್ ಬಿನ್ ತೊಘಲಕ್ ಆಗೋಗ್ತ... ಅವನು ದೆಹಲಿಯಿಂದ ದೇವಗಿರಿಗೆ, ದೇವಗಿರಿಯಿ... ದೆಹಲಿಗೆ ರಾಜಧಾನಿ ಬದಲಾಯಿಸಿದ್ದ. ನಾನು ನೋಟಿ... ಮಾಡಿದ್ದನ್ನು ಡಿನೋಟಿಫೈ ಮಾಡಿದೆ. ಮತ್ತೆ ಡಿನೋಟಿ... ಮಾಡಿದ್ದನ್ನು ನೋಟಿಫೈ ಮಾಡಿದರೆ ಅವನಂಗೆ ನಾನು... ಅಂತಾವ ಜನ ಆಡಿಕೊಂಡಾರು ಎಂಬ ಭ... ಕಾಡಿರಬಹುದು. ಅದಕ್ಕೆ ಮರತಂಗೆ ಸುಮ್ಮನಾಗಿರಬಹು... ಡಿನೋಟಿಫೈ ಮಾಡಿಸಿಕೊಂಡಿತ್ತಲ್ಲ ಆ ಹೈದ...

ಕಸಬ್ ಗಲ್ಲಿಗೇರಿದ್ದರಿಂದ ಭಯೋತ್ಪಾದಕರೆಲ್ಲ ಶಾಂತಿ ದೂತರಾಗಲಿದ್ದಾರೆ

ಮುಂಬೈ ದಾಳಿಯ ಅಪರಾಧಿ ಕಸಬ್‌ನನ್ನು ಸದ್ದಿಲ್ಲದೆ ಗಲ್ಲಿಗೇರಿಸಿ ಕೊನೆಗೂ ಪರಾಕ್ರಮ ಮೆರೆಯಲಾಗಿದೆ. ಕಸಬ್‌ಗೆ ಭಾರತ ನೀಡಿರುವ ಉಗ್ರ ಶಿಕ್ಷೆಯನ್ನು ನೋಡಿರುವ ಜಗತ್ತಿನ ಎಲ್ಲ ಭಯೋತ್ಪಾದಕರು ಶಿಕ್ಷೆಯ ಭಯದಿಂದ ತಕ್ಷಣ ಶಸ್ತ್ರ ತ್ಯಾಗ ಮಾಡಿ ಇನ್ನು ಮುಂದೆ ಶಾಂತಿಯ ದೂತರಾಗಲಿದ್ದಾರೆ. ಭಾರತ ವಿರುದ್ಧದ ಭಯೋತ್ಪಾದನೆ ತಕ್ಷಣ ಕೊನೆಗೊಳ್ಳಲಿದ್ದು ಇನ್ನು ಮುಂದೆ ಜನತೆ ನಿಶ್ಚಿಂತೆಯಿಂದಿರಬಹುದಾಗಿದೆ!

ಸಾವನ್ನು ಸಂಭ್ರಮಿಸುವುದು ನಾಗರಿಕ ಮನುಷ್ಯ ಸಂಸ್ಕೃತಿಯಲ್ಲವಾದರೂ ರಕ್ತದಾಹಿ ಬಿಜೆಪಿ ಪರಿವಾರದ ಮಂದಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಕಸಬ್ ಹತ್ಯೆಯನ್ನು ಸಂಭ್ರಮಿಸಿವೆ. ಅವರ ಅತೃಪ್ತ ಆತ್ಮಗಳಿಗೆ ಇನ್ನಾದರೂ ಸಮಾಧಾನವಾಗಬಹುದೋ ಎಂದುಕೊಂಡರೆ, ಉಹೂಂ... ಅಫ್ಜಲ್ ಗುರುವನ್ನು ನೇಣಿಗೇರಿಸುವುದು ಯಾವಾಗ?



ಬೇಗ ಏರಿಸಿ, ಬೇಗ ಏರಿಸಿ ಎಂದು ಚಡಪಡಿಸುತ್ತಿವೆ, ಬೊಬ್ಬಿರಿಯುತ್ತಿವೆ. ಅಫ್ಜಲ್ ಗುರುವನ್ನು ನೇಣಿಗೇರಿಸಿದ ಮೇಲಾದರೂ ಅವರಿಗೆ ಸಮಾಧಾನವಾಗುತ್ತದೋ ಅಥವಾ ಅವರ ಬೇಡಿಕೆಯ ಪಟ್ಟಿ ಇನ್ನೂ ಮುಂದುವರಿಯುತ್ತದೋ ಕಾದುನೋಡಬೇಕು. ಮುರಿಯುವುದನ್ನೇ ಸಿದ್ಧಾಂತವಾಗಿರಿಸಿಕೊಂಡವರಿಗೆ ಕಟ್ಟುವುದರ ಬೆಲೆ ಅರ್ಥವಾಗುವುದಾದರೂ ಹೇಗೆ?

-ಶ್ರೀನಿವಾಸ ಕಾರ್ಕಳ, ಮಂಗಳೂರು

ಕಸಬ್‌ನನ್ನು ಗಲ್ಲಿಗೇರಿಸಿದ್ದು ಸ್ವಾಗತಾರ್ಹ ಸುದ್ದಿ. ಆದರೆ ಯಾವಾಗ ಲಾಲ್ ಕೃಷ್ಣ ಅಡ್ವಾನಿ ಮತ್ತು ನರೇಂದ್ರ ಮೋದಿಯನ್ನು ಗಲ್ಲಿಗೇರಿಸಲಾಗುತ್ತದೆ? ಯಾಕೆಂದರೆ ಕಸಬ್‌ನಂತೆ ಅಡ್ವಾನಿ ಮತ್ತು ಮೋದಿ ಕೂಡ ಭಯೋತ್ಪಾದಕರಾಗಿದ್ದು ಸಾವಿರಾರು ಅಮಾಯಕ ಭಾರತೀಯರ ಸಾವಿಗೆ ಕಾರಣರಾಗಿದ್ದಾರೆ. ಅಡ್ವಾನಿಯಂತೂ ಬಾಬ್ರಿ ಮಸೀದಿಯನ್ನು ಕೆಡವಿದ್ದರ ಸಂಚಿನಲ್ಲಿ ಮುಖ್ಯ ಪಾತ್ರ ವಹಿಸಿದ್ದರಲ್ಲದೆ ಅದಾದ ನಂತರ ಸಂಭವಿಸಿದ ಕೋಮುದಳ್ಳುರಿಗೂ ಕಾರಣರಾಗಿದ್ದರು. ಹಾಗೆಯೇ ಮೋದಿ ಕೂಡ 2002ರಲ್ಲಿ ಗುಜರಾತಿನಲ್ಲಿ ಸಂಭವಿಸಿದ ಕೋಮುಗಲಭೆ ಮತ್ತು ಸಾವಿರಾರು ಅಮಾಯಕ ಅಲ್ಪಸಂಖ್ಯಾತರ ಸಾವಿಗೆ ನೇರ ಕಾರಣನಾಗಿದ್ದ.

ಮುಂಬೈ ಮೇಲಿನ ದಾಳಿ ಕುರಿತಂತೆ ನಮ್ಮ ತನಿಖಾ ಸಂಸ್ಥೆಗಳು ಮತ್ತು ನ್ಯಾಯವ್ಯವಸ್ಥೆ ತುರ್ತು ಗತಿಯಲ್ಲಿ ಕೆಲಸ ಮಾಡಿದ್ದಂತೆ ಬಾಬ್ರಿ ಮಸೀದಿ ಮತ್ತು ಗುಜರಾತ್ ಹತ್ಯಾಕಾಂಡಗಳನ್ನು ಕುರಿತು ಕಾರ್ಯವೆಸಗಿಲ್ಲ. ನಾಲ್ಕು ವರ್ಷಗಳ ಹಿಂದೆ ಕಸಬ್ ಮತ್ತು ಆತನ ಸಂಗಡಿಗರು ಮುಂಬೈ ಮೇಲೆ ಎಸಗಿದ ದಾಳಿಗಿಂತ ಅಡ್ವಾನಿ ಮತ್ತು ಚೆಡ್ಡಿ ಭಯೋತ್ಪಾದಕರು ಎಸಗಿದ ಭಯೋತ್ಪಾದಕ ದಾಳಿಗಳು ತೀವ್ರವಾಗಿದ್ದವಲ್ಲದೆ ಹೆಚ್ಚಿನ ಪ್ರಾಣಹಾನಿ ಮತ್ತು ಆಸ್ತಿ ನಷ್ಟ ಸಂಭವಿಸಿದ್ದವು. ಆದ್ದರಿಂದ ಕಸಬ್‌ಗಿಂತ ಮುನ್ನ ಅಡ್ವಾನಿ ಮತ್ತು ಮೋದಿಯನ್ನು ಗಲ್ಲಿಗೇರಿಸಬೇಕಿತ್ತು.

-ಅನಾಮಿಕ, ಎಸ್‌ಎಂಎಸ್ ಮೂಲಕ


ಗೌರಿ ಅವರು 'ಕಂಡಹಾಗೆ' ಅಂಕಣದಲ್ಲಿ ಬರೆದ 'ರಾಜಕೀಯ ಮಸಲತ್ತಿಗೆ ಕಸಬ್ ಗಲ್ಲಿಗೇರಿದ' ಲೇಖನವು ಚೆನ್ನಾಗಿದ್ದು ವಿಭಿನ್ನ ದೃಷ್ಟಿಕೋನವನ್ನು ತೋರಿಸಿತು.

ನಾನು ಪತ್ರಿಕೆಯ ಕಾಯಂ ಓದುಗನಾಗಿದ್ದು ಶಿವಸುಂದರ್ ಅವರ 'ಚಾರ್ವಾಕ' ಮತ್ತೆ ಪ್ರಾರಂಭವಾಗಲಿ ಎಂದು ಕಾಯುತ್ತಿದ್ದೇನೆ.

-ಅನಿಲ ಭಾರದ್ವಾಜ್, ಈ ಮೇಲ್ ಮೂಲಕ

ಕಸಬ್‌ನ ಸಾವು ಸಂಭ್ರಮಾಚರಣೆಗೆ ಕಾರಣವಾಗಿದ್ದು ಶೋಚನೀಯವಾಗಿತ್ತು. ಹೌದು ಅವನೊಬ್ಬ ಭಯೋತ್ಪಾದಕನಾಗಿದ್ದ. ಆದರೆ ಆತ ಸಾವಿಗೆ ಸಿದ್ಧನಾಗಿಯೇ ಇಲ್ಲಿಗೆ ಬಂದಿದ್ದ. ಆದ್ದರಿಂದ ಭಯೋತ್ಪಾದನೆಯನ್ನು ತಡೆಯಲು ನಾವು ಗಲ್ಲುಶಿಕ್ಷೆಗೆ ಬದಲಾಗಿ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳಬೇಕಿದೆ.

ನಾವೆಲ್ಲರೂ ಜವಾಬ್ದಾರಿಯುತ ಭಾರತೀಯರಾಗಬೇಕಿದೆ. ಕಸಬ್‌ನಂತವನ ಸಾವಿಗೆ ಪಟಾಕಿ ಹೊಡೆದ ಮಾತ್ರಕ್ಕೇ ನಾನು ದೇಶಭಕ್ತರಾಗುವುದಿಲ್ಲ.




"An eye for an eye will make t... whole world blind" ಎಂದು ಗೌರಿ ಲಂಕೇ... ಬರೆದದ್ದು ಸರಿಯಾಗಿತ್ತು. ಯಾಕೆ ನಾ... ಮರಣದಂಡನೆಯನ್ನು ವಿರೋಧಿಸಬೇಕು ಎಂಬುದ... ಸ್ಪಷ್ಟಪಡಿಸಿತು.

-ಅಭಿನಂದನ್ ಬಳ...

ಫ್ಯಾಸಿಸ್ಟನ ಸಾವು, ಅಮಾಯಕರ ಬಂಧ...

ಜಿ. ರಾಜಶೇಖರ ಅವರ ಲೇಖನ ಠಾಕ್ರೆ ಬ... ಭಾರತೀಯ ಹಿಟ್ಲರ್ ಎಂಬುದನ್ನು ಸ್ಪಷ್ಟಗೊಳಿಸುತ್ತ... ಲೇಖನದ ಮೊನಚು ಮತ್ತು ವ್ಯಂಗ್ಯ ಜೀವ... ಶವಗಳಂತಿರುವ ಇವತ್ತಿನ ರಾಜಕಾರಣಿಗಳ... ಅರ್ಥವಾಗುವಂತಿದ್ದರೆ. . .

ಅಂದಹಾಗೆ, ಬಿಜೆಪಿಯ ರಾಷ್ಟ್ರಾಧ್ಯಕ್ಷ ನಿತಿನ್ ಗಡ್ಕರಿ... ಕಂಪನಿಗಳು ಕಾನೂನನ್ನು ಉಲ್ಲಂಘಿಸಿರುವುದನ್ನು ಕುರಿ... ಹೊಸ ಮಾಹಿತಿಗಳು ಹೊರಬೀಳುತ್ತಿವೆ. ಆದರೂ ಆ...






ಪಡದೆ ಅಂದ್ರೆ ಅದ ಇಪ್ಪತ್ತು ಕೋಟಿ ರೂಪಾಯಿಗೆ ಪ್ಪೊಂಡದೆ. ತಂದೆ ಮಕ್ಕಳು ಬೇರೆಯಾಗಿ ಹತ್ತು ವರ್ಷದ ಮೇಲೇ ಆಗಿತ್ತಲ್ಲಾ, ಅವರವರ ಪುಣ್ಯ ಅವರವರ ಪಾಲಿಗೆ ಮಕೊಂಡು ಯಡ್ಯೂರಪ್ಪನವರು ಅದರ ಬಗ್ಗೆ ತಲೇನೆ ಸಿಕೊಳ್ಳಲಿಲ್ಲವಂತೆ. ಈ ಎಲ್ಲ ಅಂತರಾಳ ತಿಳೀದ ಬಿನೋವು ಇದನ್ನೇ ಒಂದು ಆರೋಪ ಅಂತ ಕುಂತವೆ. ವು ಏನು ಹೇಳ್ತಾ ಅವೆ ಅಂದ್ರೆ 'ಡಿನೋಟಿಫೈ ಮಾಡುವುದಿದ್ದರೆ ಅದು ಸಮಿತಿ ಮುಂದೆ ಬರಬೇಕು. ದರಲ್ಲಿ ಹಾಗಾಗಿಲ್ಲ, ಮಗನಿಗೆ ಅನುಕೂಲ ಮಾಡಿಕೊಡೋ ಷ್ಟಿಯಿಂದ ಹೀಗೆ ಮಾಡಿದ್ದಾರೆ ಅಂತಾವ. ಅವಕ್ಕೇನು ತ್ತಿಲ್ಲ ಅಂದ್ರೆ ಹೀಗೆ ಮಾಡುವುದು ಮುಖ್ಯಮಂತ್ರಿಯ ಧಿಕಾರ ವ್ಯಾಪ್ತಿಯಲ್ಲೇ ಇದೆ ಅನ್ನೋದು. ಅವು ಹಂಗಿಲ್ಲ ತಾನೆ ಅಟಕಾಯಿಸ್ತಿದಾವೆ. ಇಂತಹದ್ದಕ್ಕೆ ಜಗ್ಗುವ ಅಲ್ಲ ಯಡ್ಯೂರಪ್ನೋರು. 'ತಪ್ಪಾಗದೆ ಅನ್ನಿಸಿದರೆ ದ ಜಪ್ತಿ ಮಾಡಿಕೊಳ್ರಿ' ಅಂದವ್ರೆ!

ಅಪ್ಪನವರ ಇಂತಹ ಧೀರೋದಾತ್ತ ನುಡಿಗಳನ್ನು ಸಿದ ಮೇಲಾದರೂ 'ಕೊಂಕು ಮಹದೇವ'ಗಳು ತ್ತಿರಬಾರದಾ. 'ಇದೆಂಗದೆ ಅಂದ್ರೆ ಯಾವ್ನೋನೋ ಕಳ್ಳತನ ಡ್ತಾನೆ. ಸಿಗಾಕಿಕೊಂಡಾಗ ಕದ್ದ ಮಾಲ ಬಿಸಾಕ್ತೀನಿ ಗ್ರಿ ಅಂದಂಗದೆ' ಅಂತಾವೆ. ಕಳ್ಳತನಾನೂ ಭ್ರಷ್ಟಾಚಾರಾನೂ ಒಂದೇ ತಕ್ಕಡಿಯಲ್ಲಿ ತೂಗೋದು ತರವಲ್ಲ ಗ್ರಿ ಅಂದರೆ ತಿರಸ್ಕಾರದಿಂದ ನೋಡ್ತವೆ. ಅಂತಹವಕ್ಕೆ ಯಾರು ಏನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆ ದಂತೇಯ. ಅವನ್ನ ಯಡ್ಯೂರಪ್ಪನವರ ಶತ್ರುಗಳು ರ್ಲ್ಲೋ ಸ್ಥಾನ ನೀಡುವುದು ಸರಿಯಾದ ಕ್ರಮ ಅನ್ನಿಸುತ್ತೆ!

ಇದು ಆಯಿತಲ್ಲಾ, ಯಡ್ಯೂರಪ್ಪನವರ ಮಕ್ಕಳಿದ್ದಾರಲ್ಲ ವರು ವಿದ್ಯಾಪಕ್ಷಪಾತಿಗಳು ಇರಲೇಬೇಕು. ದಾನದಾನಗಳಲ್ಲಿ ವಿದ್ಯಾದಾನವೇ ಶ್ರೇಷ್ಠ ಅಂತ ನಂಬಿದವರು ಆಗಿರಬೇಕು. ಟ್ರಸ್ಟ್ ಹೆಸರಿನಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಅವರ ವಿದ್ಯಾಸೇವೆ ನೋಡಿ ಜಿಂದಾಲ್ ಕಂಪನಿಯ ಹೃದಯ ಗೇ ಕರಗಿ ನೀರಾಗಿರಬೇಕು. ನಮ್ಮದೂ ಅಳಿಲುಸೇವೆ ರಲಿ ಅಂತ ಟ್ರಸ್ಟ್‌ಗೆ ಇಪ್ಪತ್ತು ಕೋಟಿ ರೂಪಾಯಿ ಣಿಗೆ ನೀಡಿರಬೇಕು. ಒಂದು ವೇಳೆ ಇಡೀ ವ್ಯವಹಾರದಲ್ಲಿ ಶಯ ತಲೆದೋರಿತು ಅನ್ನಿ. ಯಾರನ್ನು ಅಪರಾಧಿ ನದಲ್ಲಿ ನಿಲ್ಲಿಸಬೇಕು? ಟ್ರಸ್ಟ್ ಸದಸ್ಯರನ್ನು, ಜಿಂದಾಲ್ ಪನಿಯವರನ್ನು ತಾನೆ? ಅದುಬಿಟ್ಟು ಯಡ್ಯೂರಪ್ಪನವರ ಲಿನ ಆರೋಪದಲ್ಲಿ ಇದನ್ನೂ ಸೇರಿಸವ್ರಲ್ಲ ಸಿಬಿಐ ಒಳಗೆ ಏನು ಜೇಡಿಮಣ್ಣು ತುಂಬದಾ ಅಂತಾವ....!


(ಅ)ನೀತಿ: ಭ್ರಷ್ಟ ಗಳಿಕೆ ಮಕ್ಕಳ ಹೆಸರಿನಲ್ಲಿರಲಿ! ■

ಗಾಂಧಿ ಸಹೋದರಿಯರು ನಾಟ್ ರೀಚೆಬಲ್!



ಪೂಜಾ ಗಾಂಧಿ ಮತ್ತೊಮ್ಮೆ ವಿನಾಕಾರಣ ಸುದ್ದಿಯಲ್ಲಿ ಇದ್ದಾರೆ. ಬೇಸರದ ವಿಷಯವೆಂದರೆ ಅಕ್ಕನ ಹಾದಿಯಲ್ಲಿ ತಂಗಿ ರಾಧಿಕಾ ಗಾಂಧಿ ಕೂಡ ನಿಧಾನವಾಗಿ ಸಾಗುತ್ತಿರುವುದು.

'ಹೊಸ ಪ್ರೇಮ ಪುರಾಣ' ಎಂಬ ಚಿತ್ರದಲ್ಲಿ ಹೊಸ ನಾಯಕ ನಿತಿನ್‌ಗೆ ಜೋಡಿಯಾಗಿ ಕಾಣಿಸಿಕೊಂಡವಳು ಪೂಜಾಳ ತಂಗಿ ರಾಧಿಕಾ. ಕೊನೆಗೆ ನಾಯಕ ನಿತಿನ್ ಶಿಫಾರಸ್ಸಿನ ಮೇರೆಗೆ ನಿರ್ಮಾಪಕರು ಪೂಜಾ ಗಾಂಧಿಯನ್ನೂ ಒಂದು ಹಾಡಿನಲ್ಲಿ ಸೇರಿಸಿಕೊಂಡರು. ಸುಮಾರು ಎರಡು ವರ್ಷಗಳ ನಂತರ ಈ ಚಿತ್ರ ಈಗ ಬಿಡುಗಡೆಗೆ ರೆಡಿಯಾಗಿದೆ. ಆದರೆ ಈಗ ಗಾಂಧಿ ಸಹೋದರಿಯರು ಚಿತ್ರದ ಪ್ರಚಾರ ಕಾರ್ಯಕ್ಕೆ ಕೈಕೊಟ್ಟಿದ್ದಾರೆ.



ನಿರ್ದೇಶಕ ಮತ್ತು ನಿರ್ಮಾಪಕ ಪ್ರಸಾದ್ ಎಷ್ಟೇ ಫೋನ್ ಮಾಡಿದರೂ ಈ ಸಹೋದರಿಯರು ಅವರ ಕರೆಗಳನ್ನು ಸ್ವೀಕರಿಸಲಿಲ್ಲವಂತೆ. ಒಂದೆರಡು ಬಾರಿ ರಾಧಿಕಾ ನಾಯಕ ನಿತಿನ್ ಜೊತೆ ಸಂದೇಶ ಕಳುಹಿಸಿದರ ಹೊರತು ಮಾತನಾಡಲು ಸಿಗಲೇ ಇಲ್ಲ ಎಂಬುದು ಪ್ರಸಾದ್ ಆರೋಪ.

ಪ್ರಸಾದ್ ಅವರ ಕಣ್ಣಲ್ಲಿ ನೀರು ತುಂಬಿಬಂತು.

ಮೊನ್ನೆ ನಡೆದ ಪತ್ರಿಕಾ ಗೋಷ್ಠಿಯಲ್ಲಿ "ಇನ್ನು ಮುಂದೆ ಚಿತ್ರ ನಿರ್ಮಾಣಕ್ಕೆ ಬರುವುದಿಲ್ಲ, ಈ ಮೊದಲ ಚಿತ್ರವೇ ಅನೇಕ ಕಹಿ ಅನುಭವಗಳನ್ನು ನೀಡಿದೆ" ಎಂದು ಪ್ರಸಾದ್ ಅವರು ಕಣ್ಣೀರಿಟ್ಟರಲ್ಲದೆ ಅರ್ಧಕ್ಕೇ ಪತ್ರಿಕಾಗೋಷ್ಠಿಯಿಂದ ಹೊರನಡೆದರು.




ಈ ರೀತಿ ಚಿತ್ರದ ಪ್ರಚಾರಕಾರ್ಯಕ್ಕೆ ಪೂಜಾ ಗಾಂಧಿ ಕೈಕೊಡುತ್ತಿರುವುದು ಇದೇ ಮೊದಲ ಬಾರಿ ಅಲ್ಲ, ಆಕೆ ಯಾಕೆ ಹೀಗೆ ಮಾಡುತ್ತಿದ್ದಾರೆ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ.


ಪುನೀತ್ ಕಾಲ್‌ಶೀಟ್‌ಗಾಗಿ ನಿರ್ದೇಶಕರ ಜಿದ್ದಾಜಿದ್ದಿ

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಮುಂದಿನ ಚಿತ್ರದ ಕಾಲ್‌ಶೀಟ್ ಯಾರ ಕೈಗೆ ಸಿಗಲಿದೆ ಎಂಬ ಬಗ್ಗೆ ಗಾಂಧಿನಗರದಲ್ಲಿ ಸಣ್ಣ ಚರ್ಚೆಯೂ, ಒಂದು ಸಣ್ಣ ಪೈಪೋಟಿಯೂ ನಡೆಯುತ್ತಿದೆ.


ಮುಖ್ಯವಾಗಿ ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್ ಮತ್ತು ಕನಕಪುರ ಶ್ರೀನಿವಾಸ್ ಪುನೀತ್‌ಗಾಗಿ ವಿಶೇಷವಾದ ಕಥೆಯನ್ನು ಬರೆಸುತ್ತಿದ್ದಾರೆ. ಶ್ರೀನಿವಾಸ್ ಮತ್ತು ರಾಕ್‌ಲೈನ್ ಇಬ್ಬರೂ ಈ ಹಿಂದೆ ಪುನೀತ್ ಚಿತ್ರವನ್ನು ನಿರ್ಮಿಸಿದ ಅನುಭವವನ್ನು ಹೊಂದಿದ್ದಾರೆ. ಆದರೂ ಕಳೆದ ಮೂರು ವರ್ಷಗಳಿಂದ ಇವರಿಬ್ಬರಿಗೂ ಪುನೀತ್ ಕಾಲ್‌ಶೀಟ್ ಮರೀಚಿಕೆಯಾಗಿತ್ತು, ಈಗ ಬರಲಿರುವ ಹೊಸ ವರ್ಷ 2013 ರಲ್ಲಿ ಇವರಿಬ್ಬರಲ್ಲಿ ಒಬ್ಬರಿಗೆ ಪುನೀತ್ ಡೇಟ್ಸ್ ಸಿಗುವುದು ಗ್ಯಾರಂಟಿಯಂತೆ.

ಶ್ರೀನಿವಾಸ್ ಅವರು ಈಗಾಗಲೇ 'ಆಪ್ತಮಿತ್ರ' ಮತ್ತು 'ಆಪ್ತರಕ್ಷಕ' ಚಿತ್ರಗಳನ್ನು ನಿರ್ದೇಶಿಸಿದ್ದ ಪಿ. ವಾಸು ಅವರ ಕೈಯಲ್ಲಿ ಪುನೀತ್‌ಗಾಗಿ ಒಂದು ಕಥೆಯನ್ನು ತಯಾರು





ಮಾಡಿಸಿದ್ದಾರೆ. ವಾಸು ಜೊತೆಗೆ ಈ ತನಕ ಪುನೀತ್ ಕೆಲಸ ಮಾಡಿಲ್ಲ, ವಾಸು ದಕ್ಷಿಣ ಭಾರತದ ಖ್ಯಾತ ತಂತ್ರಜ್ಞ ಎಂಬ ಕಾರಣಕ್ಕೆ ಪುನೀತ್ ಕಾಲ್‌ಶೀಟ್ ನೀಡಬಹುದು ಎಂಬುದು ಶ್ರೀನಿವಾಸ್ ಅವರ ಲೆಕ್ಕಾಚಾರ. ಆದರೆ ಅಷ್ಟಕ್ಕೆ ಸುಮ್ಮನಾಗದ ಶ್ರೀನಿವಾಸ್ ಮತ್ತೊಂದು ಕಥೆಯನ್ನು ನಿರ್ದೇಶಕ ಜೇಕಬ್ ವರ್ಗಿಸ್ ಅವರಿಂದಲೂ ಸಿದ್ಧಮಾಡಿಸಿದ್ದಾರಂತೆ. ಈ ಜೇಕಬ್ ಈ ಹಿಂದೆ 'ಪೃಥ್ವಿ' ಎಂಬ ಉತ್ತಮ ಚಿತ್ರ ನಿರ್ದೇಶಿಸಿ ಪುನೀತ್ ಅವರ ವೃತ್ತಿಜೀವನಕ್ಕೆ ಹೊಸ ಆಯಾಮವನ್ನು ನೀಡಿದ್ದವರು.





ಈ ಮಧ್ಯೆ ರಾಕ್‌ಲೈನ್ ವೆಂಕಟೇಶ್ ಪುನೀತ್‌ಗಾಗಿ ತಯಾರು ಮಾಡುತ್ತಿರುವ ಚಿತ್ರದ ಬಗ್ಗೆ ಎಲ್ಲೂ ಯಾವ ಸುದ್ದಿಯೂ ಕೇಳಿಬಂದಿಲ್ಲ, ಅದನ್ನು ರಾಕ್‌ಲೈನ್ ಟಾಪ್ ಸೀಕ್ರೆಟ್ ಆಗಿ ಉಳಿಸಿಕೊಂಡಿದ್ದಾರೆ. ಈ ಚಿತ್ರವನ್ನು ಯಾರು ನಿರ್ದೇಶಿಸುತ್ತಾರೆ ಎಂಬ ಬಗ್ಗೆಯೂ ರಾಕ್‌ಲೈನ್ ಟುಟಕ್‌ಪಿಟಕ್ ಎನ್ನುತ್ತಿಲ್ಲ.

ಒಟ್ಟಾರೆಯಾಗಿ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಕಾಲ್‌ಶೀಟ್ ಪಡೆಯಲು ಇಬ್ಬರು ನಿರ್ಮಾಪಕರ ನಡುವೆ ಜಿದ್ದಾಜಿದ್ದಿ ನಡೆಯುತ್ತಿದೆ ಎಂಬುದು ಮಾತ್ರ ನಿಜ. ಈ ಇಬ್ಬರಲ್ಲಿ ಯಾರು ಬಂಪರ್ ಲಾಟರಿ ಹೊಡೆಯುತ್ತಾರೆ ಎಂಬುದನ್ನು ನೋಡಬೇಕು. ● ತ್ರೇತ್ರೈ

ಮಧ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತಿಲ್ಲ. ಶ ಕೇಂದ್ರದಲ್ಲಿ ಅತಿದೊಡ್ಡ ವಿರೋಧ ಪಕ್ಷದ ನಾಯಕನಾಗಿ ಮುಂದುವರೆಯುತ್ತಿದ್ದಾನೆ.

ಇದೇ ಹೊತ್ತಿನಲ್ಲಿ ರಾಬರ್ಟ್ ವಾಧ್ರಾನ ಅಕ್ರಮಗಳೂ ಹಿಂದೆ ಸರಿದಿವೆ. ಖಂಡಿತವಾಗಿ ಆತನ ವಿರುದ್ಧವೂ ಯಾರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ.

ವಿಚಿತ್ರವೆಂದರೆ, ಓರ್ವ ಫ್ಯಾಸಿಸ್ಟನ ಸಾವಿಗೆ ಸಂಬಂಧಿಸಿದಂತೆ ಆಚರಿಸಲಾದ ಅನಾನುಕೂಲಕರ ಬಂದ್ ಅನ್ನು ವಿರೋಧಿಸಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದ ಶಾಹೀನ್ ಮತ್ತು ರೇಣು ಎಂಬ ಇಬ್ಬರು ಅಮಾಯಕ, ಮಧ್ಯಮ ವರ್ಗದ ಯುವತಿಯರ ಮೇಲೆ ಭಾರತೀಯ ಪೊಲೀಸರು ತಮ್ಮ ಪರಾಕ್ರಮವನ್ನು ಮೆರೆಯುತ್ತಾರೆ.

-ರವಿಕುಮಾರ್, ಹಾಸನ

ಐ ಲವ್ ಮುಕ್ಸಿಕ

ನನ್ನ ಹೀರೋಗಳ ಪಟ್ಟಿಗೆ ಉರಗ್ವೆ ಅಧ್ಯಕ್ಷ ಹೂಸೆ ಮುಕ್ಸಿಕ ಹೊಸ ಸೇರ್ಪಡೆ. ಐ ಲವ್ ಯೂ ಮುಕ್ಸಿಕ.

ಗುರು ಫಣಿರಾಜ್ ಅವರು ಜಾವೆದ್ ಇಕ್ಬಾಲ್ ಕುರಿತಂತೆ ಬರೆದ ಲೇಖನ ರೋಮಾಂಚಕಾರಿಯಾಗಿತ್ತು, ನನ್ನ ಗೆಳೆಯ ಅಸಫ್ ಚೆನ್ನಾಗಿ ಕತೆ ಬರೆಯುತ್ತಾರೆ. ಕೊಂಕಣಿಯ ಬೋದಿಲೇರ್ ಎಂದು ಗೆಳೆಯರು ಕಿಚಾಯಿಸುವ ನನ್ನ ಮಿತ್ರ ವಿಲ್ಸನ್ ಕಟೀಲ್ ಹಿಂದಿನ ವಾರ ಬರೆದ 'ಎನ್‌ಕೌಂಟರ್' ಕವನದಲ್ಲಿ ಪ್ರಭುತ್ವದ ದರ್ಪಕ್ಕೆ ಹೇಳಿದ ಧಿಕ್ಕಾರದ ಪರಿ ಮನ ಮುಟ್ಟುವಂತಿತ್ತು,

ಒಟ್ಟಿನಲ್ಲಿ ಪತ್ರಿಕೆ ಪ್ರತಿವಾರವೂ ಹೊಸ ಹುರುಪು ಮತ್ತು ಹುಮ್ಮಸ್ಸಿನೊಂದಿಗೆ ಬರುತ್ತಿದೆ. ಥ್ಯಾಂಕ್ಯೂ ಗೌರಿ ಅಕ್ಕ.

-ಇಸ್ಮತ್ ಫಜೀರ್

ಚಿಮೂ ಎಂತಹ ಸಂಶೋಧಕ?

ಟಿಪ್ಪು ಸುಲ್ತಾನರ ಬಗ್ಗೆ ಇಲ್ಲಸಲ್ಲದ ಹೇಳಿಕೆಗಳನ್ನು ನೀಡುತ್ತಿರುವ ಚಿದಾನಂದ ಮೂರ್ತಿಗೆ ಹೇಳಿ ಧಿಕ್ಕಾರ. ಇವರು ಯಾವ ಮಟ್ಟದ ಸಂಶೋಧಕರೆಂಬುದು ಅವರ ಅಲ್ಪತನದ ಬುದ್ಧಿಯಿಂದಲೇ ತಿಳಿಯಬಹುದು. ಎಲ್ಲಾ ಜಾತಿ, ಮತ, ಪಂಥಗಳನ್ನು ಸಮಾನವಾಗಿ ವಿಶ್ಲೇಷಿಸಿ ನೋಡುವವರನ್ನು ಸಂಶೋಧಕರೆಂದು ಒಪ್ಪಿಕೊಳ್ಳಲು ಸಾಧ್ಯ. ಆದರೆ ಇವರು ಮೊಸರಲ್ಲೂ ಕಲ್ಲು ಹಾಕಿ ಕಲ್ಲು ಇದೆಯೆಂದು ವಾದಿಸುತ್ತಾರಲ್ಲ . . ಇವರು ಸಂಶೋಧಕರೆ?

-ಬಸವರಾಜ ಹಳ್ಳಿ, ದೇವದುರ್ಗ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಎತ್ತ ಸಾಗುತ್ತಿದೆ ದೃಶ್ಯಮಾಧ್ಯಮ

ಇಂತಹ ಒಂದು ಪ್ರಶ್ನೆ ಇತ್ತೀಚಿನ ದಿನಗಳಲ್ಲಿ ಪ್ರಜ್ಞಾವಂತ ಸಮಾಜದಲ್ಲಿ ಮೂಡಿದೆ. ಅದಕ್ಕೆ ಕಾರಣ ದೃಶ್ಯಮಾಧ್ಯಮಗಳು ಟಿ.ಆರ್.ಪಿ ಗೋಸ್ಕರ ನಡೆಸುವ ಪೈಪೋಟಿ.

ದೃಶ್ಯಮಾಧ್ಯಮ ಒಂದು ಪ್ರಭಾವಿ ಮಾಧ್ಯಮ. ಯಾವುದೇ ಒಂದು ವಿಷಯ, ಸನ್ನಿವೇಶಗಳನ್ನು ಕೆಲವೇ ನಿಮಿಷದಲ್ಲಿ ಜನರ ಬಳಿಗೆ ತಲುಪುವಂತೆ ಮಾಡುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ದೃಶ್ಯಮಾಧ್ಯಮಗಳಲ್ಲಿ ಪ್ರಸಾರವಾಗುವ ದೃಶ್ಯಗಳು, ವಿಷಯಗಳು ಜನರ ಮೇಲೆ ಕೆಟ್ಟ ಪ್ರಭಾವ ಬೀರುತ್ತಿವೆ. ಏಕೆ ಈ ದೃಶ್ಯಮಾಧ್ಯಮಗಳು ತಮ್ಮ-ತಮ್ಮ ಟಿ.ಆರ್.ಪಿ.ಗೋಸ್ಕರ ಉಪಯೋಗವಿಲ್ಲದ ವಿಷಯಗಳನ್ನು ಜನರಿಗೆ ತೋರಿಸುತ್ತಿವೆ? ಏಕೆ ಮೌಲ್ಯ ಸಿದ್ಧಾಂತಗಳನ್ನು ಮರೆತು ಕೆಲಸ ಮಾಡುತ್ತಿವೆ?

ನವೆಂಬರ್ 21ರಂದು ಇಡೀ ದಿನ ಎಲ್ಲಾ ವಾರ್ತಾ ಮಾಧ್ಯಮಗಳಲ್ಲಿಯೂ ಕಸಬ್‌ನನ್ನು ಗಲ್ಲಿಗೇರಿಸಿದ ವಿಷಯದ ಸುತ್ತ ಚರ್ಚೆ ನಡೆಯಿತು. ನಾನು ಕೂಡ ದೇಶಭಕ್ತ, ಕಸಬ್ ಮತ್ತು ಉಗ್ರ ಸಂಘಟನೆಗಳ ವಿರೋಧಿ. ಆದರೆ ದೃಶ್ಯಮಾಧ್ಯಮಗಳಲ್ಲಿ ನಡೆದ ಚರ್ಚೆ, ಆ ವಿಷಯವನ್ನು ತೋರಿಸಿದ ರೀತಿ, ಹಿಂದೂ ಸಂಘಟನೆಗಳ ವಿಜಯೋತ್ಸವ, ಎಲ್ಲವೂ ನನ್ನಲ್ಲಿ ಬೇಸರ ಮೂಡಿಸಿದವು.

ನವೆಂಬರ್ 21ರಂದು ಬೆಳಗ್ಗೆ 8ರಿಂದ ರಾತ್ರಿ 10 ಗಂಟೆವರೆಗೆ ಯಾವುದೇ ವಾರ್ತಾ ಮಾಧ್ಯಮಗಳನ್ನು ನೋಡಿದರೂ ಕಸಬ್‌ನನ್ನು ನೇಣಿಗೆ ಹಾಕಿದ ವಿಷಯವನ್ನು ಅಲಂಕಾರಿಕವಾಗಿ, ವರ್ಣರಂಜಿತವಾಗಿ ಚಿತ್ರಿಸಿದವು. ಕೆಲವು ಮಾಧ್ಯಮಗಳಂತೂ ಕಸಬ್ ಆಯಸ್ಸು 89 ವರ್ಷ, ಅಂದರೆ ಅವನು ತನ್ನ 24ನೇ ವಯಸ್ಸಿನಲ್ಲಿ ಉಗ್ರ ಕೃತ್ಯವನ್ನು ಎಸಗಿದ್ದಕ್ಕೆ ಅಕಾಲಿಕ ಮರಣವನ್ನು ಹೊಂದಿ ಇನ್ನುಳಿದ 65 ವರ್ಷ ಪ್ರೇತಾತ್ಮವಾಗಿ ಕಾಡುತ್ತಾನೆ ಎಂದು ಸಾರಿದವು. ಇದು ಎಷ್ಟರಮಟ್ಟಿಗೆ ಸರಿ...?



ಇನ್ನೊಂದು ವಿಚಿತ್ರವೆಂದರೆ ಓರ್ವ ವ್ಯಕ್ತಿಯನ್ನು ಯಾವ ರೀತಿ ನೇಣು ಹಾಕುತ್ತಾರೆ ಎಂದೂ ದೃಶ್ಯಮಾಧ್ಯಮದಲ್ಲಿ ಚರ್ಚಿಸಲಾಯಿತು. ಓರ್ವ ವ್ಯಕ್ತಿಯ ತೂಕವನ್ನು ಆಧರಿಸಿ ಅವನನ್ನು ಎಷ್ಟು ಅಡಿ ಎತ್ತರದಿಂದ ನೇಣು ಹಾಕುತ್ತಾರೆ ಎಂದೆಲ್ಲಾ ಚರ್ಚೆ ನಡೆಸಲಾಯಿತು. ಇಂತಹ ಕಾರ್ಯಕ್ರಮದಿಂದ ಜನರಿಗಾದ ಪ್ರಯೋಜನವೇನು? ತಪ್ಪು ಮಾಡಿದವನಿಗೆ ಶಿಕ್ಷೆ ಕೊಡುವುದು ಅಗತ್ಯ. ಆದರೆ ಈ ಮಾಧ್ಯಮಗಳು ಆ ಶಿಕ್ಷೆಯನ್ನೇ ಒಂದು ಚರ್ಚಾವಸ್ತುವಾಗಿ ಪರಿವರ್ತಿಸಿದ್ದು ಪ್ರಜ್ಞಾವಂತ ಸಮಾಜ ತಲೆತಗ್ಗಿಸುವಂತೆ ಮಾಡಿತು.

ನಮ್ಮ ದೇಶದಲ್ಲಿ ಅನೇಕ ಸಮಸ್ಯೆಗಳಿವೆ. ಕಸಬ್‌ನನ್ನು ಗಲ್ಲಿಗೇರಿಸಿದ್ದನ್ನು ಬದಿಗಿಟ್ಟು ಹಳ್ಳಿಗಾಡಿನಲ್ಲಿರುವ ಶಿಕ್ಷಕರ ಕೊರತೆ, ಬಡತನ, ನಿರುದ್ಯೋಗ, ಜಾತಿ ಸಮಸ್ಯೆ ಭ್ರಷ್ಟಾಚಾರ, ನಕ್ಸಲೀಯ ಸಮಸ್ಯೆಗಳನ್ನು ತೆಗೆದುಕೊಂಡು ಗಂಭೀರವಾಗಿ ಚರ್ಚೆ ಮಾಡಿ ಜನರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಂತೆ ಮಾಡುವುದು ಇವತ್ತು ಮುಖ್ಯವಾಗಿದೆ.

- ಪ್ರದೀಪ್ ಎಸ್.ಡಿ., ಈ ಮೇಲ್ ಮೂಲಕ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 12-12-2012 RNI No. KARKAN2005/1

ಹಳೇ ತ್ರಿಮೂರ್ತಿಗಳು ಮ್ಯಾಜಿಕ್ ಮಾಡುತ್ತಾರಾ?



ಸುಮಾರು ಹತ್ತು ವರ್ಷಗಳ ಹಿಂದೆ ಕನ್ನಡಿಗರನ್ನು ನಕ್ಕು ನಲಿಸಿದ್ದ ರಮೇಶ್ ಅರವಿಂದ್, ಎಸ್. ನಾರಾಯಣ್ ಮತ್ತು ಮೋಹನ್ ಎಂಬ 'ಕೋತಿಗಳು' ಈಗ ಮತ್ತೊಮ್ಮೆ ಒಟ್ಟು ಸೇರಿ 'ಕೋತಿಗಳಾಗಿ' ಪ್ರೇಕ್ಷಕರನ್ನು ರಂಜಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಅಂದು ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಕೋತಿಗಳು ಸಾರ್ ಕೋತಿಗಳು' ಚಿತ್ರದ ಮುಖಾಂತರ ಎಲ್ಲರ ಮನಗೆದ್ದಿದ್ದ ಈ ತ್ರಿಮೂರ್ತಿಗಳು ಈ ಬಾರಿ ಕ್ಯಾಪ್ಟನ್ ಸಿಂಗ್ ಬಾಬು ಅವರನ್ನು ಬಿಟ್ಟು ತಾವು ಮಾತ್ರ ಜೊತೆಗೂಡಿದ್ದಾರೆ. ಬರಲಿರುವ ಚಿತ್ರವನ್ನು ಮೂರು 'ಕೋತಿ'ಗಳಲ್ಲಿ ಒಬ್ಬರಾದ ಎಸ್.ನಾರಾಯಣ್ ನಿರ್ದೇಶಿಸಲಿದ್ದಾರೆ.

ಅಂದಹಾಗೆ 'ಕೋತಿಗಳು ಸಾರ್ ಕೋತಿಗಳು' ಸಿನಿಮಾ ಬಂದಿದ್ದಾಗ ನಾರಾಯಣ್ ಮಾತ್ರ ನಿರ್ದೇಶಕರಾಗಿದ್ದರು. ಆದರೀಗ ಈ ಮೂವರು ನಟರೂ ನಿರ್ದೇಶಕರಾಗಿರುವುದು ವಿಶೇಷ. ಈ ಮೂವರೂ ಈಗ ಹೊಸ ಚಿತ್ರದ ಕಥೆಯನ್ನು ಸೇರಿ ಮಾಡಿ ಮುಗಿಸಿರುವುದೂ ಮತ್ತೊಂದು ವಿಶೇಷವೇ ಸರಿ.

ಈ ಚಿತ್ರಕ್ಕೆ ಯಾವುದೇ ಹೆಸರನ್ನು ಇಟ್ಟಿಲ್ಲ. ಅದ್ದರಿಂದ ಇತ್ತೀಚೆಗೆ ಪ್ರೇಕ್ಷಕರಿಂದಲೇ ಒಳ್ಳೆಯ ಹೆಸರನ್ನು ಚಿತ್ರ ತಂಡ ಆಹ್ವಾನಿಸಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಸುಮಾರು 25 ಸಾವಿರಕ್ಕೂ ಹೆಚ್ಚು ಹೆಸರುಗಳನ್ನು ಜನ ಕಳುಹಿಸಿದ್ದಾರಂತೆ. ಇದರಲ್ಲಿ ಒಂದು ಹೆಸರು ಆಯ್ಕೆಯಾಗಬೇಕಿದೆ.

ಅದೇನೇ ಇರಲಿ, ಹತ್ತು ವರ್ಷಗಳ ಹಿಂದೆ ಪ್ರೇಕ್ಷಕರನ್ನು ರಂಜಿಸಿದ್ದ ಈ ತ್ರಿಮೂರ್ತಿಗಳು ಮತ್ತೊಮ್ಮೆ ಅದೇ ಮ್ಯಾಜಿಕ್‌ನ್ನು ಮಾಡಿ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಬಾರಿಸುತ್ತಾರಾ ನೋಡಬೇಕು.

ದಿಗಂತನ ಆರೈಕೆ ಐಂದ್ರಿತಾಳ ಚೇತ...



"ಇತ್ತೀಚೆಗಷ್ಟೆ ಮಾರಕವಾದ ಡೆಂಗ್ಯೂ ಜ್ವರ ಬಾಲಿವುಡ್‌ನ ಖ್ಯಾತ ನಿರ್ದೇಶಕ ಕಂ ನಿರ್ಮಾಪಕ ಯಶ್ ಚೋಪ್ರಾ ಅವರನ್ನು ಬಲಿ ತೆಗೆದುಕೊಂಡದ್ದು ನಿಮಗೆ ಗೊತ್ತೇ ಇದೆ. ಮೊನ್ನೆ ಕನ್ನಡ ಚಿತ್ರರಂಗದ ಮೋಹಕ ತಾರೆ ಐಂದ್ರಿತಾ ರೈ ಕೂಡ ಡೆಂಗ್ಯೂ ಜ್ವರಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದಾಗ ಇಡೀ ಗಾಂಧಿನಗರ ಆತಂಕಕ್ಕೀಡಾಗಿತ್ತು. "ಈ ಸೊಳ್ಳೆಗಳು ಯಾಕಾದರೂ ನಮ್ಮ ಸಿನಿಮಾ ತಾರೆಯರ ಬೆನ್ನು ಹತ್ತಿದೆವೋ" ಎಂದು ಹಲವರು ಮಾತನಾಡಿಕೊಂಡಿದ್ದರು.

ಆದರೆ ಇದೀಗ ಡೆಂಗ್ಯೂ ಜ್ವರದಿಂದ ಸುಧಾರಿಸಿರುವ ಐಂದ್ರಿತಾ ಆಸ್ಪತ್ರೆಯಿಂದ ವಾಪಾಸ್ ... ಬಂದಿದ್ದಾರೆ. ಆಕೆಯ ಆರೋಗ್ಯ ಸುಧಾರಿಸಿದ ಸುದ್ದಿ ಹೊರಬರು... ಆಕೆಯ ಅಭಿಮಾನಿಗಳಿಗೆ ಸಂತೋಷವಾಗಿದೆ. ಐಂದ್ರಿತಾಳ ಅನಾರೋ... ಸಂದರ್ಭದಲ್ಲಿ ಬಾಯ್‌ಫ್ರೆಂಡ್ ದಿಗಂತ್ ಆಕೆಯ ಆರೈ... ಉಸ್ತುವಾರಿಯನ್ನು ವಹಿಸಿಕೊಂಡಿದ್ದನ್ನು ಗಾಂಧಿನಗರ... ಮೆಚ್ಚಿದ್ದಾರಂತೆ.



'ರಾಧಾಳ ಗಂಡ'
ಕೋಮಲ್
ಪೂರ್ಣ

ಒಂದು ಬೇಸರದ ವಿಷಯ

ಈ ಶುಕ್ರವಾರದಂದು ಒಟ್ಟು ಐದು ಕನ್ನಡ ಚಿತ್ರಗಳು ಬಿಡುಗಡೆಯಾಗುತ್ತಿವೆ. ಈ ಐದೂ ಚಿತ್ರಗಳ ಬಗ್ಗೆ ಯಾರಲ್ಲೂ ಅಂತಹ ದೊಡ್ಡ ನಿರೀಕ್ಷೆಗಳು ಇಲ್ಲ. ಬಿಡುಗಡೆ ಆಗುತ್ತಿರುವ 'ಹೊಸ ಪ್ರೇಮ ಪುರಾಣ', 'ಆಶಾಕಿರಣ', 'ಸಂಸಾರದಲ್ಲಿ ಗೋಲ್‌ಮಾಲ್', 'ಚೌಡೇಶ್ವರಿ ಮಹಿಮೆ' ಮತ್ತು 'ಒಲವಿನ ಓಲೆ' ಚಿತ್ರಗಳು ಅದ್ದೂರಿಯ ಚಿತ್ರಗಳು ಅಲ್ಲದಿದ್ದರೂ ಪ್ರತಿಯೊಂದು ಚಿತ್ರಕ್ಕೂ ಲಕ್ಷಾಂತರ ರೂಪಾಯಿಗಳನ್ನು ಸುರಿಯಲಾಗಿದೆ. ಆದ್ದರಿಂದ ಇವುಗಳು ವಾರಕ್ಕೊಂದರಂತೆ ಬಿಡುಗಡೆಯಾಗಿದ್ದರೆ ಅವುಗಳ ನಿರ್ಮಾಪಕರಿಗೆ ಸ್ವಲ್ಪವಾದರೂ ಪ್ರಯೋಜನವಾಗುತ್ತಿತ್ತೋ ಏನೋ? ಆದರೆ ಈಗ ಐದೂ ಚಿತ್ರಗಳು ಒಟ್ಟಿಗೆ ಬಿಡುಗಡೆಯಾಗಿ, ಪರಸ್ಪರ ಪೈಪೋಟಿ ಕೊಟ್ಟು ಬಾಕ್ಸ್ ಆಫೀಸಿನಲ್ಲಿ ಹಣ ಗಳಿಸುವುದು ಕಷ್ಟವಾಗಿದೆ.

ಅಂದಹಾಗೆ, ಈ ಐದು ಚಿತ್ರಗಳು ಹೀಗೆ ಒಟ್ಟೊಟ್ಟಿಗೆ ಬಿಡುಗಡೆ ಆಗುತ್ತಿರುವುದಕ್ಕೆ ಕಾರಣ ಬರಲಿರುವ ದೊಡ್ಡ ಚಿತ್ರಗಳ ಬಗೆಗಿನ ಭಯ. ಯಾಕೆಂದರೆ ಡಿಸೆಂಬರ್ ತಿಂಗಳಲ್ಲಿ ನಾಲ್ಕೈದು ದೊಡ್ಡ ಚಿತ್ರಗಳು ಬಿಡುಗಡೆ ಆಗುವುದು ಖಚಿತವಾಗಿದೆ. ಉದಾಹರಣೆಗೆ ಪುನೀತ್ ರಾಜ್‌ಕುಮಾರ್ ನಟಿಸಿರುವ 'ಯಾರೇ ಕೂಗಾಡಲಿ', ಸುದೀಪ್ ನಟಿಸಿರುವ 'ವರದನಾಯಕ', ಮಾಲಾಶ್ರೀ ನಟಿಸಿರುವ 'ವೀರ', ಶಿವರಾಜ್‌ಕುಮಾರ್ ನಟಿಸಿರುವ 'ಲಕ್ಕಿ' ಈ ಚಿತ್ರಗಳು ವಾರಕ್ಕೊಂದರಂತೆ ಬಿಡುಗಡೆಯಾಗುತ್ತಿವೆ. ಈ ದೊಡ್ಡ ಚಿತ್ರಗಳ ಭರಾಟೆ ನಡುವೆ ಸಿಕ್ಕಿಬೀಳುವ ಬದಲು ಈಗಲೇ ಬಿಡುಗಡೆಯಾದರೆ ಒಳ್ಳೆಯದು ಎಂಬುದು ಈ ಸಣ್ಣ ಚಿತ್ರ ನಿರ್ಮಾಪಕರ ಅನಿಸಿಕೆಯಂತೆ.


ಇದೆಲ್ಲ ನೋಡಿದರೆ ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗಳೇ ಶತ್ರುವಾಗುತ್ತಿರುವುದು ಬೇಸರ ಮೂಡಿಸುತ್ತದೆ.

'ರಾಧಿಕಾ'ಳ ಗಂಡ 'ರಾಧಾ'ಳ ಗಂಡ ಆಗಿದ್ದು ಯಾಕೆ?

'ರಾಧಿಕಾಳ ಗಂಡ' ಎಂಬ ಚಿತ್ರದಲ್ಲಿ ಕೋ... ನಾಯಕನಾಗಿ ನಟಿಸಿದ್ದು ನಿಮಗೆ ಗೊತ್ತೇ ಇದೆ. ... ಸಂಪೂರ್ಣವಾಗಿದ್ದರೂ ಅದರ ಬಿಡುಗಡೆಗೆ ಅದ... ಅಡ್ಡಿಯಾಗಿತ್ತು. ಅದಕ್ಕೆ ಕಾರಣ ಇದೇ ಹೆಸರು ತ... ಬೇಕೆಂದು ಕೋಮಲ್ ಹಟ ಹಿಡಿದು ಕುಳಿತುಕೊ... ಆದರೀಗ ಕೋಮಲ್ ತನ್ನ ನಿಲ... ಸಡಿಲಿಸಿಕೊಂಡಿರುವುದರಿಂದ ಚಿತ್ರದ ಹೆಸರು ... ಗಂಡ' ಬದಲಾಗಿ 'ರಾಧಾಳ ಗಂಡ' ... ಮರುನಾಮಕರಣಗೊಂಡಿದೆ.

ಬದಲಾದ ಚಿತ್ರದ ಹೆಸರನ್ನು ಪ್ರೇಕ್ಷಕರು ಮತ್... ಹಂಚಿಕೆದಾರರು ಹೇಗೆ ಸ್ವಾಗತಿಸುತ್ತಾರೋ ಗೊ... ಚಿತ್ರದ ಮೊದಲ ಹೆಸರಿಗೆ ಯಾರು ಅಡ್ಡಿ ... ಎಂಬುದನ್ನು ಮಾತ್ರ ಕೋಮಲ್ ಈತನಕ ಬಾಂ... ಹೇಳಿಲ್ಲ.

ಚಿತ್ರ ನಿರ್ಮಾಣಕ್ಕೆ ರಮ್...



ಹತ್ತು ವರ್ಷಗಳಿಂದ ನಾಯಕಿಯಾಗಿ ಕನ್ನಡ ಚಿತ್ರರಂಗದಲ್ಲಿ ಮೆರೆಯುತ್ತ ನಂ.1 ಸ್ಥಾನವನ್ನು ಅಲಂಕರಿಸಿರುವ ರಮ್ಯಾ ಮುಂದಿನ ವರ್ಷ ಹೊಸ ಅವತಾರದಲ್ಲಿ ಗಾಂಧಿನಗರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಸಿನಿಮಾರಂಗದ ಜೊತೆಜೊತೆಗೆ ಕ್ರಿಕೆಟ್ ಅಂಬ್ಯಾಸಿಡರ್, ರಾಜಕಾರಣಿ ಮತ್ತು ಸಮಾಜ ಸೇವಕಿಯ ರೂಪಗಳಲ್ಲಿ ಕಾಣಿಸಿಕೊಂಡಿರುವ ರಮ್ಯಾ ತನ್ನ ಅಭಿರುಚಿಗೆ ತಕ್ಕಂತಹ ಒಂದು ಒಳ್ಳೆಯ ಸಿನಿಮಾವನ್ನು ಯಾಕೆ ನಿರ್ಮಿಸಬಾರದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ರಮ್ಯಾ ನಿರ್ಮಿಸಲಿರುವ ಚಿತ್ರ ಕಮರ್ಷಿಯಲ್ ಧಾಟಿಯಲ್ಲಿ ಇರುತ್ತದೆಯೋ, ಅಥವಾ ಕಲಾತ್ಮಕ ಮಾದರಿಯಲ್ಲಿ ಇರುತ್ತದೆಯೋ ಎಂಬುದು ಮಾತ್ರ ಗೊತ್ತಿಲ್ಲ.

ಆದರೆ ರಮ್ಯಾಳ ಅಂತರಂಗವನ್ನು ಅತಿ ಹತ್ತಿರದಿಂದ ಬಲ್ಲವರು ಹೇಳುವಪ್ರಕಾರ ಈ ಚಿತ್ರ ರಾಷ್ಟ್... ಪ್ರಶಸ್ತಿಯನ್ನು ಪಡೆಯುವಂತಹ ಕಥಾವಸ್ತುವನ್ನು ಹೊಂದಿದೆಯಂತೆ. ಈ ಹಿಂದೆ ಜಯಮಾಲಾ... ಸೌಂದರ್ಯ ಮೊದಲಾದ ನಾಯಕಿಯರು ಅನೇಕ ವರ್ಷಗಳ ಕಾಲ ಕಮರ್ಷಿಯಲ್ ಸಿ... ನಾಯಕಿಯರಾಗಿ ನಟಿಸಿ ಬೋರ್ ಆದಾಗ ತಾವೇ ಚಿತ್ರ ನಿರ್ಮಿಸಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊ... ಪಡೆದಿದ್ದರು. ಬಹುಶಃ ರಮ್ಯಾ ಕೂಡ ಅದೇ ಸಾಲಿಗೆ ಸೇರುವ ಲಕ್ಷಣಗಳು ಕಾಣಿಸುತ್ತಿವೆ. ಅಂದರೆ ನಟಿ... ಕಮರ್ಷಿಯಲ್ ಸಿನಿಮಾಗಳಲ್ಲಿ ಆತ್ಮತೃಪ್ತಿ ಸಿಗದಿದ್ದಾಗ ಇಂತಹ ಹಾದಿ ಹಿಡಿಯುವುದು ಅ... ಎಂಬಂತಾಗಿದೆ. ಅಂದಹಾಗೆ ರಮ್ಯಾ ನಿರ್ಮಾಣದ ಮೊದಲ ಚಿತ್ರವನ್ನು "ಸಿದ್ಲಿಂಗು" ಖ್ಯಾತಿಯ ವಿಜ... ನಿರ್ದೇಶಿಸಲಿದ್ದಾರಂತೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com